ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

14 ಡಿಸೆಂಬರ್ 2016 ಪುಟ 16 ರೂ. 15/-

ಅಂಬೇಡ್ಕರ್ ಹೇಳಿದ್ದು ಖಾಸಗಿ ಒಡೆತನ ರದ್ದತಿ

ಚಿತ್ತಲಾದ ಬಿಜೆಪಿ ಬಯಲಾದ ರಹಸ್ಯ





ಕ್ರಾಂತಿಕಾರಿ ಕ್ಯಾಸ್ಟ್ರೋ

ಮಳೆ ಹುಡುಗಿ ಬಾಳಲ್ಲಿ ಮತ್ತೆ ಮುಂಗಾರು






ಮಂಡ್ಯ ಜಡೇಜಾ ರವಿ ಹಂತಕರ ಶಿಕ್ಷೆ ರದ್ದು



ಉಡುಪಿ ಶೆಟ್ಟಿ ಪತ್ನಿಯ ಪಲ್ಲಂಗ ಪುರಾಣ

ವಿಶೇಷ ಲೇಖನ

ಕ್ರಾಂತಿಕಾರಿ ಕ್ಯಾಸ್ಟ್ರೋ



ಇಂದು ವಿಶ್ವದೆಲ್ಲೆಡೆಯಲ್ಲಿ ಫಿಡೆಲ್ ಕ್ಯಾಸ್ಟ್ರೋ ಗುಣಗಾನ. ಪತ್ರಿಕೆಗಳಲ್ಲಿ ಹಲವು ಪುಟಗಟ್ಟಲೆ ಬರಹಗಳು. ಮಾಧ್ಯಮಗಳಲ್ಲಿ ವಿಶೇಷ ವರದಿಗಳು. ಕೋಟ್ಯಾಂತರ ಜನರಿಂದ ಆತ್ಮೀಯ ನೆನಕೆಗಳು. ಜಗತ್ತಿನ ಸಾರ್ವಭೌಮನೆಂದುಕೊಂಡಿರುವ, ಫಿಡೆಲ್ ಕ್ಯಾಸ್ಟ್ರೋರವರನ್ನು ಈ ಲೋಕದಿಂದಲೇ ಇಲ್ಲವಾಗಿಸಲು 650ಕ್ಕಿಂತ ಹೆಚ್ಚು ಕೊಲೆ ಪ್ರಯತ್ನಗಳಿಗೆ ಕಾರಣವಾದ ಅಮೆರಿಕದ ಯಾವ ಅಧ್ಯಕ್ಷನಿಗಾದರೂ ಇಂತಹ ಗೌರವದ ದಶಮಾಂಶವಾದರೂ ಪ್ರಾಪ್ತಿಯಾಗಿದೆಯೇ? ಕೇವಲ ಒಂದು ಕೋಟಿಯಷ್ಟು ಜನರ, ಬೆಂಗಳೂರಿನಷ್ಟು ಜನರು ಮಾತ್ರವೇ ಇರುವ ಕ್ಯೂಬಾದ ಈ ನಾಯಕ ಕೋಟ್ಯಾಂತರ ಜನಮನದಲ್ಲಿ ಇಷ್ಟೊಂದು ಆಳವಾಗಿ ಬೇರುಬಿಟ್ಟದ್ದು ಹೇಗೆ? ಏಳು ನೂರು ಕೋಟಿಗಳ ಮಾನವ ಸಮುದಾಯದಲ್ಲಿ ಆಯಾ ಕಾಲ, ದೇಶಗಳಿಗೆ ತಕ್ಕಂತೆ ಉದಿಸಿದ ಸಾವಿರಾರು ನಾಯಕರುಗಳ ನಡುವೆ ಜಗತ್ತನ್ನೇ ಬೆರಗುಗೊಳಿಸಿದ ಮೇರುಪರ್ವತವಾಗಿ ಬೆಳೆದದ್ದು ಹೇಗೆ? ಇವು ಇಂದು ವಿಶ್ವದಾದ್ಯಂತ ಕಾಡುತ್ತಿರುವ ಪ್ರಶ್ನೆಗಳು.

ಎರಡನೆ ಮಹಾಯುದ್ಧದ ನಂತರ ಜಗತ್ತಿನ ಅತ್ಯಂತ ಬಲಾಢ್ಯ ದೇಶವಾಗಿ ಹೊರಹೊಮ್ಮಿದ ಅಮೆರಿಕಕ್ಕೆ ಚಳ್ಳೆಹಣ್ಣು ತಿನ್ನಿಸಿ ಅದರ ಮೂಗಿನ ಕೆಳಗೇ ಸಮಾಜವಾದೀ ಕ್ರಾಂತಿಗೆ ನಾಯಕತ್ವ ನೀಡಿ ಯಶಸ್ವಿಗೊಳಿಸಿದ ಫಿಡೆಲ್ ಕ್ಯಾಸ್ಟ್ರೋರವರ ಚಾಣಾಕ್ಷತನ ಮತ್ತು ಎಣೆಯಿಲ್ಲದ ದಿಟ್ಟತನ ಇದಕ್ಕೆ ಒಂದು ಮುಖ್ಯ ಕಾರಣ. ನಂತರ ಕ್ಯೂಬನ್ ಕ್ರಾಂತಿಯನ್ನು ಹೊಸಕಿಹಾಕುವ ಅಸಂಖ್ಯ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ದಾಳಿಗಳು ಮತ್ತು ಆರ್ಥಿಕ ದಿಗ್ಬಂಧನಗಳನ್ನು ಎದುರಿಸಿ ಅಮೆರಿಕಕ್ಕೆ ಏಟಿಗೆ ಎದಿರೇಟು ಕೊಡುತ್ತಾ ಸೆಡ್ಡು ಹೊಡೆದದ್ದು ಜಗತ್ತಿನ ಜನರ ಮನಸ್ಸನ್ನು ಸೆಳೆಯಿತು. ಸೋವಿಯತ್ ರಷ್ಯಾದ ವಿಘಟನೆಯೊಂದಿಗೆ ಯೂರೋಪಿನ ಹಲವು ಸಮಾಜವಾದಿಗಳು ಉರುಳಿಬಿದ್ದರೂ ಕ್ಯೂಬಾ ಸಮಾಜವಾದದ ಧ್ರುವ ನಕ್ಷತ್ರವಾಗಿ ಉಳಿದುಕೊಂಡದ್ದು ಮತ್ತು ನಂತರ ಸಮಾಜವಾದ ಸತ್ತೇ ಹೋಯಿತು ಎಂದು ಅಮೆರಿಕ ವಿಜೃಂಭಿಸುತ್ತಿರುವಾಗ ಎರಗಿದ ಸಂಕಟಗಳ ಸುರಿಮಳೆಗೆ ಇಡೀ ಕ್ಯೂಬಾದ ಜನತೆ ಸಮಾಜವಾದ ಅಥವಾ ಮೃತ್ಯು ಎಂದು ಎದೆಯೊಡ್ಡಿ ನಿಲ್ಲಲು ಕ್ಯಾಸ್ಟ್ರೋ ನೀಡಿದ ಅಪಾರ ಚೈತನ್ಯ, ಜಗತ್ತಿನ ಹಲವಾರು ದೇಶಗಳ ಅಧ್ಯಕ್ಷರುಗಳು, ಪ್ರಧಾನಿಗಳನ್ನು, ಇತರ ನಾಯಕರುಗಳನ್ನು ನುಂಗಿ ನೀರು ಕುಡಿದ ಅಮೆರಿಕಾ ಅವರನ್ನು ಕೊಲ್ಲಲು ನಡೆಸಿದ 650ಕ್ಕಿಂತ ಹೆಚ್ಚಿನ, ತೆರತರನ ಕ್ರೂರ ಪ್ರಯತ್ನಗಳನ್ನೂ ಜಯಿಸಿ ಸಹಜ ಸಾವನ್ನಪ್ಪಿದ್ದು, ಹೀಗೆ ಒಂದೊಂದು ವಿಷಮಘಟ್ಟವನ್ನೂ ದಾಟುವಲ್ಲಿ ಕ್ಯೂಬಾವನ್ನು ಮುನ್ನಡೆಸಿದ್ದು ಆಧುನಿಕ ಜಗತ್ತಿನ ಪವಾಡದಂತೆ ಕಂಡಿವೆ. ದಂತಕಥೆಗಳಾಗಿ ಹಬ್ಬಿವೆ.

ಈ ಎಲ್ಲಾ ಅಪೂರ್ವ ಸಾಧನೆಗಳು ಕ್ಯಾಸ್ಟ್ರೋರವರೂ ಸೇರಿದಂತೆ ಕ್ಯೂಬಾದ ಕ್ರಾಂತಿಯ ನೇತಾರರಾದ ಚೆಗೆವಾರ, ರಾವುಲ್ ಕ್ಯಾಸ್ಟ್ರೋ ಮೊದಲಾದ ಅನೇಕರು ಮತ್ತು ಒಟ್ಟಾರೆ ಕ್ಯೂಬಾದ ದುಡಿಯುವ ಜನತೆಯ ಸಾಧನೆಗಳು ಎಂಬುದರಲ್ಲಿ ಸಂಶಯವಿಲ್ಲ, ಏಕೆಂದರೆ ಈ ಸಾಧನೆಗಳಿಗೆ ಅವರೆಲ್ಲರ ಅಪಾರ ಶ್ರಮ, ಆ ಸಂಕಟಗಳನ್ನು ಎದುರಿಸಿದ ದೃಢತೆ ಕಾರಣ. ಆದರೆ ಈ ಎಲ್ಲದರಲ್ಲಿ ಫಿಡಲ್ ಕ್ಯಾಸ್ಟ್ರೋರವರ ಪಾತ್ರ ಗಿರಿಗಳ ಸಾಲಿನಲ್ಲಿ ಎವರೆಸ್ಟ್‌ನಂತೆ ಎದ್ದು ನಿಲ್ಲುತ್ತದೆ.

ಈ ಬಗ್ಗೆ ಕ್ಯೂಬಾದ ಕ್ರಾಂತಿಯ ಅನೇಕ ನೇತಾರರು ಪ್ರಾಮಾಣಿಕವಾಗಿ ನಮೂದಿಸಿದ್ದಾರೆ ಮತ್ತು ಜಗತ್ತಿನ ಕ್ರಾಂತಿಗಳ ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು ವಿಶ್ಲೇಷಿಸಿದ್ದಾರೆ. ಅವುಗಳ ಶಿಖರವೆಂದರೆ ವಿಶ್ವ ಕ್ರಾಂತಿಗೆ ತನ್ನನ್ನು ಅರ್ಪಿಸಿಕೊಂಡು ತನ್ನದಲ್ಲದ ದೇಶಗಳ ಜನತೆಯನ್ನು ಅಪ್ಪಿಕೊಂಡು ಆ ಜನತೆಯ ವಿಮೋಚನೆಗಾಗಿ ದುಡಿಯುತ್ತಾ ಹುತಾತ್ಮರಾಗಿ ಕ್ಯಾಸ್ಟ್ರೋರವರಿಗಿಂತಲೂ ಹೆಚ್ಚು ಜನಪ್ರಿಯರಾದ ಚೆಗೆವಾರ, ಕ್ಯಾಸ್ಟ್ರೋರವರ ಅತ್ಯಂತ ಆತ್ಮೀಯ ಮತ್ತು ಅವರನ್ನು ತನ್ನ ದಂಡನಾಯಕರೆಂದು ಮನಃಪೂರ್ವಕವಾಗಿ ಒಪ್ಪಿಕೊಂಡು ಅನುಸರಿಸಿದ ಚೆಗೆವಾರರ ಮಾತುಗಳು. ಈ ಕೆಳಗಿನ ಮಾತುಗಳು ಚೆ ಮಾಡಿದ ಯಾವುದೋ ಒಂದು ಭಾಷಣದಲ್ಲಿ ಆ ಕ್ಷಣದಲ್ಲಿ ಮೂಡಿದ ವಾಗ್ಝರಿಯಲ್ಲ ಬದಲಾಗಿ ಜಗತ್ತಿನ ಮಾರ್ಕ್ಸ್‌ವಾದಿ ಪತ್ರಿಕೆ ಮಂತ್ಲೀರಿವ್ಯೂಗಾಗಿ ಮಾಡಿದ ಕ್ಯೂಬನ್ ಕ್ರಾಂತಿಯ ಸೈದ್ಧಾಂತಿಕ ವಿಶ್ಲೇಷಣೆಯಲ್ಲಿ.

"ಕ್ರಾಂತಿಕಾರೀ ಪ್ರಕ್ರಿಯೆ ಸಮಾಜಗಳು ತಪ್ಪಿಸಿಕೊಳ್ಳಲಾಗದಂತಹ ಕೆಲವು ನಿಯಮಗಳಿಗೆ ಅನುಸಾರವಾಗಿಯೇ ನಡೆಯುತ್ತದೆ ಎಂಬುದು ಈಗಾಗಲೇ ಸ್ಥಾಪಿತವಾದ ವಿಷಯ. ಹಾಗೆಯೇ ಪ್ರತಿ ಕ್ರಾಂತಿಗೂ ತನ್ನದೇ ಆದ ವಿಶೇಷ ಅಂಶಗಳೂ ಇರುತ್ತವೆ. ಕ್ಯೂಬಾದ ಕ್ರಾಂತಿಗೂ ತನ್ನದೇ ಚಹರೆ ನೀಡಿದಂತಹ ವಿಶಿಷ್ಟ ಗುಣ ವಿಶೇಷಗಳಿವೆ.

ಅದರಲ್ಲಿ ಮೊದಲನೆಯದು ನವನೂತನವಾದದ್ದು ಹಾಗೂ ಬಹುಮಟ್ಟಿಗೆ ಬಹುಮುಖ್ಯವಾದುದು ಕೆಲವೇ ವರ್ಷಗಳಲ್ಲಿ ಇತಿಹಾಸದ ಆಯಾಮಗಳನ್ನು ಸೃಷ್ಟಿಸಿದ ಫಿಡೆಲ್



ಕ್ಯಾಸ್ಟ್ರೋ ಎಂಬ ಭೂಮಿಯನ್ನೇ ನಡುಗಿಸುವ ಶಕ್ತಿ, ಅವರು ಭಾಗವಹಿಸಿದ ಯಾವುದೇ ಚಳವಳಿಯ ನಾಯಕತ್ವವನ್ನು ವಹಿಸಿಕೊಳ್ಳುವಂತಹ ನಿಸ್ಸೀಮ ವ್ಯಕ್ತಿತ್ವ. ಈ ನಾಯಕತ್ವದ ಗುಣಗಳಲ್ಲಿ ದಿಟ್ಟ, ಶಕ್ತಿಯುತ ವ್ಯಕ್ತಿತ್ವ, ಮುನ್ನುಗ್ಗುವ ಗುಣಗಳು ಸೇರಿವೆ. ಅವುಗಳೊಡನೆ ಜನರ ಮನಸ್ಸನ್ನು ತಿಳಿದುಕೊಳ್ಳುವ ಬಗ್ಗೆ ಅವರ ಅಸಾಧಾರಣ ಕಾತರ, ಜನರ ಬಗೆಗಿನ ಅಪಾರ ಪ್ರೀತಿಯೂ ಕೂಡ.

ಕ್ರಾಂತಿಯನ್ನು ಮುನ್ನಡೆಸಲು ಅಪಾರ ಕಾಣಿಕೆ ನೀಡಿದ ಗುಣಗಳೆಂದರೆ ವಿವರಗಳಿಗೆ ಗಮನ ಕೊಡುತ್ತಲೇ ಒಂದು ಸನ್ನಿವೇಶವನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಬೇಕಾದ ಕಲಿಕೆ ಮತ್ತು ಅನುಭವಗಳನ್ನು ಅರಗಿಸಿಕೊಳ್ಳುವ ಶಕ್ತಿ, ಮುಂದೆ ನಡೆಯುವ ಘಟನೆಗಳನ್ನು ಊಹಿಸುವ ಮತ್ತು ಅವುಗಳಿಗೆ ಮೊದಲೇ ಕ್ರಿಯಾಶೀಲನಾಗುವ ದಿಸೆಯಲ್ಲಿ ತಮ್ಮ ಜೊತೆಗಾರರೆಲ್ಲರಿಗಿಂತಲೂ ಹೆಚ್ಚಿನ ದೂರದರ್ಶಿತ್ವ ಮತ್ತು ಸ್ಪಷ್ಟತೆ: ಭವಿಷ್ಯದ ಬಗ್ಗೆ ಅಪಾರ ಭರವಸೆ.

ಈ ಶ್ರೇಷ್ಠ ಗುಣಗಳ ಜೊತೆಗೆ ಜನರನ್ನು ಒಗ್ಗೂಡಿಸುವ ಮತ್ತು ಅವರ ನಡುವೆ ವಿಭಜನೆ ತರುವುದನ್ನು ದೃಢವಾಗಿ ವಿರೋಧಿಸುವ ಗುಣ."

ಕ್ರಾಂತಿಯ ಮತ್ತು ನಂತರದ ಕಾಲಘಟ್ಟಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿದ ಚೆ ರವರ ಈ ಮಾತುಗಳು ಕ್ಯಾಸ್ಟ್ರೋರವರ ಉನ್ನತ ವ್ಯಕ್ತಿತ್ವವನ್ನು ಮತ್ತು ಕ್ರಾಂತಿ ಮತ್ತು ನಂತರದ ಅಪಾಯಗಳನ್ನು ಎದುರಿಸುವುದಕ್ಕೆ ಅವರ ಕೊಡುಗೆಯನ್ನು ಬೆಳಗಿ ತೋರಿಸಿವೆ.

ಆದರೆ ಇವು ಕೇವಲ ಮುಖ್ಯ ಗುಣಗಳಷ್ಟೇ ಹೊರತು ಅವರ ಗುಣಗಳನ್ನೆಲ್ಲಾ ಬಿಂಬಿಸುವುದಿಲ್ಲ. ಕ್ರಾಂತಿಕಾರಿಗಳ ಅತ್ಯಂತ ಮುಖ್ಯ ಅವಶ್ಯಕತೆಯಾದ ಸರಳತೆ ಮತ್ತು ನಿಸ್ವಾರ್ಥತೆ. ಇಡೀ ಜೀವನದಲ್ಲಿ ಎಲ್ಲಿ ಹೋದರೂ ವಿಶೇಷ ಸೌಲಭ್ಯಗಳನ್ನು ಬಯಸದೆ ಎಲ್ಲೆಂದರಲ್ಲಿ ಜೀವಿಸುವ ಗುಣ. ಇಡೀ ಜೀವನ ತಾನು ಯುದ್ಧ ಭೂಮಿಯಲ್ಲಿದ್ದೇನೆಂದೇ ತಿಳಿದು ಎಲ್ಲ ಕಷ್ಟಗಳನ್ನು ಜೀವನದ ಅವಿಭಾಜ್ಯ ಅಂಗವಾಗಿ ಮಾಡಿಕೊಂಡದ್ದು; ಭೂಸುಧಾರಣೆಯಲ್ಲಿ ತಮ್ಮದೇ ಕುಟುಂಬದ ಆಸ್ತಿಯನ್ನು ಅದರಲ್ಲಿ ದುಡಿಯುತ್ತಿದ್ದ ರೈತರಿಗೆ, ಕೂಲಿಕಾರರಿಗೆ ಹಂಚಿಬಿಟ್ಟ ಮತ್ತು ಬಂಧುಪ್ರೇಮವನ್ನು ಒಂದುಕ್ಷಣವೂ ತೋರಿಸದ ಅಪೂರ್ವತೆ. ತನ್ನ ಜೀವನದ ತತ್ವಗಳಿಗನುಗುಣವಾಗಿ ಭ್ರಷ್ಟ ಸರ್ಕಾರಗಳ ಕೊಡಮಾಡುವ ಅನುಕೂಲಗಳನ್ನು ತಿರಸ್ಕರಿಸದ ಹೆಂಡತಿಯನ್ನೂ ದೂರಮಾಡಿಕೊಳ್ಳುವ ಅನಿವಾರ್ಯತೆಗೊಳಗಾದ ತತ್ವನಿಷ್ಠೆ.

ಕ್ರಾಂತಿಯ ತರುಣದಲ್ಲಿ ಮತ್ತು ಇಲ್ಲಿಯವರೆಗೆ ಅದು ಎದುರಿಸಬೇಕಾದ ಪ್ರತಿ ಕ್ರಾಂತಿಕಾರೀ ಶಕ್ತಿಗಳು ಹಲವಾರು. ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ಎಸಗಿದ ಕ್ರೂರಕೃತ್ಯಗಳು, ಬಳಸಿದ ವಿಧಾನಗಳು, ಸಾಧನಗಳು ಒಂದೇ ಎರಡೇ. ಕ್ಯೂಬನ್ನರನ್ನೆ ಬಳಸಿದ ಬಾಂಬ್ ದಾಳಿಗಳು, ಅಮೆರಿಕದ ಸೈನ್ಯದ ನೇರ ದಾಳಿ, ಸರ್ಕಾರದಲ್ಲಿದ್ದ ಕ್ಯೂಬನ್ನರನ್ನು ಭ್ರಷ್ಟಗೊಳಿಸುವ ನಿರಂತರ ಪ್ರಯತ್ನ, ರೇಡಿಯೋ ಮತ್ತು ಟಿವಿಗಳು, ಪತ್ರಿಕೆಗಳು ಈಗ ಸಾಮಾಜಿಕ ಜಾಲತಾಣಗಳನ್ನು ಬಳಸಿ ಕ್ಯೂಬನ್ ಜನತೆಯಲ್ಲಿ ಕ್ರಾಂತಿಯಲ್ಲಿ ಅಪನಂಬಿಕೆ ಬಿತ್ತುವ ಪ್ರಯತ್ನ, ದಕ್ಷಿಣ ಅಮೆರಿಕದ ಇತರ ಬಾಲಂಗೋಚಿ ಸರ್ಕಾರಗಳನ್ನು ಬಳಸಿ ನೀಡಿದ ತೊಂದರೆಗಳು, ಕ್ಯೂಬಾದಲ್ಲಿಯೇ ಹಿಂದಿನ ಶೋಷಕ ಶಕ್ತಿಗಳ ಒಳಸಂಚುಗಳು ಮತ್ತು ಚರ್ಚ್‌ನ ಪಾತ್ರ. ಹೀಗೆ ಎಲ್ಲಾ ಕ್ರಾಂತಿಗಳೂ ಎದುರಿಸಬೇಕಾದ ಸಮಸ್ಯೆಗಳ ಜೊತೆಗೆ ಅಮೆರಿಕದ ಸಾಮೀಪ್ಯ ಮತ್ತು ಕ್ರಾಂತಿಗೆ ಮೊದಲು ಕ್ಯೂಬಾದ ಮೇಲಿದ್ದ ಅದರ ಕಪಿಮುಷ್ಠಿ ಇವುಗಳನ್ನು ಎದುರಿಸುವಲ್ಲಿ ಕ್ಯಾಸ್ಟ್ರೋ ಅವರ ನಾಯಕತ್ವ ಮತ್ತು ಮುಂಗಾಣ್ಕೆ ಬಹುದೊಡ್ಡ ಪಾತ್ರ ವಹಿಸಿದೆ.

ನಿರಂತರ ಅಮೆರಿಕದ ಬದ್ಧ ಕಮ್ಯೂನಿಸ್ಟ್ ವಿರೋಧವನ್ನು ಎದುರಿಸಲು ಅದರೆಲ್ಲಾ ಗುಪ್ತಚರ ಮತ್ತು ಆಡಳಿತ ಯಂತ್ರಕ್ಕೆ ನಾಲ್ಕು ವರ್ಷಗಳಿಗೂ ಮಿಗಿಲಾಗಿ ದಾರಿ ತಪ್ಪಿಸಿದ ಚಾಣಾಕ್ಷತೆ. ಆ ಸಮಯವನ್ನು ಬಳಸಿಕೊಂಡು ಕ್ರಾಂತಿಯನ್ನು ಗಟ್ಟಿಗೊಳಿಸಿದ್ದು; ಅಮೆರಿಕದ ಪ್ರತಿ ಏಟಿಗೆ ಎದಿರೇಟು ನೀಡುತ್ತಾ ಹೆಜ್ಜೆಹೆಜ್ಜೆಗೂ ಕಾರ್ಯತಂತ್ರಗಳನ್ನು ಹೆಣೆಯುತ್ತಾ ಅವರನ್ನು ಮಣಿಸಿದ್ದು; ಸೋವಿಯತ್ ರಷ್ಯಾದ ಬೆಂಬಲದ ಮೇಲೆ ಅವಲಂಬಿಸಿದ್ದರೂ ಅವರನ್ನು ಹಿಂಜರಿಯದೆ ಟೀಕೆಗೆ ಗುರಿಮಾಡಿದ್ದು; ಒಂದು ದಿನವೂ ಉದಾಸೀನ ಮಾಡದೆ ಎದುರಾದ ಪ್ರತಿ ಸಂದರ್ಭವನ್ನೂ ಜನರಿಗೆ ರಾಜಕೀಯ ಮತ್ತು ಸೈದ್ಧಾಂತಿಕ ಶಿಕ್ಷಣ ನೀಡುತ್ತಾ ಅವರ ಪ್ರಜ್ಞೆಯನ್ನು ವಿಶ್ವ ವಿಶಾಲವಾಗಿ ಬೆಳೆಸಿದ್ದು; ಅದರ ಫಲವಾಗಿ ವಿಶ್ವದ ಅನೇಕ ದೇಶಗಳಲ್ಲಿ ಕ್ಯೂಬದ 25,000ಕ್ಕೂ ಹೆಚ್ಚು ವೈದ್ಯರು ಅಪಾಯಕಾರೀ ಸಂದರ್ಭಗಳನ್ನೂ ಲೆಕ್ಕಿಸದೆ ಸೇವೆ ಸಲ್ಲಿಸಿದ್ದು; ಒಂದು ಸಣ್ಣ ದೇಶವಾದರೂ ರಷ್ಯಾ ಚೀನಾದಂತಹ ದೊಡ್ಡ ಸಮಾಜವಾದಿ ದೇಶಗಳನ್ನೂ ಮೀರಿಸುವಂತೆ ಅಂಗೋಲಾ, ಮೊಜಾಂಬಿಕ್ ಮತ್ತು ದಕ್ಷಿಣ ಆಫ್ರಿಕಾದ ಅಪಾರ್ಥೀಡ್ ಎಂಬ ಕ್ರೂರ ಜನಾಂಗ ಭೇದವನ್ನು ಎದುರಿಸಲು ಲಕ್ಷಗಟ್ಟಲೆ ಕ್ಯೂಬನ್ ಜನರು ಸ್ವಯಂಪ್ರೇರಿತರಾಗಿ ಸೈನಿಕರಾಗಿ ಮಡಿಯಲು ಸಿದ್ಧರಾಗುವಂತೆ ಮಾಡಿದ್ದು ಹೀ[illegible] ಉದಾಹರಣೆಗಳನ್ನು ನೀಡಬಹುದು.

ಅಮೆರಿಕದ ಸಾಮ್ರಾಜ್ಯಶಾಹಿಯ ವಿರು[illegible] ಈ ಕ್ರಾಂತಿಕಾರೀ ಪಾತ್ರ ಅಮೆರಿಕ ದೇಶ [illegible] ಎಂದು ಪರಿಗಣಿಸಿದ ಪೂರ್ವಾರ್ಧ ಗೋ[illegible] ದೇಶಗಳ ಶೋಷಿತ ಜನರಲ್ಲಿ ವಿಶ್ವಾಸವನ್ನು [illegible] ಸ್ಥೈರ್ಯವನ್ನು ತಂದುಕೊಟ್ಟಿತು. ಆಯಾ ದೇಶಗ[illegible] ಮೊದಲಾದ ಆಡಳಿತಗಾರರಿಗಿಂತ ಹಲವು ಪ[illegible] ಕ್ಯಾಸ್ಟ್ರೋರವರ ಜನಪ್ರಿಯತೆ ಅವರ ಹೋರಾ[illegible] ಮಾರ್ಕ್ಸ್‌ವಾದೀ ಸೈದ್ಧಾಂತಿಕ ಸ್ಪಷ್ಟತೆಯ [illegible] ನಂತರದ ದಿನಗಳಲ್ಲಿ ಚುನಾವಣೆಗಳ ಮೂ[illegible] ದಂಗೆಗಳ ಮೂಲಕ ಚಿಲಿ, ನಿಕರಾಗುವ, [illegible] ಕೊಲಂಬಿಯ ಮೊದಲಾದ ಹಲವು ದೇಶಗಳಲ್ಲಿ [illegible] ಪರಿವರ್ತನೆಯ ಪ್ರಯತ್ನಗಳು ನಡೆದವು. ಇತ್ತೀ[illegible] ಅಮೆರಿಕದ ಹತ್ತು ದೇಶಗಳು ಎಡಪಂಥೀಯ [illegible] ರಚಿಸಲು ಮತ್ತು ತಮ್ಮ ದೇಶಗಳ ಜನರ [illegible] ಪರಿಹಾರ ನೀಡಲು ಕ್ಯೂಬಾದ ಸ್ಫೂರ್ತಿ ಮ[illegible] ಕಾರಣವಾಗಿದೆ. ವೆನೆಜುಲಾ ಮತ್ತು ಬೊಲಿವಿಯ[illegible] ಭೂಸುಧಾರಣೆ, ಆಹಾರ ಭದ್ರತೆ, ಶಿಕ್ಷಣ[illegible] ವ್ಯವಸ್ಥೆಯನ್ನು ಜನಪರವಾಗಿಸಲು ದೊಡ್ಡ ಕೊ[illegible] ಕ್ಯಾಸ್ಟ್ರೋರವರ ಸಲಹೆಗಳು ಮತ್ತು [illegible] ಉದಾಹರಣೆಗಳು. ಹೀಗೆ ಕ್ಯೂಬಾದ ಹೊ[illegible] ಕೋಟ್ಯಾಂತರ ಜನರಿಗೆ ಜೀವನ ಸಹ್ಯವಾಗುವಂ[illegible] ಕ್ಯಾಸ್ಟ್ರೋರವರ ಪಾತ್ರ ದೊಡ್ಡದು.

ಪ್ರಧಾನಿಯಾಗಿ, ಅಧ್ಯಕ್ಷರಾಗಿ ಅತ್ಯಂತ ಜ[illegible] ಅತ್ಯಂತ ದೀರ್ಘ ಕಾಲ ಒಂದು ದೇಶದ [illegible] ಚುಕ್ಕಾಣಿ ಮುನ್ನಡೆಸಿದ ದಾಖಲೆ ಫಿಡೆಲ್ ಕ್ಯಾಸ್[illegible] ಆ ಕಾರಣಕ್ಕಾಗಿ ಎಂದರೆ ಒಂದು ಕಡೆ ಕ್ಯೂ[illegible] ಮತ್ತೊಂದೆಡೆ ಜಗತ್ತಿನ ಆಡಳಿತಗಾರರು, ರಾ[illegible] ನಡುವೆ ರಾಜಕೀಯದಲ್ಲಿ ಆಸಕ್ತರ ನಡು[illegible] ಜನಪ್ರಿಯರೆಂದರೆ ಅದು ಸಹಜ. ಆದರೆ ಫಿಡೆ[illegible] ಜಗತ್ತಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞರು, ಸಮಾಜ[illegible] ಇತಿಹಾಸಕಾರರು, ಸಾಹಿತಿಗಳು, ವಿಜ್ಞಾನಿಗಳಿ[illegible] ನೃತ್ಯ ವರ್ಣಚಿತ್ರ ಕಲಾವಿದರು, ನಟರು, [illegible] ಮೊದಲಾದ ಅನೇಕ ರಂಗಗಳ ಪರಿಣತರಿಗೆ ಕ[illegible] ಗೌರವ. ಅವರಲ್ಲಿ ಹಲವರಿಗೆ ಅವರೊಡನೆ[illegible] ಒಡನಾಟವಿತ್ತು, ಅದಕ್ಕೆ ಮುಖ್ಯಕಾರಣ ಅವರ[illegible] ಪ್ರಿಯತೆ. ಅಧ್ಯಕ್ಷಗಿರಿಯ ನಿರಂತರ ಹೊಣೆಗಳ ನ[illegible] ತಮ್ಮ ಪ್ರಾಣಕ್ಕೆ ಎರಗುತ್ತಿದ್ದ ನಿರಂತರ [illegible] ನಡುವೆಯೂ ಅಧ್ಯಯನ ಅವರನ್ನು ಈ [illegible] ಅಭಿಮಾನಗಳಿಗೆ ಕಾರಣವಾಗಿತ್ತು.

ಸಾಹಿತ್ಯ ನೊಬೆಲ್ ಪ್ರಶಸ್ತಿ ವಿಜೇತರಾದ[illegible] ನೆರುಡಾ, ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೇಜ್[illegible] ಲ್ಯಾಟಿನ್ ಅಮೆರಿಕದ ಸಾಹಿತಿಗಳನೇಕರು[illegible] ಜೊತೆಯಲ್ಲಿ ಗಂಟೆಗಟ್ಟಲೇ ಸಾಹಿತ್ಯ, ಸಂಸ[illegible] ಜಗತ್ತಿನ ಆಗು ಹೋಗುಗಳ ಬಗ್ಗೆ ಚರ್ಚಿಸ[illegible] ವಿಶ್ವಸಂಸ್ಥೆ, ಅಲಿಪ್ತ ರಾಷ್ಟ್ರಗಳ ಒಕ್ಕೂಟದ ಶೃ[illegible] ಲ್ಯಾಟಿನ್ ಅಮೆರಿಕದ ರಾಷ್ಟ್ರಗಳ ಸಭೆಗಳು [illegible] ಜಗತ್ತಿನ ಅನೇಕ ವೇದಿಕೆಗಳಲ್ಲಿ ಕ್ಯಾಸ್ಟ್ರೋರವರು [illegible] ಭಾಷಣಗಳು ರಾಜನೀತಿಜ್ಞರು ಮಾತ್ರವ[illegible] ಅರ್ಥಶಾಸ್ತ್ರಜ್ಞರು ಚಾತಕಪಕ್ಷಿಗಳಂತೆ ಕಾಯುತ್ತಿದ್ದ[illegible] ಅವರ ಭಾಷಣಗಳೆಂದರೆ ಜಗತ್ತಿನ ಆರ್ಥಿಕ ಸ್ಥಿತಿಯ[illegible] ಅಧ್ಯಯನ ಮತ್ತು ವಿಶ್ಲೇಷಣೆಯ ಸಾರವಾಗಿರು[illegible]

ಹೀಗೆ ಫಿಡೆಲ್ ಕ್ಯಾಸ್ಟ್ರೋರವರ ಕ್ರಾಂತಿಕಾ[illegible] ವಿಶ್ವದೆಲ್ಲ ಕ್ರಾಂತಿಕಾರಿಗಳಿಗೆ ಮಾತ್ರವಲ್ಲ ಎಲ್ಲ ಪ[illegible] ಮನಸ್ಸಿನವರಿಗೂ ಒಂದು ದೊಡ್ಡ ಮಾದರಿ[illegible]

■ ಜೆ.ಎನ್.ನಾ[illegible]




ಬಿಹಾರದಿಂದ ತಿಹಾರ್‌ವರೆಗೆ ಒಬ್ಬ ಯುವಕನ ಪಯಣ



• ಗೌರಿ ಲಂಕೇಶ್
editorlankesh@gmail.com

ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಮಾಜಿ ಅಧ್ಯಕ್ಷ ...ಯ್ಯ ಕುಮಾರ್‌ನ ಆತ್ಮಕಥನ ‘ಬಿಹಾರದಿಂದ ...ರ್‌ವರೆಗೆ’ ಎಂಬ ಶೀರ್ಷಿಕೆಯಡಿ ಪ್ರಕಟಗೊಂಡಿದೆ. ...ಯ್ಯ ಇವತ್ತು ಈ ದೇಶದ ಅತಿ ಪ್ರಖ್ಯಾತ ವಿದ್ಯಾರ್ಥಿ ...ಕ. ಜೊತೆಗೆ ಈತ ನನ್ನ ‘ಮುದ್ದು ಕೂಸು’. ಆದ್ದರಿಂದ ...ನ ಈ ಪುಸ್ತಕವನ್ನು ಖರೀದಿಸಿ ಕಳೆದ ವಾರ ಓದಿ ...ಗಿಸಿದೆ.

ಈಗ ಎಲ್ಲರಿಗೂ ಗೊತ್ತಿರುವಂತೆ ಆತ ಹುಟ್ಟಿದ್ದು ...ರದ ಒಂದು ಹಳ್ಳಿಯ ಬಡ ಕುಟುಂಬದಲ್ಲಿ. ಆತ ...ಥಮಿಕ ಸರ್ಕಾರಿ ಶಾಲೆಯಲ್ಲಿ ಓದುವಾಗ ಆತನ ...ಪಾಠಿಗಳು ತಾವು ಯಾವ ಊರಿನ ಯಾವ ಆಸ್ಪತ್ರೆಯಲ್ಲಿ ...ತ್ತು ಜನಿಸಿದೆವು ಎಂದು ಒಮ್ಮೆ ಚರ್ಚಿಸುತ್ತಾರೆ. ...ರೆ ಕನ್ಹಯ್ಯನಿಗೆ ತಾನು ಎಲ್ಲಿ, ಎಂದು, ಯಾವ ...ತ್ರೆಯಲ್ಲಿ ಹುಟ್ಟಿದ್ದು ಎಂದು ಗೊತ್ತಿರುವುದಿಲ್ಲ. ಅವನು ...ಗೆ ಬಂದು ತನ್ನ ಜನ್ಮದ ಬಗ್ಗೆ ತನ್ನ ಅಮ್ಮನನ್ನು ...ತ್ತಾನೆ. ಆಗ ಗೊತ್ತಾಗುವುದೇನೆಂದರೆ ಆತನ ತಾಯಿ ...ಗೆ ಮಾಡುತ್ತಿದ್ದಾಗ ಹೆರಿಗೆಯ ನೋವು ಕಾಣಿಸಿಕೊಂಡು ...ರದಲ್ಲೇ ಇದ್ದ ಹಿಟ್ಟಿನ ಮೂಟೆಗೆ ತಾಗಿ ಕೂರುತ್ತಾಳೆ. ...ಯ್ಯನ ಜನ್ಮ ಮನೆಯ ಆ ಮೂಲೆಯಲ್ಲೇ ಆಗುತ್ತದೆ. ... ಆ ಮೂಲೆಯನ್ನು ನೋಡಿ “ಇದೇ ನಾನು ಜನಿಸಿದ ...ತ್ರ” ಎಂದು ಸೋಜಿಗಗೊಳ್ಳುತ್ತಾನೆ. ಕನ್ಹಯ್ಯನನ್ನು ...ಗೆ ಸೇರಿಸುವಾಗ ಆತನ ಜನ್ಮದಿನಾಂಕವನ್ನು ಜನವರಿ ...ಂದು ನಮೂದಿಸಿರುತ್ತಾರೆ. ಆದರೆ ಆತನಿಗೆ ಹದಿನೈದು ...ರ್ಷ ವಯಸ್ಸಾದಾಗ, ಬರೆಯಲು ಖಾಲಿ ಕಾಗದ ...ಡುಕುತ್ತಿದ್ದಾಗ ತನ್ನ ಅಪ್ಪ ಮುಖ್ಯ ಘಟನೆಗಳನ್ನು



...ಖಲಿಸುತ್ತಿದ್ದ ಪುಸ್ತಕ ಸಿಗುತ್ತದೆ. ಅದರಲ್ಲಿ ‘ಇವತ್ತು ...ಮ್ಮ ಮನೆಗೆ ಹೊಸ ಸದಸ್ಯನ ಆಗಮನವಾಯಿತು’ ...ದು ಮಾರ್ಚ್ 27 ತಾರೀಖನ್ನು ಬರೆದಿರುತ್ತಾರೆ. ಆಗಲೇ ...ನಿಗೆ ತನ್ನ ನಿಜವಾದ ಡೇಟ್ ಆಫ್ ಬರ್ತ್ ...ತ್ತಾಗುವುದು.

ಬಡತನ ಎಂಬುದು ಕಠೋರವಾದದ್ದು. ಅದು ಕನ್ಹಯ್ಯನ ...ವಸದಲ್ಲಿ ತಂದಿಟ್ಟ ಸಮಸ್ಯೆಗಳೂ ಒಂದೆರಡಲ್ಲ. ಆತ ...ಲೆಯಲ್ಲಿ ಓದುತ್ತಿದ್ದಾಗ ಹೊಟ್ಟೆ ತುಂಬುವಷ್ಟು ಆಹಾರ ...ನೆಯಲ್ಲಿ ಸಿಗುತ್ತಿರಲಿಲ್ಲ. ಹಿಂದಿನ ರಾತ್ರಿ ಉಳಿದಿದ್ದ ...ದು ರೊಟ್ಟಿ ಅಥವಾ ಹಿಡಿ ಅನ್ನವೇ ಬೆಳಗ್ಗಿನ ತಿಂಡಿ ...ತ್ತಿತ್ತು. ಹೀಗೆ ಅರೆಹೊಟ್ಟೆಯಲ್ಲಿ ಶಾಲೆಗೆ ...ೀಗುತ್ತಿದ್ದರಿಂದ ಮತ್ತು ಮಧ್ಯಾಹ್ನದವರೆಗೂ ಉಪವಾಸ ...ತ್ತಿದ್ದರಿಂದ ಆತನ ಆರೋಗ್ಯ ಕೆಟ್ಟಿತಲ್ಲದೆ ದೈಹಿಕ ...ಮಗಳಾದ ಆಟಗಳಲ್ಲಿ ಭಾಗವಹಿಸುವ ಶಕ್ತಿಯೇ ಆತನಿಗೆ ...ತ್ತಿರಲಿಲ್ಲ. ಹಾಗಾಗಿ ಆತ ಹೆಚ್ಚಾಗಿ ಚರ್ಚಾಸ್ಪರ್ಧೆಗಳು, ...ಬಂಧ ರಚನೆ, ಸಂಗೀತ ಇತ್ಯಾದಿಗಳಲ್ಲಿ ತನ್ನನ್ನು ...ಡಗಿಸಿಕೊಳ್ಳಲಾರಂಭಿಸಿದ. ಈ ಕಾರಣಕ್ಕೇ ಆತ ತನ್ನ ...ಗತಿಯಲ್ಲಿ ಮೊದಲನೆ ರ್‍ಯಾಂಕ್ ಪಡೆಯುತ್ತಿದ್ದ. ...ಜವಾಗಿಯೇ ಆ ವಯಸ್ಸಿನಲ್ಲಿ ತನಗಿಂತ ಬುದ್ಧಿವಂತರು ...ರೂ ಇಲ್ಲ ಎಂಬ ಧಿಮಾಕು ಆತನಲ್ಲೂ ಮೂಡಿತು. ...ಮ್ಮೆ ಆತ ಪ್ರಥಮ ರ್‍ಯಾಂಕ್ ಪಡೆದು ಮನೆಗೆ ...ಹಿರುಗುತ್ತಿದ್ದಾಗ ಅವನ ಮಸನದಪುರ ಹಳ್ಳಿಯ ...ಯೊಬ್ಬ “ಎಷ್ಟನೆ ರ್‍ಯಾಂಕ್?” ಎಂದು ಕೇಳಿದ. ಕನ್ಹಯ್ಯ ...ಮಾನದಿಂದಲೇ “ಇನ್ನೇನು, ಮೊದಲನೆ ರ್‍ಯಾಂಕ್” ಎಂದು ...ತ್ತರಿಸಿದ. ಆಗ ಕವಿಜಿ “ಹೌದೋ, ಹಾಗಾದರೆ ...ವತ್ತೊಂಬತ್ತು ಎಂದರೆ ಎಷ್ಟು?” ಎಂದು ಪ್ರಶ್ನಿಸಿದ.

“ಏಳು ಮತ್ತು ಒಂಭತ್ತು” ಎಂದು ಕನ್ಹಯ್ಯ ...ಶ್ವಾಸದಿಂದಲೇ ಉತ್ತರಿಸಿದ.

“ಹಿಂಗುರ್. ಎಪ್ಪತ್ತೊಂಬತ್ತು ಎಂದರೆ ಎಷ್ಟು?” ...ನ್ನೊಂದು ಪ್ರಶ್ನೆ.


“ಎಂಟು ಮತ್ತು ಒಂಬತ್ತು.”

ಕವಿಜಿ ನಕ್ಕು “ಪ್ರಥಮ ರ್‍ಯಾಂಕ್ ಪಡೆಯುವುದಕ್ಕೆ ನೀನು ಲಾಯಕ್ಕು” ಎಂದು ಹೇಳಿದ.

ಕವಿಜಿಯ ಪ್ರತಿಕ್ರಿಯೆ ಕಂಡು ಕನ್ಹಯ್ಯನಿಗೆ ಕಸಿವಿಸಿಯಾಯಿತು. ಮನೆಗೆ ಹೋಗಿ ಪಠ್ಯಪುಸ್ತಕವನ್ನು ತೆರೆದು ನೋಡಿದಾಗ ತಾನು ಬುದ್ಧಿವಂತನಲ್ಲ ಎಂದು ಅರ್ಥವಾಯಿತು. ಆಗ ಇನ್ನು ಮುಂದೆ ತರಗತಿಯ ಪಾಠಗಳ ಜೊತೆಗೆ ಇತರೆ ಪುಸ್ತಕಗಳನ್ನು ಓದಿದರೆ ಮಾತ್ರ ತಾನು ಬುದ್ಧಿವಂತನಾಗಲು ಸಾಧ್ಯ ಎಂಬ ಅರಿವಾಯಿತು.

ಆತ ಚೆನ್ನಾಗಿ ಓದುತ್ತಿದ್ದುದ್ದನ್ನು ಗಮನಿಸಿದ ಶಾಲಾಶಿಕ್ಷಕಿ “ನಿಮ್ಮ ಮಗ ತುಂಬಾ ಬುದ್ಧಿವಂತ. ಆದ್ದರಿಂದ ಅವನನ್ನು ಸರ್ಕಾರಿ ಶಾಲೆಯಿಂದ ಬಿಡಿಸಿ ಖಾಸಗಿ ಶಾಲೆಗೆ ಸೇರಿಸಿ” ಎಂದು ಆತನ ಅಪ್ಪನ ಮೇಲೆ ಒತ್ತಡ ತಂದರು. ಕೂಲಿ ಮಾಡಿ ತನ್ನ ಸಂಸಾರವನ್ನು ನಿಭಾಯಿಸುತ್ತಿದ್ದ ತಂದೆ ಜೈಶಂಕರ್ ಸಿಂಗ್ ತನ್ನ ಅನಾರೋಗ್ಯದ ನಡುವೆಯೂ ಕಷ್ಟಪಟ್ಟು ದುಡಿದು ಹಣ ಸಂಪಾದಿಸಲು ಮುಂದಾದರು. ಆತನನ್ನು ದುಬಾರಿ ಖಾಸಗಿ ಶಾಲೆಯಲ್ಲಿ ಓದಿಸಲು ಹಣ ಉಳಿಸುವ ನಿಟ್ಟಿನಲ್ಲಿ ಮನೆಯವರೆಲ್ಲ ಹಾಲಿಲ್ಲದ ಟೀ ಕುಡಿಯುವುದನ್ನು ಅಭ್ಯಾಸ ಮಾಡಿಕೊಂಡರು. ಅಮ್ಮ ಮೀನಾದೇವಿ ಅಂಗನವಾಡಿಯಲ್ಲಿ ಸಹಾಯಕಿಯಾಗಿ ಕೆಲಸ ಸೇರಿದರು.

ಆದರೆ ಖಾಸಗಿ ಶಾಲೆಗೆ ಬರುವ ಶ್ರೀಮಂತರ ಮಕ್ಕಳೊಂದಿಗೆ ಬೆರೆಯುವುದು ಕನ್ಹಯ್ಯನಿಗೆ ಕಷ್ಟವಾಯಿತು. ಅಲ್ಲಿ ಇತರೆ ಮಕ್ಕಳು ಇವನ ಬಡತನವನ್ನು, ಒಂದೇ ಸೆಟ್ ಸಮವಸ್ತ್ರವನ್ನು, ತಾಯಿ ಹೆಣೆದ ಮಫ್ಲರ್ ಅನ್ನು



ಲೇವಡಿ ಮಾಡುತ್ತಿದ್ದರು. ಸರ್ಕಾರಿ ಶಾಲೆಯಲ್ಲಿ ಬುದ್ಧಿವಂತ ಎಂದು ಮೆರೆಯುತ್ತಿದ್ದ ಕನ್ಹಯ್ಯನ ಆತ್ಮವಿಶ್ವಾಸವೇ ಇದೆಲ್ಲದರಿಂದ ಕುಗ್ಗಿಹೋಯಿತು. ಬಡತನದೊಂದಿಗೆ ಬರುವ ವರ್ಗಭೇದ ಆತನನ್ನು ಕಂಗಾಲಾಗಿಸಿತ್ತು. ಪರಿಣಾಮವಾಗಿ ಪ್ರಥಮ ರ್‍ಯಾಂಕ್ ಪಡೆಯುತ್ತಿದ್ದ ಹುಡುಗ ಐದನೆ ರ್‍ಯಾಂಕ್‌ಗೆ ಜಾರಿದ.

ಆತ ಹೈಸ್ಕೂಲ್ ಸೇರುವಾಗಲೂ ಹಣದ ಸಮಸ್ಯೆ ಎದುರಾಯಿತು. ಆಗ ಆತನನ್ನು ಮತ್ತೆ ಸರ್ಕಾರಿ ಶಾಲೆಗೆ ದಾಖಲಿಸಲಾಯಿತು. ಆಗ “ನಾನು ಓದಿದರೂ ಏನು ಪ್ರಯೋಜನ? ಹೆಚ್ಚೆಂದರೆ ಎಲ್ಲೋ ಗಾರ್ಡ್ ಆಗಿಯೋ, ಯಾವುದೋ ಕಚೇರಿಯಲ್ಲಿ ಜವಾನನಾಗಿಯೋ ಕೆಲಸ ಸಿಗಬಹುದು. ಅದಕ್ಕೆ ಯಾಕೆ ಇಷ್ಟೆಲ್ಲ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕು” ಎಂಬ ಸಂಶಯಗಳು ಅವನನ್ನು ಮುತ್ತಿದವು. ಆದರೂ ಸೀಮೆಎಣ್ಣೆ ದೀಪದ ಬೆಳಕಿನಲ್ಲೇ ಹೆಚ್ಚೆಚ್ಚು ಓದುತ್ತಾ ಹೋದ. ನಮ್ಮ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳನ್ನು ಕಾಡುವ ಗಣಿತ ಕಲಿಕೆ ಆತನನ್ನೂ ಇನ್ನಿಲ್ಲದಂತೆ ಕಾಡುತ್ತಿತ್ತು.

ಹತ್ತನೆ ತರಗತಿಯ ಫಲಿತಾಂಶ ಪ್ರಕಟಗೊಂಡಾಗ ಆತನ ತಂದೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಕನ್ಹಯ್ಯನಲ್ಲಿ ಆತ್ಮವಿಶ್ವಾಸವೇ ಕರಗಿಹೋಗಿದ್ದರಿಂದ ಆತ ತಾನು ಪಾಸು ಆಗಿದ್ದೇನೋ ಇಲ್ಲವೋ ಎಂದು ಮೊದಲು ಮೂರನೆ ಕ್ಲಾಸ್ ಪಡೆದ ಪಟ್ಟಿಯಲ್ಲಿ ತನ್ನ ಸಂಖ್ಯೆಗೆ ಹುಡುಕಾಡಿದ. ಅಲ್ಲಿ ಕಾಣದಾಗ ಎರಡನೆ ಕ್ಲಾಸ್ ಪಟ್ಟಿಯಲ್ಲಿ ನೋಡಿದ. ಅಲ್ಲೂ ಕಾಣದಿದ್ದಾಗ “ನಾನು ಖಂಡಿತ ಫೇಲ್ ಆಗಿರಬೇಕು” ಎಂಬ ಭಯದಲ್ಲೇ ಮೊದಲನೆ ಕ್ಲಾಸ್ ಪಟ್ಟಿಯ ಮೇಲೆ ಕಣ್ಣಾಡಿಸಿದ. ನೋಡಿದರೆ ಆತ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದ. ಮಗನ ಈ ಯಶಸ್ಸು ಆತನ ಕುಟುಂಬಕ್ಕೆ ಮತ್ತಷ್ಟು ಕಷ್ಟಗಳನ್ನು ತಂದಿಟ್ಟವು. ಚೆನ್ನಾಗಿ ಓದುವ ಹುಡುಗನ ವಿದ್ಯಾಭ್ಯಾಸವನ್ನು ಮುಂದುವರೆಸುವ ಬಯಕೆ ಒಂದೆಡೆಯಾದರೆ, ಅದಕ್ಕಾಗಿ ಹಣ ಹೊಂದಿಸುವುದು ಹೇಗೆ ಎಂಬ ಸಮಸ್ಯೆ ಇನ್ನೊಂದೆಡೆ.

ಆದರೂ ಆತನ ತಂದೆ ಹಣ ಹೊಂದಿಸುವುದಾಗಿ ಭರವಸೆ ಕೊಟ್ಟು ಮಗನನ್ನು ಬಿಹಾರದ ರಾಜಧಾನಿ ಪಟ್ನಾಗೆ ಕಳುಹಿಸಿದರು. ಅಷ್ಟು ಹೊತ್ತಿಗೆ ಕನ್ಹಯ್ಯನಲ್ಲಿ ಐಎಎಸ್ ಆಫೀಸರ್ ಆಗಬೇಕೆಂಬ ಆಸೆ ಹುಟ್ಟಿತ್ತು. ಆತ ಪಟ್ನಾದ ಕಾಲೇಜೊಂದರಲ್ಲಿ ತನ್ನ ಹೆಸರನ್ನು ನಮೂದಿಸಿ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದ. ಖಾಸಗಿಯಾಗಿ ಗಣಿತದಲ್ಲಿ ಟ್ಯೂಷನ್ ತೆಗೆದುಕೊಳ್ಳುತ್ತಾ, ಮಕ್ಕಳಿಗೆ ಇತಿಹಾಸ, ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರದಲ್ಲಿ ಪಾಠ ಹೇಳಿಕೊಡುವ ಮೂಲಕ ಒಂದಿಷ್ಟು ಹಣ ಸಂಪಾದಿಸುತ್ತಾ, ಪುರುಸೊತ್ತು ಸಿಕ್ಕಾಗ ಎಲ್ಲಾ ಬಿಹಾರಿಗಳಂತೆ ತನ್ನ ಗೆಳೆಯರೊಂದಿಗೆ ರಾಜಕೀಯ ಕುರಿತು ಚರ್ಚೆ ನಡೆಸುತ್ತಾ ಎರಡು ವರ್ಷ ಕಳೆದ. ಇದೇ ಸಮಯದಲ್ಲಿ ಇಂಗ್ಲಿಷ್ ಪತ್ರಿಕೆಗಳನ್ನು ಓದಿದರೆ ಯುಪಿಎಸ್‌ಸಿ ಪರೀಕ್ಷೆಗಳಿಗೆ ನೆರವಾಗುತ್ತದೆ ಎಂದು ಹತ್ತಿರದಲ್ಲೇ ಇದ್ದ ಇಂಗ್ಲಿಷ್ ಪತ್ರಿಕೆಗಳನ್ನು ತರಿಸುತ್ತಿದ್ದ ಸಿಪಿಐ ಪಕ್ಷದ ಕಚೇರಿಗೆ ಹೋಗಲಾರಂಭಿಸಿದ. ಅಲ್ಲಿನ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ. ಆದರೆ ಆತ ಎಷ್ಟೇ ಪ್ರಯತ್ನಪಟ್ಟರೂ ಆತನ ತಲೆಗೆ ಗಣಿತ ಅಂಟಲೇ ಇಲ್ಲ. ಆಗ ಯುಪಿಎಸ್‌ಸಿಯ ಉಸಾಬರಿಯೇ ಬೇಡ, ಬದಲಾಗಿ ಏರ್ ಕಂಡೀಷನರ್‌ಗಳನ್ನು ರಿಪೇರಿ ಮಾಡುವುದನ್ನು ಕಲಿತು, ದುಬೈಗೆ ಹೋಗಿ ಕೈತುಂಬ ಹಣಗಳಿಸುವುದೇ ಉತ್ತಮ ಮಾರ್ಗ ಎಂದು ಆತನಿಗೆ ಅನ್ನಿಸಿತ್ತು. ಅಷ್ಟೆಲ್ಲ ಕಷ್ಟ ಮತ್ತು ನಿರಾಶೆಯ ನಡುವೆಯೂ ಎರಡನೆ ಪಿಯೂಸಿಯನ್ನು ಸೆಕೆಂಡ್ ಕ್ಲಾಸ್‌ನಲ್ಲಿ ಪಾಸಾಗಿದ್ದು ಆತನಲ್ಲಿ ಹೆಚ್ಚು ಓದುವ ಆಶೆಯನ್ನು ಹೆಚ್ಚಿಸಿತು.

ಪಾಟ್ನಾದಲ್ಲೇ ಬಿಎ ಓದಲು ಕಾಲೇಜನ್ನು ಸೇರಿಕೊಂಡ. ಮೂರು ವರ್ಷಗಳ ನಂತರ ಫಸ್ಟ್ ಕ್ಲಾಸ್‌ನಲ್ಲಿ ಬಿಎ ಪದವೀಧರನಾದ. ನಳಂದ ಮುಕ್ತ ವಿಶ್ವವಿದ್ಯಾಲಯದಲ್ಲಿ ಎಂಎ ಪದವಿಗೆ ಹೆಸರನ್ನು ದಾಖಲಿಸಿ ದೆಹಲಿಯಲ್ಲಿ ಯುಪಿಎಸ್‌ಸಿ ಪರೀಕ್ಷೆಗೆ ತರಬೇತಿ ಪಡೆಯಲು 2009ರಲ್ಲಿ ಹೊರಟ. ಓದುತ್ತಾ, ಪಾಠ ಹೇಳಿಕೊಡುತ್ತಾ ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಬೃಹತ್ ಕನಸಿನೊಂದಿಗೆ ದೆಹಲಿಗೆ ತೆರಳಿದ ಕನ್ಹಯ್ಯ.

ದೆಹಲಿಯಲ್ಲಿ ಕಷ್ಟಪಟ್ಟು ತನ್ನ ತಲೆ ಮೇಲೊಂದು ಸೂರನ್ನು ಹಿಡಿದ. ಇತ್ತ ಎಂಎ ಪದವಿಗೆ ಓದುತ್ತಲೇ ಅತ್ತ ಯುಪಿಎಸ್‌ಸಿ ಪರೀಕ್ಷೆಗಳಿಗೆ ಸಿದ್ಧತೆಯನ್ನು ಮುಂದುವರೆಸಿದ. ಜೊತೆಗೆ ಸಿಪಿಐ ಪಕ್ಷದ ವಿದ್ಯಾರ್ಥಿ ಸಂಘಟನೆಯಾದ ಎಐಎಸ್‌ಎಫ್‌ನೊಂದಿಗಿನ ನಂಟನ್ನೂ ಮುಂದುವರೆಸಿದ. ಆಗಲೇ ಆತನಿಗೆ ಜೆಎನ್‌ಯು ಪ್ರೊಫೆಸರ್ ಎಸ್.ಎನ್.ಮಲಕರ್ ಅವರ ಪರಿಚಯವಾಗಿದ್ದು. ಆತನ ಎಂಎ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡು ಇನ್ನೇನು ಯುಪಿಎಸ್‌ಸಿ ಪರೀಕ್ಷೆಗೆ ಅರ್ಜಿ ಸಲ್ಲಿಸಬೇಕೆಂದು ಸಿದ್ಧತೆ ನಡೆಸುತ್ತಿದ್ದಾಗಲೇ ಯುಪಿಎಸ್‌ಸಿ ತನ್ನ ಪಠ್ಯಕ್ರಮವನ್ನೇ ಬದಲಾಯಿಸಿತು. ಇದರಿಂದ ಕನ್ಹಯ್ಯ ದಿಕ್ಕುತೋಚದಂತಾದ. ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ತಯಾರಿ ಮಾಡಿಕೊಳ್ಳಬೇಕೆಂದರೆ ಮತ್ತೆರಡು ವರ್ಷ ಓದಬೇಕು. ಅದಕ್ಕೆಂದು ಹಣ ಹೊಂದಿಸುವುದು ಎಲ್ಲಿಂದ? ಆಗ ಈ ಯುಪಿಎಸ್‌ಸಿ ಸಹವಾಸವೇ ಬೇಡ ಎಂದು ನಿರ್ಧರಿಸಿದ ಕನ್ಹಯ್ಯ ಜೆಎನ್‌ಯುನಲ್ಲಿ ಡಾಕ್ಟರೇಟ್ ಮಾಡಲು ನಿರ್ಧರಿಸಿದ. ಆ ವಿಶ್ವವಿದ್ಯಾಲಯದಲ್ಲಿ ಆತನಿಗೆ ಪ್ರವೇಶವೂ ಸಿಕ್ಕಿತು. ಹೀಗೆ, ಎಲ್ಲೋ ಗಾರ್ಡ್ ಆಗುವುದಕ್ಕೆ ಯಾಕೆ ಓದಬೇಕು? ಡಿಗ್ರಿ ಮಾಡುವ ಬದಲು ಏಸಿ ರಿಪೇರಿಯೇ ಲಾಭದಾಯಕ ಹುದ್ದೆ ಎಂದೆಲ್ಲ ಚಿಂತಿಸಿದ್ದ ಒಂದು ಸಾಮಾನ್ಯ ಹಳ್ಳಿಯ ಈ ಬಡ ಯುವಕ ತನ್ನ ಪ್ರತಿಭೆಯಿಂದಲೇ ಪ್ರತಿಷ್ಠಿತ ಜೆಎನ್‌ಯು ಪ್ರವೇಶಿಸಿದ. ಆತನ ಜೀವನಗಾಥೆ ಹಳ್ಳಿಗಳಲ್ಲಿರುವ ನಮ್ಮ ಎಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾದದ್ದು.

ಜೆಎನ್‌ಯು ಕನ್ಹಯ್ಯನಿಗೆ ಹೊಸ ಜಗತ್ತನ್ನೆ ತೆರೆದಿಟ್ಟಿತು. ಅಲ್ಲಿನ ಮುಕ್ತ ಚರ್ಚೆಗಳು, ಲಿಂಗ ಮತ್ತು ವರ್ಗಗಳ ನಡುವಿನ ಸಮಾನತೆಯ ಧೋರಣೆ, ಆತನ ಬಡತನವನ್ನು ಲೆಕ್ಕಿಸದೆ ಆತನ ಬುದ್ಧಿವಂತಿಕೆಯನ್ನು ಮೆಚ್ಚಿದ ಅಲ್ಲಿನ ಸಹಪಾಠಿಗಳು ಮತ್ತು ಪ್ರೊಫೆಸರ್‌ಗಳು... ಎಲ್ಲವೂ ಆತನಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದವು. ಆದರೂ ತಾನು ಬಿಹಾರದ ಹಳ್ಳಿಯವನು, ಇಂಗ್ಲಿಷ್ ಬಾರದವನು ಎಂಬ ಭಾವನೆಗಳು ಆತನನ್ನು ಕಾಡುತ್ತಿದ್ದವು. ಎಷ್ಟರಮಟ್ಟಿಗೆ ಎಂದರೆ ಒಮ್ಮೆ ಆತನನ್ನು ಎಐಎಸ್‌ಎಫ್ ವಿವಿಯ ಕೌನ್ಸಿಲರ್ ಹುದ್ದೆಗೆ ಸ್ಪರ್ಧಿಸಲು ಒತ್ತಾಯಿಸಿತು. ಸಂಕೋಚ ಸ್ವಭಾವದ ಕನ್ಹಯ್ಯ ಚುನಾವಣಾ ಪ್ರಚಾರದ ವೇಳೆ ತನಗೆ ಮತ ಹಾಕಿ ಎಂದು ಕೋರುವುದನ್ನೇ ಮರೆತುಹೋಗುತ್ತಿದ್ದ.

ಆದರೆ ನಿಧಾನವಾಗಿ ಆತ ಕೋಮುವಾದದ ವಿರುದ್ಧದ ಮತ್ತು ವಿದ್ಯಾರ್ಥಿಗಳ ಹಕ್ಕುಗಳ ಪರವಾದ ಹೋರಾಟಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲಾರಂಭಿಸಿದ. ನಿರ್ಭಯಾ ಗ್ಯಾಂಗ್ ರೇಪ್ ಪ್ರಕರಣದ ವಿರುದ್ಧದ ಪ್ರತಿಭಟನೆಗಳಲ್ಲಿ ಭಾಗವಹಿಸಿದ. ನರೇಂದ್ರ ಮೋದಿ ಚುನಾವಣೆಯಲ್ಲಿ ಗೆದ್ದು ದೆಹಲಿಗೆ ಆಗಮಿಸಿದಾಗ ಆತ ಗುಜರಾತಿನಲ್ಲಿ ನಡೆಸಿದ ಮಾರಣಹೋಮವನ್ನು ಪ್ರತಿಭಟಿಸಿದ. ಎಫ್‌ಟಿಐಐ ಮತ್ತು ಚೆನ್ನೈನ ಐಐಟಿ ಸಂಸ್ಥೆಗಳ ವಿದ್ಯಾರ್ಥಿಗಳ ಮೇಲೆ ಆದ ದಾಳಿಗಳನ್ನು ಖಂಡಿಸಿದ. ಡಾಕ್ಟರೇಟ್ ಆಕಾಂಕ್ಷಿಗಳ ವಿದ್ಯಾರ್ಥಿವೇತನವನ್ನು ಕಡಿತಗೊಳಿಸಿದ್ದನ್ನು ದೇಶದ ವಿದ್ಯಾರ್ಥಿಗಳೆಲ್ಲರೂ ಜೊತೆಗೂಡಿ ಪ್ರತಿಭಟಿಸಿದಾಗ ಕನ್ಹಯ್ಯ ಮುಂಚೂಣಿಯಲ್ಲಿದ್ದ. ಹೋದವರ್ಷ ಜೆಎನ್‌ಯು ವಿದ್ಯಾರ್ಥಿ ಸಂಘಟನೆಗೆ ಚುನಾವಣೆ ನಡೆದಾಗ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಆತ ತನ್ನ ವಾಕ್‌ಚಾತುರ್ಯದಿಂದಲೇ ಗೆದ್ದ. ಇದೆಲ್ಲದರಿಂದ ಆತ ಅಲ್ಲಿನ ಎಬಿವಿಪಿಯ ಖದೀಮರ ಕೆಂಗಣ್ಣಿಗೆ ಗುರಿಯಾದದ್ದು, ಸುಳ್ಳು ಆರೋಪ ಹೊರಿಸಿ ಆತನನ್ನು ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರಾದಾಗ ಆತನ ಮೇಲೆ ವಕೀಲರೇ ದಾಳಿ ಮಾಡಿದ್ದು, ಕೊನೆಗೆ ಬಿಡುಗಡೆಯಾಗಿ ಆತ ಜೆಎನ್‌ಯುನಲ್ಲಿ ‘ಆಜಾದಿ’ ಭಾಷಣ ಮಾಡುವ ಮೂಲಕ ದೇಶದಾದ್ಯಂತ ಸಂಚಲನ ಮೂಡಿಸಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿಗಳು.

ಅವತ್ತು ತಾನು ಮಾಡಿದ ಭಾಷಣದ ಬಗ್ಗೆ ಕನ್ಹಯ್ಯ ಹೀಗೆ ಹೇಳುತ್ತಾನೆ: “ಅವತ್ತು ನಾನು ಮಾಡಿದ್ದು ಭಾಷಣವಲ್ಲ, ಬದಲಾಗಿ ಅದೊಂದು ಸಂಭಾಷಣೆಯಾಗಿತ್ತು. ಈ ದೇಶದ ಯುವಕರ ಹಕ್ಕು, ಶಕ್ತಿ ಮತ್ತು ಭವಿಷ್ಯ ಕುರಿತ ಸಂಭಾಷಣೆ. ಆ ಸಂಭಾಷಣೆ ಅದಕ್ಕೂ ಮೊದಲೇ ಪ್ರಾರಂಭವಾಗಿತ್ತು ಮತ್ತು ಆ ಕಾರಣಕ್ಕೇ ನನ್ನನ್ನು ಬಂಧಿಸಲಾಗಿತ್ತು. ಆದ್ದರಿಂದ ನಾನು ಆ ಸಂಭಾಷಣೆಯನ್ನು ಮುಂದುವರೆಸಬೇಕಿತ್ತು. ಮೈಕ್ ಹತ್ತಿರ ಹೋದಾಗ ನನ್ನ ಮುಂದಿದ್ದ ಮುಖಗಳು ಮಾತ್ರವಲ್ಲ ನಮ್ಮ ಮುಂದಿದ್ದ ಸವಾಲುಗಳೂ ನನಗೆ ಕಾಣಿಸಿದವು. ಪ್ರೇಕ್ಷಕರ ಹಿಂದೆ ಸಾಲುಗಟ್ಟಿ ನಿಂತಿದ್ದ ಟಿವಿ ಕ್ಯಾಮೆರಾಗಳನ್ನು ಕಂಡಾಗ ನಾನು ಅಲ್ಲಿದ್ದ ಜನರನ್ನು ಮಾತ್ರವಲ್ಲ ಈ ದೇಶದ ಕೋಟ್ಯಾಂತರ ಜನರನ್ನೂ ಉದ್ದೇಶಿಸಿ ಮಾತನಾಡಬೇಕು ಎಂದು ಅರಿವಾಯಿತು.”

ತನ್ನ ಆತ್ಮಕತೆಯನ್ನು ಕನ್ಹಯ್ಯ ಈ ಪದಗಳೊಂದಿಗೆ ಮುಗಿಸುತ್ತಾನೆ:

“ಈಗ ನಮ್ಮ ಮುಂದಿರುವುದು ಒಂದೇ ಮಾರ್ಗ. ಬಾಬಾಸಾಹೇಬ್ ಅವರು ನಾವು ನಮ್ಮ ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ವಿದ್ಯೆ ಪಡೆಯಬೇಕು ಎಂದಿದ್ದರು. ಹಾಗೆಯೇ ನಾವು ಏಕಾಂಗಿಯಾಗಿ ಹೋರಾಡಲು ಸಾಧ್ಯವಿಲ್ಲವಾದ್ದರಿಂದ ಎಲ್ಲರೂ ಸಂಘಟಿತರಾಗಬೇಕು ಎಂದಿದ್ದರು. ಸಂಘಟಿತರಾದರೆ ಸಾಕಾಗುವುದಿಲ್ಲ, ಚಳವಳಿ ಮಾಡಬೇಕು ಎಂದಿದ್ದರು. ಇವತ್ತಿನ ಸಮಸ್ಯೆಗಳನ್ನು ಎದುರಿಸಲು ಎಲ್ಲರೂ ಒಟ್ಟುಗೂಡುವುದು ಅತ್ಯಗತ್ಯವಾಗಿದೆ. ಯಾಕೆಂದರೆ ಒಗ್ಗಟ್ಟಾದ ಜನ ಎಂದಿಗೂ ಜಯಶಾಲಿಗಳಾಗುತ್ತಾರೆ.” ■

........during the course of investigation, it is established that deceased D.K. Ravi had committed suicide.

ನಲವತ್ತು ಪುಟಗಳ ತನ್ನ ತನಿಖಾ ವರದಿಯ ಕೊನೆಯಲ್ಲಿ ಹೀಗೆ ಘೋಷಿಸುವ ಮೂಲಕ ಸ್ವತಃ ಸಿಬಿಐ ತಂಡವೇ, ಇಲ್ಲಿಗೆ ಒಂದೂವರೆ ವರ್ಷದ ಹಿಂದೆ ಸೇಂಟ್ ಜಾನ್ಸ್‌ವುಡ್ ಅಪಾರ್ಟ್‌ಮೆಂಟ್‌ನಲ್ಲಿ ನಡೆದದ್ದು ಡಿಕೆ ರವಿಯ ಆತ್ಮಹತ್ಯೆಯೇ ಹೊರತು ಮಾಧ್ಯಮಗಳು ಹೂಳಿಟ್ಟಂತೆ, ಬಿಜೆಪಿ ಬೊಬ್ಬಿರಿದಂತೆ ಕೊಲೆಯಲ್ಲ ಅನ್ನೋದನ್ನು ಸಾಬೀತುಪಡಿಸಿದೆ. ಅಲ್ಲಿಗೆ ಘಟನೆಯ ದಿನದಿಂದಲೂ ಒಬ್ಬ ಪ್ರಾಮಾಣಿಕ ಅಧಿಕಾರಿಯ ಸಾವನ್ನು ರಾಜ್ಯ ಸರ್ಕಾರದ ತಲೆಗೆ ಕಟ್ಟಲು ಹವಣಿಸಿದ ಬಿಜೆಪಿ ಮತ್ತು ಟೀವಿ ಚಾನೆಲ್‌ಗಳು ಜನರ ಮುಂದೆ ಬೆತ್ತಲಾಗಿವೆ!

ಹೌದು, ಡಿ.ಕೆ. ರವಿಯ ಸಾವು ಕರ್ನಾಟಕಕ್ಕೆ ಒಂದು ಶಾಕ್‌ನಂತೆ ಅಪ್ಪಳಿಸಿತ್ತು, ಕೋಲಾರದ ಮಂದಿಗಂತೂ ಅದನ್ನು ಅರಗಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ, ಯಾಕೆಂದರೆ ಆತ ಅಲ್ಲಿ ಡಿಸಿಯಾಗಿದ್ದಾಗ ಜನರಿಗೆ ಸ್ಪಂದಿಸಿದ ರೀತಿ ಇತ್ತಲ್ಲ, ಅದು ಡಿ.ಕೆ. ರವಿಗೆ 'ಕಾಮನ್‌ಮ್ಯಾನ್ ಆಫೀಸರ್'ನ ಇಮೇಜು ತಂದುಕೊಟ್ಟಿತ್ತು, ಆತ ಅಲ್ಲಿಂದ ವರ್ಗವಾದಾಗಲೇ ಆ ಜನ ರಸ್ತೆಗಿಳಿದು ಪ್ರತಿಭಟಿಸಿದ್ದರು. ಅಂತದ್ದರಲ್ಲಿ ರವಿ ಅನುಮಾನಾಸ್ಪದವಾಗಿ ಸತ್ತೇ ಹೋಗಿದ್ದಾನೆಂದರೆ ಸುಮ್ಮನಿರುತ್ತಾರಾ? ಅದು ಆ ಜನರ ಮುಗ್ಧತೆ.

ಆದರೆ ಆ ಮುಗ್ಧತೆಯನ್ನು ಎಲೆಕ್ಟ್ರಾನಿಕ್ ಮೀಡಿಯಾಗಳು ಮತ್ತು ನಿರುದ್ಯೋಗಿ ಬಿಜೆಪಿಗಳು ಬಳಸಿಕೊಂಡ ರೀತಿ ಮಾತ್ರ ಅಸಹ್ಯ ಹುಟ್ಟಿಸುವಂತಿತ್ತು.

'ಡಿ.ಕೆ. ರವಿ ಹತ್ಯೆ ಮಾಡಲು ವಿದೇಶಿ ಸುಪಾರಿ ಕಿಲ್ಲರ್‌ಗಳನ್ನು ಕರೆಸಲಾಗಿತ್ತು'

'ಡಿ.ಕೆ. ರವಿಯ ಬೆರಳುಗಳ ಸಂಧಿಗೆ ವಿಷದ ಇಂಜೆಕ್ಷನ್ ಚುಚ್ಚಲಾಗಿತ್ತು'

'ರವಿ ಮನೆಯ ತುಂಬಾ ಡೆಟಾಲ್ ವಾಸನೆ ಬರುತ್ತಿತ್ತು'


'ಡಿ.ಕೆ. ರವಿಯ ಹತ್ಯೆಯ ಹಿಂದೆ ಗೃಹಮಂತ್ರಿ ಜಾರ್ಜ್ ಕೈವಾಡ!'

'ಡಿ.ಕೆ. ರವಿಯನ್ನು ಕೊಂದದ್ದು ಕೋಲಾರದ ಎಂಪಿ ಮುನಿಯಪ್ಪನ ಟಾರ್ಚರ್ರಾ?'

ಇಂಥಾ ಬ್ರೇಕಿಂಗ್ ನ್ಯೂಸ್‌ಗಳು ಕನ್ನಡದ ಸುದ್ದಿ ಚಾನೆಲ್‌ಗಳ ಪರದೆ ತುಂಬ ರಾರಾಜಿಸಿದ್ದೇ ರಾರಾಜಿಸಿದ್ದು. ಇನ್ನು ಸತ್ತ ಮನೆಯಲ್ಲಿ ಗಳ ಇರಿಯೋ ಚಾಳಿಯ ಬಿಜೆಪಿಯ ಅಬ್ಬರವನ್ನಂತೂ ಕೇಳುವುದೇ ಬೇಡ. ಕಾಂಗ್ರೆಸ್ ಸರ್ಕಾರಕ್ಕೆ ಮಸಿ ಬಳಿಯುವ ಸಲುವಾಗಿಯೋ ರವಿಯವರ ಆತ್ಮಹತ್ಯೆಯನ್ನು ಕೊಲೆಯಂತೆ ಬಿಂಬಿಸಿ ರಸ್ತೆಗಿಳಿದ ಬಿಜೆಪಿ, 'ಇದು ಕೊಲೆಗಡುಕ ಸರ್ಕಾರ. ಸರ್ಕಾರವೇ ಕೊಲೆಗಡುಕರ ರಕ್ಷಣೆ ಮಾಡುತ್ತಿದೆ. ಕೂಡಲೇ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು' ಅಂತ ಜನರಲ್ಲಿ ಸರ್ಕಾರ ವಿರೋಧಿ ಧೋರಣೆ ಹುಟ್ಟುಹಾಕಲು ಬೆವರು ಹರಿಸಿತ್ತು, ಹೌದು, ಇವತ್ತು ಅವರೇ ಹೇಳಿದ ಸಿಬಿಐ ತನ್ನ ತನಿಖಾ ವರದಿ ಒಪ್ಪಿಸಿದೆ, ಅದೂ ಕ್ಲಿಯರ್ ಕಟ್ ಸೂಸೈಡ್ ಅಂತ! ಹೀಗೇನು ಹೇಳ್ತಾರೆ ಬಿಜೆಪಿಗರು.

ರವಿಯ ನೆರಳಿಗೆ ಯಾವ ಬಣ್ಣ?

ಡಿ.ಕೆ. ರವಿ ಒಬ್ಬ ಪ್ರತಿಭಾವಂತ ಯುವಕ. ಹಳ್ಳಿಯೊಂದರ ಬಡ ಕುಟುಂಬದಲ್ಲಿ ಹುಟ್ಟಿ ತನ್ನ ಪರಿಶ್ರಮದಿಂದಲೇ ಐಎಎಸ್ ಎತ್ತರಕ್ಕೆ ಏರಿದ್ದ, ಆಮೇಲಾದರೂ ಆ ಬಡತನದ ದಿನಗಳನ್ನು ಮರೆತವನಲ್ಲ, ತಾನು ಅಧಿಕಾರದಲ್ಲಿ ಇದ್ದಷ್ಟೂ ದಿನ ಪ್ರಾಮಾಣಿಕತೆಗಾಗಿ ತುಡಿದಿದ್ದ ಬಡವರಿಗಾಗಿ ಮಿಡಿದಿದ್ದ. ಚಿಕ್ಕವನಿದ್ದಾಗ ತನ್ನ ತಂದೆ ತಮ್ಮದೇ ಜಮೀನಿನ ಹಕ್ಕುಪತ್ರಕ್ಕಾಗಿ ಅಲೆದಾಡಿದ್ದನ್ನು ಕಣ್ಣಾರೆ ಕಂಡಿದ್ದ ರವಿ ತಾನು ಕೋಲಾರದ ಡಿಸಿಯಾಗುತ್ತಿದ್ದಂತೆಯೇ ಹಳ್ಳಿಹಳ್ಳಿಯಲ್ಲೂ ಕಂದಾಯ ಅದಾಲತ್‌ಗಳನ್ನು ನಡೆಸಿ ಜನರ ನಡುವೆ ಗುರುತಿಸಿಕೊಂಡಿದ್ದ, ಕೆಲಸ ಮಾಡದ ಅಧಿಕಾರಿಗಳಿಗೆ ಮುಲಾಜಿಲ್ಲದೆ ಬಿಸಿ ಮುಟ್ಟಿಸಿದ್ದ, ಅರ್ಜಿ ಗುಜರಾಯಿಸಿದ ಮೂವತ್ತು ದಿನಗಳ ಒಳಗಾಗಿ ಆದ ಕೆಲಸದ ದಾಖಲೆಗಳು ರೈತನ ಮನೆ ತಲುಪುವಂತೆ ವ್ಯವಸ್ಥೆಯನ್ನು ಚುರುಕುಗೊಳಿಸಿದ್ದ, ಬಡಮಕ್ಕಳಲ್ಲಿ ಶೈಕ್ಷಣಿಕ ಸ್ಫೂರ್ತಿಯನ್ನು ಚಿಮ್ಮಿಸುವ ಸಲುವಾಗಿ ವಾರಾಂತ್ಯದ



ಡಿ.ಕೆ. ರವಿ ಸಾವು

ಬೆತ್ತಲಾದ ಬಿಜೆಪಿ, ಬಯಲಾದ ರಹಸ್ಯ




ರವಿ ಶವದ ಮುಂದೆ ಮನೆಯವರ ರೋಧನೆ

ಶನಿವಾರ, ಭಾನುವಾರಗಳಂದು ತಾನೇ ಖುದ್ದಾಗಿ ವಿದ್ಯಾರ್ಥಿಗಳಿಗೆ ಐಎಎಸ್ ಕೋಚಿಂಗ್ ನೀಡುತ್ತಿದ್ದ. ಹಬ್ಬ-ಹರಿದಿನಗಳಲ್ಲಿ ಸಾಮಾನ್ಯರೊಟ್ಟಿಗೆ ಬೆರೆತು, ಮನೆಹೊಕ್ಕು ಮಾತಾಡಿಸಿ ಬರುತ್ತಿದ್ದ.....

ಇಂಥಾ ರವಿ ಯಾರಿಗೆ ತಾನೇ ಇಷ್ಟವಾಗುವುದಿಲ್ಲ, ಬಹುಶಃ ರವಿ ಇದಿಷ್ಟೇ ಆಗಿದ್ದಿದ್ದರೆ, ಆತ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಮೇಯವೂ ಬರುತ್ತಿರಲಿಲ್ಲವೇನೊ. ಆದರೆ ಡಿ.ಕೆ. ರವಿ ಕೂಡಾ ಎಲ್ಲರಂತೆ ಒಬ್ಬ ಮನುಷ್ಯ, ಅವನಿಗೂ ಒಂದು ನೆರಳಿತ್ತು, ಆ ನೆರಳಿನ ಕರಿ ಛಾಯೆಯೊಳಗೆ ಹುದುಗಿದ್ದ ಆಸೆ, ಆಕಾಂಕ್ಷೆ, ಹೆಬ್ಬಯಕೆ, ಪ್ರೇಮ, ವ್ಯವಹಾರ, ದುಡುಕು, ಪ್ರಚಾರಪ್ರಿಯತೆಗಳು ಸಮಗ್ಯಾರಿಗೂ ಗೋಚರಿಸದೆ ಒಳಗೊಳಗೇ ಆತನನ್ನು ಹತಾಶೆಯ ದಡಕ್ಕೆ ತಳ್ಳಿದ್ದವು. ಕೊನೆಗೆ ಅವೇ ಆತನನ್ನು ಆತ್ಮಹತ್ಯೆಯ ಹಾದಿ ಹಿಡಿಯುವಂತೆ ಪ್ರೇರೇಪಿಸಿವೆ.

ಡಿ.ಕೆ. ರವಿ ಮೇಲ್ನೋಟಕ್ಕೆ ಎಷ್ಟು ಕಠೋರ, ನೇರಾನೇರ ವ್ಯಕ್ತಿಯಂತೆ ಕಂಡುಬರುತ್ತಿದ್ದನೋ ಒಳಗೊಳಗೇ ಆತ ಅಷ್ಟೇ ಪ್ರಕ್ಷುಬ್ಧಿತ ವ್ಯಕ್ತಿತ್ವದವನಾಗಿದ್ದ ಅನ್ನೋದನ್ನು ಸಿಬಿಐ ವರದಿ ಪುರಾವೆಸಹಿತ ಸಾಬೀತುಮಾಡಿದೆ. ವರದಿಯ 9ನೇ ಪ್ಯಾರಾವನ್ನು ರವಿಯ ಈ ವಿಶ್ಲೇಷಣೆಗೇ ಮೀಸಲಿಟ್ಟಿರುವ ಸಿಬಿಐ ಆತ ಅತಿ ಸಂವೇದಿ, ಆವೇಗದ, ಆಕ್ರಮಣಶೀಲ ವ್ಯಕ್ತಿತ್ವದವನಾಗಿದ್ದ ಎಂದಿದೆ. ತನ್ನ ದೃಷ್ಟಿಕೋನವನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎನ್ನುವ ಮನೋಭಾವವೂ ಆತನಿಗಿತ್ತು, ಆತನ ಸಾರ್ವಜನಿಕ ಬದುಕಿನಲ್ಲಿ ಇವೆಲ್ಲ ಎಷ್ಟು ಸತ್ಯವೋ ಆತ ತನ್ನ ವೈಯಕ್ತಿಕ ಬದುಕನ್ನು ಅಷ್ಟೇ ಗೌಪ್ಯವಾಗಿ ಹುದುಗಿಸಿಕೊಂಡುಬಂದಿದ್ದ, ಖಾಸಗಿ ವಿಷಯಗಳನ್ನು ತೀರಾ ಆತ್ಮೀಯ ಸ್ನೇಹಿತರ ಬಳಿ ಹಂಚಿಕೊಳ್ಳುವುದಕ್ಕೂ ಆತ ಇಷ್ಟಪಡುತ್ತಿರಲಿಲ್ಲ, ಒಂದರ್ಥದಲ್ಲಿ ಅರ್ಥಮಾಡಿಕೊಳ್ಳಲಾಗದ ಒಗಟಿನ ಮನುಷ್ಯನಾಗಿದ್ದ. ಹತ್ತಿರವಾದವರಲ್ಲೂ ಎಷ್ಟು ಬೇಕೊ ಅಷ್ಟು ಮಾತ್ರವೇ ಮಾತಾಡಿ ಮುಗಿಸುತ್ತಿದ್ದ ಸೋಲು ಮತ್ತು ಹಿನ್ನಡೆಗಳಿಗೆ ಆತ ತುಂಬಾ ಹತಾಶನಾಗಿ ಪ್ರತಿಕ್ರಿಯಿಸುತ್ತಿದ್ದ, ಅವನ ಈ ಒಟ್ಟಾರೆ ಅಂತರ್ಮುಖಿ ಗುಣ ಅವನನ್ನು ಭಾವನಾತ್ಮಕವಾಗಿ ವಿಪರೀತ ಸಡಿಲವಾಗಿಸಿತ್ತು, ಆತನ ದಾಂಪತ್ಯ ಬದುಕಿನೊಳಕ್ಕೆ ತನ್ನ





ಟಿವಿ ಚಾನೆಲ್‌ಗಳ 'ವರದಿ' ವೈಖರಿ

ಬ್ಯಾಚ್‌ಮೇಟ್ ರೋಹಿಣಿ ಸಿಂಧೂರಿಯ...
ವಿವಂತಾ ಸ್ಟಾರ್ ಹೋಟೇಲಿನ ಮಸಾಜ್ ಬ್ಯೂ...
ಎಳೆದುತಂದದ್ದೇ ಇದೇ ಎಮೋಷನಲ್ ಹೊ...

ಯಾರವಳು ಶೆಲ್ಲಿ?

ಹಾಗೆ ನೋಡಿದರೆ ಡಿ.ಕೆ.ರವಿ ಇ...
ಜಿಲ್ಲೆಯೊಂದಕ್ಕೆ ಡಿಸಿಯಾಗುವ ಪಟ್ಟಿಯಲ್ಲಿರಲಿಲ್ಲ...
ಆತನಿಗಿಂತ ಸೀನಿಯರ್‌ಗಳಿನ್ನು ಡಿಸಿ ಹುದ್ದೆ ಕಾ...
ಎಕ್ಸಿಕ್ಯೂಟಿವ್ ಹುದ್ದೆಗಳಲ್ಲಿದ್ದಾರೆ. ಆದರೆ ...
ಎಂಪಿ ಹಾಗೂ ಆಗಿನ್ನೂ ಕೇಂದ್ರ ಮಂತ್ರಿಯಾಗಿ...
ಮುನಿಯಪ್ಪನವರೇ ಖುದ್ದಾಗಿ ಸಿಎಂ ಸಿದ್ದರಾ...
ಡಿ.ಕೆ. ರವಿಯನ್ನು ಕೋಲಾರದ ಡಿಸಿಯಾಗಿ...
ಮಾಡಿ ಅಂತ 15.07.2013 ಪತ್ರ ಬರೆದಿದ್ದರು...
ಜಿಲ್ಲಾ ಪಂಚಾಯತ್ ಸಿಇಒ ಆಗಿದ್ದ ಡಿ.ಕೆ. ...
ಭಾಗ್ಯ ಒದಗಿಬಂದಿತ್ತು. ಅದೇ ಹುಮ್ಮಸ್ಸಿನಲ್ಲಿ ರ...
ಕ್ರಿಯಾಶೀಲವಾಗಿ ದಿನದ ಇಪ್ಪತ್ನಾಲ್ಕು ...
ದುಡಿಯುತ್ತಿದ್ದ ಇದನ್ನು ಕಂಡ ರವಿಯ ಹೆಂಡತಿ ...
ಅದೊಮ್ಮೆ 'ಸ್ಪಾಗಳಿಗೆ ಹೋಗಿ ಬಾಡಿ ...
ಮಾಡಿಸಿಕೊಳ್ಳಿ, ದೇಹ, ಮನಸ್ಸು ರಿಲ್ಯಾಕ್ಸ್ ಆಗು...
ಸಲಹೆ ನೀಡಿದ್ದರು. ಆಗಿಂದ ರವಿ ರೆಗ್ಯು...
ಫೈವ್‌ಸ್ಟಾರ್ ಹೊಟೇಲಿಗೆ ಹೋಗಿ ...
ಮಾಡಿಸಿಕೊಂಡು ಬರುತ್ತಿದ್ದ. ಆಗ ...
ಪರಿಚಯವಾದದ್ದೇ ಈ ಶೆಲ್ಲಿ ಅಲಿಯಾಸ್ ...

ಈಕೆ ತಾಜ್ ವಿವಂತಾ ಹೊಟೇಲಿನ ಸ...
ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದಳು. ರವಿ, ಆಕೆ...
ಆತ್ಮೀಯತೆ ಬೆಳೆದಿದ್ದನ್ನು ಅವರಿಬ್ಬರ ಮೊಬೈಲ್...
ಸಂಭಾಷಣೆ ಮತ್ತು ಎಸ್‌ಎಂಎಸ್ ಸಂದೇಶಗಳ...
ಹಿಡಿಸುತ್ತಿವೆ. ತಾನು ಬಂದಾಗ ಆಕೆಯೇ ...
ಮಾಡಬೇಕೆಂದು ರವಿ ಬಯಸುತ್ತಿದ್ದುದಕ್ಕೆ ಆ...
ಹರಿಕೃಷ್ಣನ ಹೇಳಿಕೆಯೂ ಸಾಕ್ಷಿಯಿದೆ. ಅಲ್ಲದೇ...
ಮೀಟ್ ಮಾಡುವುದಕ್ಕೆಂದೇ ರವಿ ಕೋಲಾರದಿ...
ಬಾರಿ ಬಂದುಹೋಗಿದ್ದೂ ಉಂಟು. ರವಿ ...
ನಲ್ಲಿರುವ ಶೆಲ್ಲಿಯ ಎಚ್‌ಡಿಎಫ್‌ಸಿ ಬ್ಯಾಂಕ್ ...
ಒಮ್ಮೆ ಹತ್ತು ಸಾವಿರ, ಮಗದೊಮ್ಮೆ ಇಪ್ಪ...
ಹಣವನ್ನೂ ಡಿಪಾಸಿಟ್ ಮಾಡಿದ್ದ. ರವಿಯ ಎ...
ಎಂಗೇಜ್‌ಮೆಂಟ್ ಎನ್‌ಕ್ಯಾಶ್ ಮಾಡಿ...
ಸಲುವಾಗಿಯೇ ಆಕೆ ರವಿಯ ಬಳಿ ಐವ...
ರೂಪಾಯಿ ಬೇಡಿಕೆಯನ್ನೂ ಇಟ್ಟಿದ್ದಳು. ರ...
ಎಡವಟ್ಟು ಮಾಡಿಕೊಳ್ಳುತ್ತಿರುವುದು ಗೊತ್ತಾ...
ಆತ ಆಗ ವಿಪರೀತ ಗೊಂದಲಕ್ಕೂ ಒಳಗಾಗಿ...
ಸಮಯದಲ್ಲಿ ಅವನ ನೆರವಿಗೆ ಬಂದದ್ದು ...
ಸಿಂಧೂರಿ!

ಮಂಡ್ಯ ಜಿಲ್ಲಾ ಪಂಚಾಯತ್ ಸಿಇಒ...
ರೋಹಿಣಿ ಸಿಂಧೂರಿಗೆ ಡಿ.ಕೆ. ರವಿ ತಮ್ಮ...
ತರಬೇತಿ ದಿನದಿಂದಲೂ ಪರಿಚಯ. ಆಕೆ ತುಂಬ...
ಯೋಚಿಸಿ, ಸೂಕ್ತವಾದ ನಿರ್ಧಾರ ತೆಗೆದುಕೊ...
ಹೆಣ್ಣು ಅನ್ನೋ ಅಭಿಪ್ರಾಯ ರವಿಯ ಮನದಲ್ಲಿ...
ಅವಳ ಮೇಲೆ ಒಂದಷ್ಟು ಎಮೋಷನಲ್ ...
ಇತ್ತು, ಆದರೆ ಆ ದಿನಗಳಲ್ಲಿ ಅದನ್ನು ...
ಹೇಳಿಕೊಂಡಿರಲಿಲ್ಲ, ಮೊದಲೇ ಖಾಸಗಿ ಭಾ...
ಅದುಮಿಟ್ಟುಕೊಳ್ಳುವ ಅಂತರ್ಮುಖಿ ಗುಣ ...
ಹಾಗಾಗಿ ಆತ ರೋಹಿಣಿಯ ಬಳಿ ಪ್ರೀತಿಯನ್ನು...
ಹೇಳಿರಲಿಲ್ಲ, ಅದಾದಮೇಲೆ ಇತ್ತ ರವಿಗೆ ರಿಯಲ್...
ಉದ್ಯಮಿ ಹನುಮಂತರಾಯಪ್ಪನ ಮಗಳು ...
ಜೊತೆ ವಿವಾಹವಾದರೆ ರೋಹಿಣಿ ಸಿಂಧೂರಿ...
ರೆಡ್ಡಿಯ ಜೊತೆ ಮದುವೆಯಾಗಿತ್ತು, ಅಲ್ಲಿಂದಾ...
ನಡುವೆ ಸಂಪರ್ಕ ಇರಲಿಲ್ಲವಾದರೂ ರವಿ ...
ಡಿಸಿಯಾದ ನಂತರ ಮತ್ತೆ ಇಬ್ಬರ ನಡುವೆ...
ಆತ್ಮೀಯತೆಯ ಮಾತುಕತೆಗಳು ನಡೆಯಲು ಶುರು...

ಡಿ.ಕೆ. ರವಿ ತಾನು ಆತಂಕಕ್ಕೀಡಾದಾಗ...
ಗೊಂದಲಕ್ಕೀಡಾದಾಗ ರೋಹಿಣಿ ಸಿಂಧೂರಿ...
ಪಡೆಯುವ ಪರಿಪಾಠ ಬೆಳೆಸಿಕೊಂಡಿದ್ದ ಆತ ಕೋ...
ಟ್ರಾನ್ಸ್‌ಫರ್ ಆದಾಗ, ಇಷ್ಟವಿಲ್ಲದ ವಾಣಿಜ್ಯ ತೆರಿ...
ಉಪಾಯುಕ್ತ ಹುದ್ದೆಯ ಚಾರ್ಜ್ ತೆಗೆದುಕೊ...
ಆಡಳಿತಾತ್ಮಕ ಸಂದಿಗ್ಧತೆಗೆ ಸಿಲುಕಿದಂತಹ ಸಂ...
ಆತ ರೋಹಿಣಿ ಜೊತೆ ಸುದೀರ್ಘ ಚರ್ಚೆ...
ಇದನ್ನು ಸಾಬೀತುಮಾಡುತ್ತದೆ. ಇತ್ತ ಶೆಲ್ಲಿ...
ಮತ್ತೆಮತ್ತೆ ಹಣಕ್ಕೆ ಬೇಡಿಕೆ ಬಂದಾಗಲೂ ಒ...
ರವಿ ಮೆಂಟರಿಂಗ್ ಬಯಸಿದ್ದು ರೋಹಿಣಿ...
ಯಿಂದ. ಹಣ ಕೇಳುತ್ತಿದ್ದ ಶೆಲ್ಲಿಗೆ ಒಂದೆರಡು ...
ಕೊಡುವಂತೆ ಕೇಳಿಕೊಂಡಿದ್ದ ರವಿ ಆ ...
ಮೈಸೂರಿನಲ್ಲಿ ರೋಹಿಣಿ ಸಿಂಧೂರಿ ಜೊತೆ ...
ಹಂಚಿಕೊಂಡಿದ್ದರು. ಅಲ್ಲಿ ರೋಹಿಣಿ ಅದೇನು ...
ಹೇಳಿದರೋ ಏನೋ, ಆ ನಂತರದಲ್ಲಿ ರವಿ ...
ಸಂಪೂರ್ಣವಾಗಿ ಅವಾಯ್ಡ್ ಮಾಡಿದ. ಅ...
ಬದುಕಿನಲ್ಲಿ ಶೆಲ್ಲಿ ಅನ್ನೋ ಅಧ್ಯಾಯ ಕೊನೆ...

ಕುತ್ತಾಯ್ತು 'ರಿಯಲ್' ವ್ಯವ...

ಡಿ.ಕೆ. ರವಿ ಪ್ರಾಮಾಣಿಕ ಅಧಿಕಾರಿಯಾಗಿದ್ದ...
ವೈರಾಗಿಯೇನೂ ಆಗಿರಲಿಲ್ಲ, ಹಣದ ಮೇಲೆ...
ಇತ್ತು, ಆದರೆ ಆ ಹಣವನ್ನು ನ್ಯಾಯ ಮ...


ರೋಹಿಣಿ ಸಿಂಧೂರಿ

ಡಿ.ಕೆ.ರವಿ ಮತ್ತು ಸೂಸೈಡ್ ಸಿಂಡ್ರೋಮ್

ಡಿ.ಕೆ.ರವಿ ಇದಕ್ಕೂ ಮುನ್ನ ಒಮ್ಮೆ ಆತ್ಮಹತ್ಯೆಯ ಆಲೋಚನೆ ಮಾಡಿದ್ದೂ ಉಂಟು. ಮಸಾಜ್ ಬ್ಯೂಟಿ ಶೆಲ್ಲಿಯ ಸಹವಾಸದಿಂದ ಕಳಚಿಕೊಂಡ ನಂತರದ ಒಂದು ದಿನ (2014ರ ನವೆಂಬರ್ 27) ರವಿ ತುಂಬಾ ಆತಂಕಕ್ಕೀಡಾಗಿ ಎಲ್ಲರಲ್ಲೂ ಗಾಬರಿ ತರಿಸಿದ್ದ. ಅವತ್ತು ತನ್ನ ಗೆಳೆಯ ಹರಿಕೃಷ್ಣನ ಮನೆಗೆ ಹೋಗಿ ನನ್ನ ತಾಯಿಗೆ ಕೊಡುವುದಕ್ಕಾಗಿ ಬ್ಲಾಂಕ್ ಚೆಕ್‌ಗೆ ಸಹಿ ಹಾಕಿಕೊಡುವಂತೆ ಕೇಳಿದ್ದ (ತಮ್ಮ ಆರ್ ಅಂಡ್ ಎಚ್ ಕಂಪನಿ ಅಕೌಂಟಿನಿಂದ). ಆಮೇಲೆ ಮನೆಗೆ ಬಂದವನೇ ಹೆಂಡತಿ ಕುಸುಮಾಳ ಮಡಿಲಲ್ಲಿ ತಲೆಯಿಟ್ಟು ಚಿಕ್ಕಮಗುವಿನಂತೆ ಅತ್ತಿದ್ದ. ನಿನಗೂ ಮತ್ತು ನನ್ನ ತಾಯಿಗು ಜೀವನಕ್ಕೆ ಏನಾದರೊಂದು ಆಧಾರ ಮಾಡಬೇಕು ಅಂತ ಆತ ಪದೇಪದೇ ಅವಲತ್ತುಕೊಂಡಿದ್ದ.

ಹರಿಕೃಷ್ಣನ ಮಾತಿನಂತೆ ಮತ್ತೊಬ್ಬ ಗೆಳೆಯ ಚಂದ್ರಶೇಖರ್ ಬ್ಲಾಂಕ್ ಚೆಕ್ ತಂದು ರವಿಯ ಕೈಗಿಟ್ಟಾಗ ಆತ ವಿಪರೀತ ಸಂಕಟದಲ್ಲಿದ್ದಂತೆ ಕಂಡುಬಂತು. ಏನು ಅಂತ ವಿಚಾರಿಸಿದರೆ ಬಾಯ್ಬಿಟ್ಟಿರಲಿಲ್ಲ. ತಾನೇ ಸ್ವತಃ ಡ್ರೈವ್ ಮಾಡಿಕೊಂಡು ತಮ್ಮ ಹಳ್ಳಿಗೆ ಹೋಗುವುದಾಗಿ ಹೇಳಿ, ಡ್ರೈವರನ್ನೂ ಬಿಟ್ಟು ಒಬ್ಬನೇ ಹೋಗಿದ್ದ. ಮನೆಯಲ್ಲಿದ್ದ ಕುಸುಮಾಗೆ ಗಾಬರಿಯಾಗಿ ಚಂದ್ರಶೇಖರ್‌ಗೆ ಫೋನ್ ಮಾಡಿ ರವಿಯ ಜೊತೆಗೇ ಇರುವಂತೆ ಕೇಳಿಕೊಳ್ಳುವಷ್ಟರಲ್ಲಿ ಆತ ಒಬ್ಬನೇ ಹೊರಟಾಗಿತ್ತು.

ಆದರೂ ಚಂದ್ರಶೇಖರ್ ಹಿಂದೆಯೇ ಇನ್ನೊಂದು ಕಾರ್‌ನಲ್ಲಿ ರವಿಯ ಊರಿಗೆ ಬಂದಾಗ ಮನೆಯ ವರಾಂಡದಲ್ಲಿ ಕೂತಿದ್ದ ರವಿ ಅದೇನೋ ಪತ್ರ ಬರೆಯುತ್ತಿದ್ದ. ಆದರೆ ಚಂದ್ರಶೇಖರ್‌ನನ್ನು ನೋಡಿ ದಿಢೀರನೆ ಎತ್ತಿಟ್ಟು ಸಹಜವಾಗಿರುವಂತೆ ನಟಿಸಿದ್ದ. ಆದರೂ ಆತನಿಗೆ ವಿಶ್ವಾಸ ಬರಲಿಲ್ಲ. ಹಾಗಾಗಿ ಅವನ ಜೊತೆಗೇ ಇದ್ದು, ಅವನನ್ನು ಮಂಗಳೂರಿನ ಒಂದು ದೇವಸ್ಥಾನಕ್ಕೆ ಕರೆದೊಯ್ದು ಚಿಂತೆಯಿಂದ ಹೊರಬರುವಂತೆ ಮಾಡಿ ಕರೆತಂದಿದ್ದರು.

ಇದಕ್ಕೂ ಮುನ್ನ ಡಿ.ಕೆ. ರವಿ, ಶಿವರಾಜ್ ಎಂಬ ತನ್ನ ಎಸ್‌ಐ ಸ್ನೇಹಿತನಿಂದ ಮೆಡಿಕಲ್ ಶಾಪ್ ಓನರೊಬ್ಬನ ಸಂಪರ್ಕ ಗಿಟ್ಟಿಸಿಕೊಂಡು ಅವನ ಬಳಿ ಪೊಟ್ಯಾಶಿಯಂ ಸಯನೈಡ್ ಸಿಗುತ್ತಾ ಅಂತ ಕೇಳಿದ್ದು ಇಲ್ಲಿ ಗಮನಾರ್ಹ ಸಂಗತಿ. ನೆನಪಿರಲಿ ಪೊಟ್ಯಾಶಿಯಂ ಸಯನೈಡ್ ಒಂದು ಅಪಾಯಕಾರಿ ಮಾರಣಾಂತಿಕ ರಾಸಾಯನಿಕ!

…ದನೆ ಮಾಡಬೇಕೆನ್ನುವುದು ಆತನ ಉದ್ದೇಶವಾಗಿತ್ತು. …ರ್ವಿಸ್ ಮುಗಿಯುವುದರೊಳಗೆ ನ್ಯಾಯಬದ್ಧವಾಗಿ … ಕೋಟಿ ರೂಪಾಯಿ ಸಂಪಾದನೆ ಮಾಡಿಕೊಂಡು …ೀ ಸ್ವಂತ ಕಂಪನಿ ಸ್ಥಾಪಿಸಿಕೊಳ್ಳಬೇಕೆನ್ನುವುದು ರವಿಯ …ಗಿತ್ತು. ಅಂತಹ ದಿಢೀರ್ ಸಂಪಾದನೆಗೆ ಆತ ಆಯ್ಕೆ …ಕೊಂಡದ್ದು ರಿಯಲ್ ಎಸ್ಟೇಟ್ ವ್ಯವಹಾರವನ್ನು. …ಆ ವ್ಯವಹಾರಕ್ಕೆ ಕೈ ಹಾಕುತ್ತೇನೆ ಅಂದಾಗ ಆತನ …ಪಿಗಳು, ಬ್ಯಾಚ್‌ಮೇಟ್‌ಗಳು 'ಸಾರ್ವಜನಿಕ …ನದಲ್ಲಿರೋ ನಿನಗೆ ಇದು ತಕ್ಕುದಲ್ಲ, ಒಂದಲ್ಲ ಒಂದು …ನಿನ್ನ ಕೆರಿಯರ್‌ಗೆ ಕಪ್ಪುಚುಕ್ಕೆ ಆಗುತ್ತೆ' ಅಂತ ಬುದ್ಧಿ …ದ್ದರು. ಆದರೆ ಅದೆಲ್ಲವನ್ನು ತಲೆಗೆ ಹಾಕಿಕೊಳ್ಳಲೇ … ತನ್ನ ಗೆಳೆಯರಾದ ರಿಯಲ್ ಎಸ್ಟೇಟ್ ಉದ್ಯಮಿ …ಕೃಷ್ಣ ಮತ್ತು ಚಂದ್ರಶೇಖರ್ ಜೊತೆ ಸೇರಿ 'ಆರ್ … ಎಚ್ ಪ್ರಾಪರ್ಟಿ' ಹೆಸರಿನಲ್ಲಿ ದುಸ್ಸಾಹಸಕ್ಕೆ …ಕಿಯೇಬಿಟ್ಟ. ಅದೇ ಅವನ ಬದುಕಿಗೆ ದೊಡ್ಡ ಆಘಾತ …ಯ್ತು.

…ಆತನ ಮಾವ ಹನುಮಂತರಾಯಪ್ಪನೇ ಈ …ವಾರಕ್ಕೆಂದು ಎರಡು ಕೋಟಿ ರೂಪಾಯಿ ನೆರವು …ದ್ದರು. ಇನ್ನು ಪಾರ್ಟ್‌ನರ್‌ಶಿಪ್ ನೆಪದಲ್ಲಿ ಹರಿಕೃಷ್ಣ …ಐವತ್ತೈದು ಲಕ್ಷ ಹೂಡಿಕೆ ಮಾಡಿದ್ದ. ಆದರೆ ಅಂಥಾ …ಟ್ ವ್ಯವಹಾರಕ್ಕೆ ಅದೆಲ್ಲ ಎಲ್ಲಿ ಸಾಕಾಗಬೇಕು. ಆಗ …ಪರಿಚಯಸ್ಥರು, ಸ್ನೇಹಿತರನ್ನು ಸಂಪರ್ಕಿಸಿ ಅದರಲ್ಲಿ …ಡಿಕೆ ಮಾಡುವಂತೆ ರವಿ ಮನವೊಲಿಸುವ …ರ್ಕೆಳಿದಿದ್ದ. ರೋಹಿಣಿ ಸಿಂಧೂರಿಯೂ ಸೇರಿದಂತೆ …ಷ್ಟು ಮಂದಿ ಸಣ್ಣ ಗಂಟನ್ನೂ ಹೂಡಿದ್ದರು. ಈ …ದೆ ಕೋಲಾರ ಡೀಸಿಯಾಗಿದ್ದಾಗ ರವಿಗೆ ಪರಿಚಯ …ದ್ದ ಜಲ್ಲಿ ಕ್ರಷರ್ ಕುಳ ಸೊಣ್ಣೇಗೌಡ ಎರಡು ಕೋಟಿ …ಪಾಯಿ ಕಾಸು ಸುರಿದಿದ್ದ. ಈ ದುಡ್ಡಿನಿಂದ ರವಿ ತನ್ನ …ಟ್ ಉದ್ಯಮಕ್ಕೆ ಆಯ್ಕೆ ಮಾಡಿದ್ದು ಶಿಡ್ಲಘಟ್ಟ …ತಾಲ್ಲೂಕಿನ ಸೆಗಟೂರಿನ ಅಜಮಾಸು 100 ಎಕರೆ ಎಸ್ಸಿ …ಳಿಗೆ ಸೇರಿದ ಜಮೀನನ್ನು! ಆ ಭೂಮಿಯನ್ನು …ದ ಪರಿಶಿಷ್ಟ ಜಾತಿಯವರಿಗೆ ಉಂಬಳಿ ಜಮೀನಾಗಿ …ತ್ತು, ಅದನ್ನು ಮಾರಾಟ ಮಾಡುವುದು ಅಷ್ಟು …ಭವಾಗಿರಲಿಲ್ಲ. ಹೀಗೆ ಪಡೆದ ಜಮೀನಿಗೆ ಕನಿಷ್ಠ …ವರ್ಷ ಆತ ಯಜಮಾನನಾಗಿದ್ದು, ಮಾರಿದ ಹಣದಿಂದ …ಂದು ಕಡೆ ಜಮೀನು ಖರೀದಿಸುತ್ತಿರುವುದಕ್ಕೆ ಪುರಾವೆ …ದರೆ ಮಾತ್ರ ಆ ವ್ಯಕ್ತಿ ಜಮೀನು ಮಾರಾಟ …ಬಹುದಿತ್ತು. ಡಿ.ಕೆ. ರವಿ ತನಗಿದ್ದ ಸ್ನೇಹ ಪ್ರಭಾವವನ್ನು … ಚಿಕ್ಕಬಳ್ಳಾಪುರದ ಡಿಸಿ ವೆಂಕಟೇಶ್ ಮೂಲಕ …ಯೆಗೆ ವೇಗ ಕೊಡಿಸಿದ್ದ. ಅದೇ ಖಾತ್ರಿಯಲ್ಲಿ ಜಮೀನಿನ …ೀಕರಿಗೆ ಸುಮಾರು ಎರಡು ಕೋಟಿಯಷ್ಟು ಹಣವನ್ನು …ಗಡವಾಗಿ ಕೊಟ್ಟು ಸೇಲ್ ಡೀಡ್ ಕೂಡಾ …ಸಿಕೊಂಡಿದ್ದ.

…ಗಲೇ ನೋಡಿ ಡಿ.ಕೆ ರವಿಗೆ ರಿಯಲ್ ಎಸ್ಟೇಟ್ …ಯ ಅಸಲಿಯತ್ತ ಅರಿವಿಗೆ ಬಂದದ್ದು. ಸುರೇಶ್ …ತ ರವಿಯ ಪಾರ್ಟ್ನರ್ ಹರಿಕೃಷ್ಣನಿಗೆ ಫೋನಾಯಿಸಿ, … ಈ ಮೊದಲೇ ಜಮೀನಿನ ಮಾಲೀಕರುಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಅಷ್ಟೂ ಜಮೀನು ನನಗೇ ಸೇರಬೇಕು ಅಂತ ತಕರಾರು ತೆಗೆದಿದ್ದ. ಅದೇ ವೇಳೆಗೆ ಜಮೀನು ಮಾರಾಟ ಮಾಡಲು ಸರ್ಕಾರದಿಂದ ಅನುಮತಿಯೂ ಸಿಕ್ಕಿತ್ತು. ರವಿ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡಿದ್ದ ರೈತರು ಹೆಚ್ಚಿನ ಹಣದಾಸೆಗೆ ಬೇರೆಯವರಿಗೆ ಜಮೀನು ಮಾರಲು ಶುರು ಮಾಡಿದ್ದರು. ಅತ್ತ ಜಮೀನೂ ಇಲ್ಲ, ಇತ್ತ ಮುಂಗಡ ಕೊಟ್ಟ ಕಾಸೂ ಇಲ್ಲದಂತಾದಾಗ ಡಿ.ಕೆ. ರವಿ, ಹರಿಕೃಷ್ಣನ ಮೂಲಕ ಶಿಡ್ಲಘಟ್ಟ ಸ್ಟೇಷನ್‌ನಲ್ಲಿ ರೈತರು ಮತ್ತು ಸುರೇಶ್ ಮೇಲೆ ಕೇಸು ದಾಖಲಾಗುವಂತೆ ನೋಡಿಕೊಂಡಿದ್ದ. ಆಗ ಈ ವಿವಾದದ ಮಧ್ಯಸ್ಥಿಕೆ ವಹಿಸಿದ್ದು ಮತ್ತದೇ ಕೆ.ಎಚ್. ಮುನಿಯಪ್ಪ. ಬೆಂಗಳೂರಿನ ಮುನಿಯಪ್ಪನವರ ಮನೆಯಲ್ಲಿ ನಡೆದ ಸಂಧಾನದಂತೆ ಒಟ್ಟು ಜಮೀನನ್ನು ಎರಡು ಭಾಗ ಮಾಡಿ ಒಂದು ಭಾಗ ರವಿ ಕಂಪನಿಗೂ ಮತ್ತೊಂದು ಭಾಗ ಸುರೇಶ್‌ಗೂ ಸೇರುವಂತೆ ಇತ್ಯರ್ಥ ಮಾಡಲಾಗಿತ್ತು. ಆಗಲೂ ಸಹ ಮುನಿಯಪ್ಪ 'ನಿನ್ನಂತಹ ಸರ್ಕಾರಿ ಅಧಿಕಾರಿಗೆ ಈ ರಿಯಲ್ ಎಸ್ಟೇಟ್ ಉದ್ಯಮದ ಉಸಾಬರಿ ಬೇಡ' ಅಂತಲೇ ಬುದ್ಧಿ ಹೇಳಿದ್ದರು. ಆದರೆ ಹೆಗಲೇರಿದ್ದ ಶನಿ ಬಿಡಬೇಕಲ್ಲ!

ಮತ್ತೆ ಚಿಗುರಿದ ಪ್ರೇಮಕಾವ್ಯ

ಈ ಮೊದಲು ಶನಿವಾರ, ಭಾನುವಾರ ಬಂತೆಂದರೆ ಮಕ್ಕಳಿಗೆ ಕೋಚಿಂಗ್ ಕೊಡುತ್ತಿದ್ದ ರವಿ ಈಗ ಅದೇ ಶನಿವಾರ, ಭಾನುವಾರಗಳನ್ನು ತನ್ನ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಜಮೀನು ಹುಡುಕುವುದಕ್ಕೆ ಮೀಸಲಿಡುವಷ್ಟು ಬದಲಾಗಿ ಹೋಗಿದ್ದ. ಭಾವನಾತ್ಮಕ ವಿಷಯಗಳಿಗೇ ವಿಪರೀತ ಕನಲಿಹೋಗುತ್ತಿದ್ದ ರವಿಯ ಸೂಕ್ಷ್ಮ ಮನಸ್ಸು ಈಗ ವ್ಯಾವಹಾರಿಕ ಜಟಿಲತೆಗೆ ಸಿಲುಕಿ ತನ್ನ ಮೇಲಿನ ಹತೋಟಿಯನ್ನೇ ಕಳೆದುಕೊಂಡಿತ್ತು. ಪ್ರಾಮಾಣಿಕತೆ, ನ್ಯಾಯಬದ್ಧ ಅಂತ ಕನವರಿಸುತ್ತಿದ್ದ ರವಿ ತನ್ನ ಅಧಿಕಾರವನ್ನು ಬಳಸಿಕೊಂಡು ನಿಯಮ ಉಲ್ಲಂಘನೆ ಮಾಡಿ ಆದಾಯ ತೆರಿಗೆ ವಿಚಕ್ಷಣಾ ದಳದ ಮೂಲಕ ತನಗೆ ತೊಂದರೆ ಕೊಡುತ್ತಿದ್ದ ಸುರೇಶ್‌ನ ಮನೆ, ಕಚೇರಿಗಳ ಮೇಲೆ ದಾಳಿ ಮಾಡುವಂತೆ ಮಾಡಿದ್ದು ಇದಕ್ಕೊಂದು ನಿದರ್ಶನ. ಅಸಲಿಗೆ ವಿಚಕ್ಷಣಾ ದಳಕ್ಕೆ ರೇಡು ಮಾಡುವ ಅಧಿಕಾರ ಇರುವುದಿಲ್ಲ.

ಹೀಗೆ ದಿನೇದಿನೇ ಖಿನ್ನತೆಗೆ ಜಾರುತ್ತಿದ್ದ ಡಿ.ಕೆ. ರವಿಯ ಮನಸ್ಸಿನಲ್ಲಿ ತನಗೆ ಹತ್ತಿರವಾಗುತ್ತಿದ್ದ ರೋಹಿಣಿ ಸಿಂಧೂರಿ ಮೇಲೆ ಮತ್ತೆ ಪ್ರೀತಿ ಚಿಗುರೊಡೆಯಲು ಆರಂಭಿಸಿತ್ತು. ಆಕೆಯೊಂದಿಗೆ ಹೊತ್ತಲ್ಲದ ಹೊತ್ತಲ್ಲಿ ಗಂಟೆಗಟ್ಟಲೆ ಫೋನ್‌ನಲ್ಲಿ ಮಾತನಾಡಲು ಶುರು ಮಾಡಿದ್ದ. ಚಿಕ್ಕ ವಯಸ್ಸಿನಲ್ಲೇ ತನ್ನ ಡೈನಾಮಿಕ್ ಕೆಲಸದಿಂದ ಜನರ ಮೆಚ್ಚುಗೆ ಗಳಿಸಿದ ಗೆಳೆಯನೆಂಬ ಅಭಿಮಾನದಿಂದ ಆಕೆಯೂ ಮೊದಮೊದಲು ರವಿ ಜೊತೆಗೆ ಆತ್ಮೀಯವಾಗಿ ಮಾತನಾಡುತ್ತಿದ್ದಳು. ಒಮ್ಮೆ ಅದು ರವಿಯ ಹೆಂಡತಿ ಕುಸುಮಾಗೆ ಗೊತ್ತಾಗಿ ದೊಡ್ಡ ರಾದ್ಧಾಂತವೇ ನಡೆದುಹೋಗಿತ್ತು.

ಮಸಾಜ್ ಬ್ಯೂಟಿ ಶೆಲ್ಲಿ ಮತ್ತು ರಿಯಲ್ ಎಸ್ಟೇಟ್ ವ್ಯವಹಾರದ ನಂತರ ರೋಹಿಣಿಯ ಸಲಹೆಗೆ ರವಿ ವಿಪರೀತ ಅವಲಂಬಿತನಾಗಿದ್ದ. ಅಲ್ಲದೇ ತನ್ನ ವ್ಯವಹಾರದಲ್ಲಿ ಇನ್ನೂ ಹೆಚ್ಚು ಹಣ ತೊಡಗಿಸುವಂತೆಯೂ ರವಿ ರೋಹಿಣಿಗೆ ದುಂಬಾಲು ಬಿದ್ದಿದ್ದ. ಆದರೂ ಆಕೆ ಒಳ್ಳೆಯ ಗೆಳೆಯನೆಂಬ ಕಾರಣಕ್ಕೆ ನಿಷ್ಠುರವಾಗಿ ವರ್ತಿಸಿರಲಿಲ್ಲ. ಆದರೆ ರವಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಕೆಲ ದಿನಗಳ ಹಿಂದಿನಿಂದ ರವಿಯ ವರ್ತನೆ ಸಂಪೂರ್ಣ ಬದಲಾಗಿಹೋಗಿತ್ತು. ರೋಹಿಣಿಯನ್ನು ವ್ಯವಹಾರ ಮತ್ತು ಆಡಳಿತದ ಹೊರತಾಗಿ ಖಾಸಗಿಯಾಗಿ ತನ್ನ ಬದುಕಿನೊಳಗೆ ಎಳೆದುತರಲು ಆತ ಹಂಬಲಿಸಿದ್ದ. ರವಿ ಆಕೆಗೆ ಕಳುಹಿಸಿದ ವ್ಯಾಟ್ಸಪ್ ಸಂದೇಶಗಳು ಇದನ್ನು ಇಂಚಿಂಚೂ ಸಾಬೀತುಮಾಡುತ್ತವೆ. ಒಂದು ಹಂತದಲ್ಲಿ ರೋಹಿಣಿಗೂ ಇದು ಅತಿಯಾಯಿತು ಅನ್ನಿಸಿರಬೇಕು, ರವಿಯನ್ನು ಉದ್ದೇಶಪೂರ್ವಕವಾಗಿ ಅವಾಯ್ಡ್ ಮಾಡಲು ಶುರು ಮಾಡಿದ್ದಳು. ಮೊದಲೇ ಖಿನ್ನತೆಗೆ ಜಾರಿದ್ದ ರವಿಗೆ ಇದು ಇನ್ನಷ್ಟೂ ಆಘಾತ ತಂದಿಕ್ಕಿತು. ಆತ ಸಹಜತೆಯಿಂದ ಸಂಪೂರ್ಣ ಜಾರಿಹೋಗಿದ್ದ. ಆತ ಕೊನೆಯದಾಗಿ ರೋಹಿಣಿಗೆ ಕಳುಹಿಸಿದ ಸಂದೇಶವೇ ಇದಕ್ಕೆ ಸಾಕ್ಷಿ.

'ಇದು ನಿನಗೆ ನನ್ನ ಕೊನೆಯ ಸಂದೇಶ. ನನ್ನ ಮನಸ್ಸನ್ನು ಸ್ಪಷ್ಟವಾಗಿ ತೆರೆದಿಡಲು ಇದನ್ನು ಕಳುಹಿಸುತ್ತಿದ್ದೇನೆ. ನಾನು ಸ್ವಾರ್ಥಿಯಲ್ಲ, ಉದ್ದೇಶ, ಗುರಿ, ಸಾಧನೆಗಳಿಂದಲೇ ಕಟ್ಟಿಕೊಂಡ ಬದುಕು ನನ್ನದು. ಯಾರಿಗೂ ಕೇರ್ ಮಾಡದೆ ಬದುಕಿದವ ನಾನು. ಹಳ್ಳಿಯ, ಬಡತನದ ಪರಿಸರದಿಂದ ಮೇಲೆದ್ದು ಬಂದ ನಾನು ಇವತ್ತು ಸೋತಿದ್ದೇನೆ. ಬದುಕುವ ಯಾವ ಭರವಸೆಯೂ ನನಗೆ ಉಳಿದಿಲ್ಲ. ಕಳೆದ ಕೆಲ ವರ್ಷಗಳಿಂದ ನೀನು ನನಗೆ ಸ್ಫೂರ್ತಿಯಾಗಿ ದಾರಿ ತೋರುತ್ತಾ ಬಂದೆ. ನಾನು ನಿನ್ನನ್ನು ಆಳವಾಗಿ ಪ್ರೀತಿಸುತ್ತಿದ್ದೇನೆ. ನನ್ನ ಪ್ರೀತಿಯನ್ನು ನೀನು ಅನುಮಾನಿಸುವುದಕ್ಕೆ ಸಾಧ್ಯವೇ ಇಲ್ಲ. ನಿನ್ನ ಸೌಂದರ್ಯದ ಮೇಲೆ ಮೋಹಿತನಾಗಿದ್ದರೆ, ನನ್ನ ಆಸೆ ತೀರಿಸಿಕೊಳ್ಳಲು ನಿನಗಿಂತ ಸುಂದರಿಯರು ಸಿಗುತ್ತಿದ್ದರು. ಆದರೆ ನನಗೆ ನಿನ್ನ ಮೇಲಿರುವುದು ಆದರ, ಅಭಿಮಾನ, ನಿಷ್ಕಲ್ಮಶ ಪ್ರೀತಿ. ನನ್ನನ್ನು ಅಷ್ಟು ಪ್ರೀತಿಸುತ್ತಿದ್ದರೆ ಬೇರೆ ಮದುವೆ ಏಕೆ ಆದೆ? ಅಂತ ನೀನು ಕೇಳಬಹುದು. ನಿನ್ನಿಂದ ಹುಚ್ಚನಾಗಿ ಬಿಡುವುದನ್ನು ತಪ್ಪಿಸಿಕೊಂಡು ನಿನ್ನನ್ನು ಮರೆಯುವ ಸಲುವಾಗಿ ಮದುವೆಯಾದೆ. ಆದರೆ ನಾನೆಂತ ತಪ್ಪು ಮಾಡಿದೆ ಅಂತ ಆಮೇಲೆ ಗೊತ್ತಾಯಿತು. ನಿನ್ನನ್ನು ಪಡೆಯುವವರೆಗೆ ನಾನು ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ನೀನು ನನಗೆ ವಾಸ್ತವವನ್ನು ತೋರಿಸಿದೆ, ಸಭ್ಯತೆಯನ್ನು ಕಲಿಸಿದೆ, ನನ್ನನ್ನು ಹೀರೊ ಮಾಡಿದೆ, ನೀನೇ ನನ್ನ ಪಾಲಿನ ನಿಜವಾದ ಅದೃಷ್ಟದೇವತೆ. ಇದಕ್ಕೆ ಕೊನೆಯಿಲ್ಲ: ಅಂತ ಗೊತ್ತಾದಮೇಲೂ ನಾನು ಈ ವಿಚಾರವನ್ನು ಎಳೆಯಲು ಸಿದ್ಧನಿಲ್ಲ, ನೀನು ನಿನ್ನ ದಾಂಪತ್ಯ ಜೀವನದಲ್ಲಿ ಸುಖವಾಗಿರು, ನಾನು ಸತ್ತು ನೆಮ್ಮದಿಯಾಗುತ್ತೇನೆ. ಇದನ್ನು ಅಂತ್ಯಗಾಣಿಸಬೇಕೆಂದರೆ ಇರೋದು ಎರಡೇ ದಾರಿ; ಒಂದು ನಾನು ಸಾಯಬೇಕು ಅಥವಾ ನಿನ್ನ ಪ್ರೀತಿಯನ್ನು ಮರೆಯಬೇಕು. ಎರಡನೆಯದಂತೂ ಸಾಧ್ಯವಿಲ್ಲ, ನಿನ್ನ ಮೇಲಿನ ನನ್ನ ಪ್ರೀತಿ ನಿಜವಾದದ್ದು, ಶಾಶ್ವತವಾದದ್ದು ಅಮರವಾದದ್ದು. ಹಾಗಾಗಿ ಸಾವೇ ಪರಿಹಾರ. ಜೀವನದಲ್ಲಿ ಸೋತಿದ್ದೇನೆ ಅಂತ ಗೊತ್ತಾದಮೇಲೆ ಗುರಿ, ಉದ್ದೇಶವಿಲ್ಲದೆ ನಾನು ಒಂದು ಪ್ರಾಣಿಯಂತೆ ಬದುಕುತ್ತಿದ್ದೇನೆ. ಪ್ರೀತಿಸಿದ ಹುಡುಗಿಯನ್ನು ಪಡೆಯದಿದ್ದ ಮೇಲೆ ಬದುಕಿದ್ದು ಏನು ಪ್ರಯೋಜನ..... ನನ್ನ ಆತ್ಮ ನಿನ್ನ ಯಶಸ್ಸುಗಳನ್ನು ಕಾಣಲು ನಿನ್ನ ಜೊತೆಗೇ ಇರುತ್ತೆ..... ನಿನ್ನನ್ನು ತಬ್ಬಿ ಮುತ್ತಿಡಬೇಕೆನ್ನುವುದು ನನ್ನ ಕೊನೆಯ ಆಸೆ. ಆದರೆ ಅದು ಸಾಧ್ಯವಾಗದು ಅನ್ನೋದು ನನಗೆ ಚೆನ್ನಾಗಿ ಗೊತ್ತಿದೆ. ಹಾಗಾಗಿ ಕಡೇಪಕ್ಷ ನನ್ನ ಸಾವಿನ ಸುದ್ದಿ ತಿಳಿದ ಮೇಲಾದರು ನೀನು ಬಂದು ನನ್ನನ್ನು ನೋಡಿ, ಸಾಧ್ಯವಾದರೆ ತಬ್ಬಿಕೊಂಡು ಮುತ್ತಿಡಲಿ ಹಾಗೂ ನನ್ನ ಆತ್ಮಕ್ಕೆ ಶಾಂತಿ ಸಿಗಲೆಂದು ಶಿವನಲ್ಲಿ ಬೇಡಿಕೊಳ್ಳಲಿ ಎಂದು ನಾನು ಬಯಸುತ್ತೇನೆ....'

ಇಂತಹದ್ದೊಂದು ಮೆಸೇಜ್ ರವಿಯ ಮನಸ್ಸು ಅದೆಷ್ಟು ಶಿಥಿಲಾವಸ್ಥೆಗೆ ತಲುಪಿತ್ತು ಅನ್ನೋದನ್ನು ಬಿಡಿಸಿ ಹೇಳುತ್ತೆ. ರೋಹಿಣಿಗೂ ಅದನ್ನು ನೋಡಿ ಗಾಬರಿಯಾಗಿತ್ತು. ಈ ಹಿಂದೆಯೂ ರವಿ ಇಂಥಾ ಮೆಸೇಜು ಕಳಿಸಿದ್ದನಾದರೂ ಈ ಸಂದೇಶ ಅದ್ಯಾಕೋ ಆಕೆಗೆ ಅಪಶಕುನದಂತೆ ಕಂಡುಬಂದಿತ್ತು. ಹಾಗಾಗಿ ಸಂದೇಶ ಕಳುಹಿಸಿದ ಬೆನ್ನಲ್ಲೇ ರವಿ ಫೋನ್ ಮಾಡಿದಾಗ ತಾನು ರಿಸೀವ್ ಮಾಡುವ ಬದಲು ಗಂಡ ಸುಧೀರ್ ರೆಡ್ಡಿಯ ಕೈಗೆ ಫೋನ್ ಇಟ್ಟಿದ್ದಳು. ಅಷ್ಟೊತ್ತಿಗಾಗಲೇ ಸುಧೀರ್ ರೆಡ್ಡಿಯೂ ಸಂದೇಶ ಓದಿದ್ದ. ರೋಹಿಣಿಯ ಧ್ವನಿ ಕೇಳಲು ಹಂಬಲಿಸಿದ್ದ ರವಿಗೆ ಅತ್ತ ಆಕೆಯ ಗಂಡ ಮಾತಾಡುತ್ತಿರುವುದು ಗೊತ್ತಾಗುತ್ತಿದ್ದಂತೆಯೇ ತಡಬಡಿಸಿ ಕುಶಲೋಪರಿ ವಿಚಾರ ಮಾಡಿ ಮತ್ತೆ ಫೋನ್ ಮಾಡುವುದಾಗಿ ಹೇಳಿ ಕಾಲ್ ಡಿಸ್‌ಕನೆಕ್ಟ್ ಮಾಡಿದ್ದ. ಯಾವಾಗ ತನ್ನ ಈ ಪ್ರೇಮಪ್ರಸಂಗ ಆಕೆಯ ಗಂಡನಿಗೆ ಗೊತ್ತಾಗಿಹೋಯಿತು ಅನ್ನೋ ಪಾಪಪ್ರಜ್ಞೆ ರವಿಗೆ ಕಾಡಲು ಶುರು ಮಾಡಿತೋ ಆಗ ಅವನ ಸೂಕ್ಷ್ಮ ಮನಸ್ಸು ತಡಮಾಡದೆ ಆತ್ಮಹತ್ಯೆಯ ಪರಿಹಾರ ಸೂಚಿಸಿತ್ತು. ತಕ್ಷಣವೇ ಆಫೀಸಿನಿಂದ ತನ್ನ ಅಪಾರ್ಟ್‌ಮೆಂಟ್‌ಗೆ ವಾಪಸಾಗಿ ಸೀಲಿಂಗ್ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ.

ಇಡೀ ಪ್ರಕರಣದಲ್ಲಿ ಡಿ.ಕೆ. ರವಿಯ ಮಾನಸಿಕ ಸ್ಥಿತಿ ಮತ್ತು ವ್ಯಾವಹಾರಿಕ ಇಕ್ಕಟ್ಟುಗಳೇ 'ಕೊಲೆಗಡುಕ' ಸ್ಥಾನದಲ್ಲಿ ನಿಲ್ಲುತ್ತವೆ. ಅಂತಹ ಒಬ್ಬ ಪ್ರಾಮಾಣಿಕ ಅಧಿಕಾರಿ ಹೀಗೆ ಕ್ಷುಲ್ಲಕವಾಗಿ ಕೊನೆಯಾಗಿ ಹೋಗಿದ್ದು ನಿಜಕ್ಕೂ ದುರಂತ. ಆದರೆ ನಮ್ಮ ಆತುರಗೇಡಿ ಮಾಧ್ಯಮಗಳು ಮತ್ತು ಲಜ್ಜೆಗೆಟ್ಟ ರಾಜಕಾರಣಿಗಳು ಆತನ ಪ್ರಾಮಾಣಿಕತೆಯನ್ನೇ ಬಂಡವಾಳ ಮಾಡಿಕೊಂಡು ಸತ್ತ ರವಿಯ ಆತ್ಮವನ್ನು ಎಲ್ಲೆಲ್ಲೋ ಎಳೆದಾಡಿ, ಸಾವಿನಲ್ಲಿ ಆತ ಬಯಸಿದ್ದ ನೆಮ್ಮದಿಯೂ ಅವನಿಗೆ ಸಿಗದಂತೆ ಮಾಡಿದ್ದು ಅದಕ್ಕಿಂತಲೂ ಘನಘೋರ ದುರಂತ. ಇನ್ನಾದರು ಇವರು ಪಾಠ ಕಲಿಯುತ್ತಾರಾ? ತಾಳ್ಮೆ ರೂಢಿಸಿಕೊಳ್ಳುತ್ತಾರಾ?

ರವಿಯ ಸಾವು ನಿಜಕ್ಕೂ ಗಂಭೀರವಾದುದೇ, ಆದರೆ ಬಿಜೆಪಿ ಬೊಬ್ಬಿರಿದಂತೆ ರಾಜಕೀಯ ಕಾರಣಕ್ಕಲ್ಲ; ನಮ್ಮ ಮನುಷ್ಯ ಯುವಪೀಳಿಗೆ ಅಗಾಧ ಪಾಂಡಿತ್ಯದ ಹೊರತಾಗೂ ಎಂಥಾ ಕ್ಷುಲ್ಲಕ ಮನೋಶಿಥಿಲತೆಯ ಕಡೆಗೆ ಸಾಗುತ್ತಿದೆ ಅನ್ನೋದನ್ನು ಮನವರಿಕೆ ಮಾಡಿಕೊಳ್ಳುವ ಕಾರಣಕ್ಕೆ.....


■ ಗಿರೀಶ್ ತಾಳಿಕಟ್ಟೆ


ರವಿ ಸಾವಿನಲ್ಲಿ ಬಿಜೆಪಿಗಳ ಬೀದಿ ರಾಜಕಾರಣ



ರವಿ ಸಾವಿಗೆ ಜಾರ್ಜ್ ತಳುಕು ಹಾಕುವ ಸಾಂಘಿಕ ಕೇಸರಿ ಪ್ರಯತ್ನ

ಮಂಡ್ಯ: ಜಡೇಜಾ ರವಿ ಹಂತಕರ ಶಿಕ್ಷೆ ರದ


ಜಡೇಜಾ ರವಿ

ಮಂಡ್ಯ ನಗರಸಭೆ ಸದಸ್ಯನೂ ಆಗಿದ್ದ ಕುಖ್ಯಾತ ರೌಡಿ ಜಡೇಜಾ ರವಿಯನ್ನು ಹಾಡುಹಗಲೇ ಭೀಕರವಾಗಿ ಕೊಚ್ಚಿ ಕೊಲೆ ಮಾಡಿದ್ದ 12 ಮಂದಿ ಆರೋಪಿಗಳಿಗೆ ಮಂಡ್ಯ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ರದ್ದುಗೊಳಿಸಿರೋದು ಅಚ್ಚರಿಯ ಸಂಗತಿ. ಇದರ ಹಿಂದೆ ನ್ಯಾಯಾಲಯದ ತರ್ಕಗಳು ಅದೇನೇ ಇರಲಿ, ಆದರೆ ಮಂಡ್ಯದ ಮಣ್ಣು ಇನ್ನು ಕೆಲವೇ ದಿನಗಳಲ್ಲಿ ನೆತ್ತರ ಚೆಲ್ಲಾಟ ಕಾಣುವ ದುರಂತದ ಸಾಧ್ಯತೆ ಈ ತೀರ್ಪಿನಿಂದ ದಟ್ಟವಾಗಿ ಕಂಡುಬರುತ್ತಿದೆ. ಯಾಕೆಂದರೆ ಹಂತಕರು ಹೊರಬಂದಕೂಡಲೇ ಸೇಡಿನ ಸ್ಕೆಚ್ಚುಗಳೂ ರೆಡಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಸಾಲುಸಾಲು ನಾಲ್ಕು ಕೊಲೆ ಮಾಡಿಸಿ ದಕ್ಕಿಸಿಕೊಂಡಿದ್ದ ರೌಡಿ ಜಡೇಜಾ ರವಿಯನ್ನು 2007ರ ಡಿಸೆಂಬರ್ 7ರಂದು ಮತ್ತೊಬ್ಬ ನಟೋರಿಯಸ್ ರೌಡಿ ಚೀರನಹಳ್ಳಿ ಶಂಕರನ ಅಕ್ಕನ ಮಕ್ಕಳಾದ ಚೀರನಹಳ್ಳಿ ಚೇತನ್, ಮನು ತನ್ನ ಸಂಗಡಿಗರಾದ ಕಲ್ಲಹಳ್ಳಿಯ ಅಶೋಕ್‌ಪೈ, ಕಲ್ಲಹಳ್ಳಿ ಕಿರಣ್‌ಕುಮಾರ್, ಕುಮಾರ ಅಲಿಯಾಸ್ ಡೌನ್‌ಕುಮಾರ, ಸುನಿಲ್‌ಕುಮಾರ್ ಅಲಿಯಾಸ್ ಕರಾಟೆ ಸುನಿಲ್, ಮಂಜುನಾಥ್ ಅಲಿಯಾಸ್ ದಿಲ್ ಮಂಜ, ಚೇತನ್ ಅಲಿಯಾಸ್ ಕೆಆರ್‌ಎಸ್ ಚೇತು, ಆನೆಕೆರೆ ಬೀದಿ ಬೋರೇಗೌಡ ಅಲಿಯಾಸ್ ಬೋರ, ಚೇತನ್ ಅಲಿಯಾಸ್ ಗಾಂಧಿನಗರ ಚೇತು, ಚೀರನಹಳ್ಳಿ ಕುಮಾರ, ಮಹೇಶ್ ಜೊತೆ ಸೇರಿಕೊಂಡು ಹಾಡುಹಗಲೇ ಬರ್ಬರವಾಗಿ ಕೊಲೆ ಮಾಡಿದ್ದರು. ಈ ಆರೋಪಕ್ಕೆ ಮಂಡ್ಯ ಸೆಷನ್ಸ್ ಕೋರ್ಟ್ ಇಷ್ಟೂ ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು, ಆದರೆ ನವೆಂಬರ್ 25ನೇ ತಾರೀಕಿನ ಶುಕ್ರವಾರದಂದು ಹೈಕೋರ್ಟ್ ನ್ಯಾಯಾಧೀಶರಾದ ಹೆಚ್.ಜಿ. ರಮೇಶ್ ಹಾಗೂ ಕೆ.ಎನ್.ಫಣೀಂದ್ರರ ವಿಭಾಗೀಯ ಪೀಠವು ಆ ತೀರ್ಪನ್ನ ರದ್ದುಗೊಳಿಸಿ ಆದೇಶ ನೀಡಿದೆ. ಅಲ್ಲಿಗೆ ಕಳೆದ 9 ವರ್ಷಗಳಿಂದ ಜೈಲಿನಲ್ಲಿ ಮುದ್ದೆ ಮುರಿಯುತ್ತಿದ್ದ ಜಡೇಜಾ ರವಿ ಹಂತಕರು ಕೊನೆಗೂ ನಿಟ್ಟುಸಿರು ಬಿಟ್ಟಿದ್ದಾರೆ. ಜೊತೆಗೆ, ಸೇಡಿನ ಆತಂಕವೂ ಅವರನ್ನು ಸುತ್ತುವರೆದಿದೆ!

ಮಂಡ್ಯದ ರೌಡಿಸಂನಲ್ಲಿ ಸಣ್ಣಗೆ ಸೌಂಡು ಮಾಡುತ್ತಿದ್ದ ಅಣ್ಣಯ್ಯ, ಚೀರನಹಳ್ಳಿ ಶಂಕರ, ಚೀರನಹಳ್ಳಿ ಶಿವರಾಮ ಹಾಗೂ ಗೋಪಾಲಪುರ ಕಿಟ್ಟಿಯನ್ನು ಭೀಕರವಾಗಿ ಕೊಲ್ಲಿಸಿದ್ದ ಜಡೇಜಾ ರವಿ ಮಂಡ್ಯ ಭೂಗತಲೋಕವನ್ನ ಹತ್ತಾರು ವರ್ಷಗಳ ಕಾಲ ಆಳಿದ್ದ. ಅಲ್ಲದೇ, ಕಾಂಗ್ರೆಸ್ ಪಕ್ಷದಿಂದ ಮಂಡ್ಯ ನಗರಸಭೆ ಸದಸ್ಯನಾಗಿಯೂ ಆಯ್ಕೆಯಾಗಿದ್ದ ಜೊತೆಗೆ ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಎಂಎಲ್‌ಎ ಆಗುವ ಹುಚ್ಚೂ ಅವನನ್ನು ಆವರಿಸಿತ್ತು, ಅದಕ್ಕೋಸ್ಕರ ಭರ್ತಿ ರೊಕ್ಕವನ್ನೂ ಸಿದ್ಧ ಮಾಡಿಕೊಂಡಿದ್ದ. ಜಡೇಜಾ ರವಿಗೆ ಮಂಡ್ಯ ಜಿಲ್ಲೆಯಾದ್ಯಂತ ಪಡ್ಡೆ ಹುಡುಗರ ದೊಡ್ಡ ದಂಡೇ ಬೆಂಬಲಕ್ಕಿತ್ತು.

"ನನ್ನ ದುಷ್ಮನ್‌ಗಳೆಲ್ಲ ಹತ್ಯೆಯಾಗಿದ್ದಾರೆ, ಇನ್ಯಾರೂ ನನ್ನನ್ನು ಮುಟ್ಟುತ್ತಾರೆ" ಎಂಬ ಹುಂಬತನ ಜಡೇಜ ರವಿಗಿತ್ತು, ತಾನು ಕೊಲೆ ಮಾಡಿಸಿದ ಚೀರನಹಳ್ಳಿ ಶಂಕರ-ಶಿವರಾಮ ಸೋದರ ಜೋಡಿಯ ಅಕ್ಕನ ಮಕ್ಕಳೇ ತನ್ನ ಕತೆಗೆ ಫುಲ್‌ಸ್ಟಾಪ್ ಇಡುತ್ತಾರೆನ್ನುವ ಸಣ್ಣ ಅನುಮಾನವೂ ಆತನಿಗಿರಲಿಲ್ಲ.

ಜಡೇಜಾ ರವಿ ಹತ್ಯೆ

ಕೌನ್ಸಿಲರ್ ಆದನಂತರ ಜಡೇಜಾ ರವಿ ಸುತ್ತ ಒಂದು ದೊಡ್ಡ ಜನಸಮೂಹ ಸೃಷ್ಟಿಯಾಗಿತ್ತು, ರೌಡಿಸಂ ಆಕರ್ಷಣೆಗೆ ಒಳಗಾಗಿದ್ದ ಪಡ್ಡೆ ಹುಡುಗರಂತೂ ರವಿಯಣ್ಣ.. ರವಿಯಣ್ಣ.. ಅಂತ ಅವನ ಜೊತೆ ಗುರುತಿಸಿಕೊಳ್ಳಲು ಹವಣಿಸುತ್ತಿದ್ದರು. ಈ ಗುಂಪನ್ನು ಕಂಡು ಉಬ್ಬಿಹೋಗಿದ್ದ ಜಡೇಜಾ ರವಿಗೆ ಎಂಎಲ್‌ಎ ತೆವಲು ಹತ್ತಿದ್ದರಲ್ಲಿ ಅಚ್ಚರಿಯೇನೂ ಇಲ್ಲ, ಅದಕ್ಕೆಂದೇ ಪ್ರತಿ ಹಳ್ಳಿಯ ಮದುವೆ, ಮುಂಜಿ, ತಿಥಿಗಳಿಗೆ ಹಾಜರಾಗುತ್ತಿದ್ದ. ಪಕ್ಕಾ ರಾಜಕಾರಣಿಯಂತಾಗಿದ್ದ ಜಡೇಜಾ ರವಿ ತನ್ನೊಟ್ಟಿಗೆ ಹೀಗೆ ಪಡ್ಡೆ ಹುಡುಗರನ್ನು ಕಟ್ಟಿಕೊಂಡು ತಿರುಗಿದರೆ ಜನ ರೌಡಿಸಂ ಬಿಟ್ಟಿಲ್ಲ ಅಂದುಕೊಳ್ಳುತ್ತಾರೆ ಎಂಬ ಆಲೋಚನೆ ಅದ್ಯಾವ ಕೆಟ್ಟ ಘಳಿಗೆಯಲ್ಲಿ ಬಂತೋ, ಅದೇ ಅವನ ಸಾವಿಗೆ ಮುನ್ನುಡಿಯಾಯ್ತು. ಪಟಾಲಮ್ಮಿನ ಹುಡುಗರ ಸಂಖ್ಯೆಯನ್ನು ಕಡಿಮೆ ಮಾಡಿಕೊಂಡಿದ್ದ. ಈ ಬದಲಾವಣೆಗಾಗೇ ಹೊಂಚುಹಾಕಿದ್ದ ಚೀರನಹಳ್ಳಿ ಚೇತು, ಮನು, ಕಲ್ಲಹಳ್ಳಿಯ ಮತ್ತೊಬ್ಬ ರೌಡಿ ಅಶೋಕ್ ಪೈ ಇದೇ ಸರಿಯಾದ ಸಮಯ ಎಂದುಕೊಂಡು ಜಡೇಜಾ ರವಿ ಹತ್ಯೆಗೆ ಪಕ್ಕಾ ಸ್ಕೆಚ್ ಹಾಕಿಕೊಂಡಿದ್ದರು.

ಅದು ಡಿಸೆಂಬರ್ 7, 2007. ಜಡೇಜಾ ರವಿ ಪಾಲಿನ ಕಡುಕೆಟ್ಟ ದಿನ. ತನ್ನ ಐವರು ಸಹಚರರೊಂದಿಗೆ ಮಂಡ್ಯದಿಂದ 7 ಕಿ.ಮೀ. ದೂರದಲ್ಲಿರುವ ಯಲಿಯೂರು ಬಳಿಯಿರುವ ಮಾಯಣ್ಣನಕೊಪ್ಪಲು ಗ್ರಾಮದ ಸ್ನೇಹಿತನೊಬ್ಬನ ತಿಥಿ ಕಾರ್ಯಕ್ಕೆ ಹೋಗಿ ಸ್ಕಾರ್ಪಿಯೋದಲ್ಲಿ ಹಿಂದಿರುಗುತ್ತಿದ್ದ. ಆಗ ಇದ್ದಕ್ಕಿದ್ದಂತೆ ಜಡೇಜಾ ರವಿ ಸ್ಕಾರ್ಪಿಯೊಗೆ ಹಿಂದಿನಿಂದ ಕಾರೊಂದು ಗುದ್ದಿತ್ತು. ಏನಾಗುತ್ತಿದೆ ಅಂತ ಸಾವರಿಸಿಕೊಳ್ಳುವ ಹೊತ್ತಿಗೆ ಮುಂದಿನಿಂದ ಮತ್ತೊಂದು ಕಾರು ಗುದ್ದಿತ್ತು, ಹೀಗೆ ಅಡಕತ್ತರಿಗೆ ಸಿಕ್ಕಿಸಿಕೊಂಡ ಹಂತಕರು ಜಡೇಜಾ ರವಿ ಮೇಲೆ ಏಕಾಏಕಿ ಅಟ್ಯಾಕ್ ಮಾಡಿದ್ದರು. ಅವರ ಕೈಲಿದ್ದ ಮಚ್ಚು-ಲಾಂಗುಗಳು ಕ್ಷಣಮಾತ್ರದಲ್ಲಿ ಜಡೇಜಾ ರವಿಯ ದೇಹವನ್ನು ಹರಿದು ಚಿಂದಿಮಾಡಿದ್ದವು. ಎಂಎಲ್‌ಎ ಕನಸು ಕಂಡಿದ್ದ ರವಿ ಕ್ಷಣಮಾತ್ರದಲ್ಲಿ ಮಾಂಸದ ಮುದ್ದೆಯಾಗಿದ್ದ. ಹಂತಕರ ರೋಷ ಎಷ್ಟಿತ್ತೆಂದರೆ ಜಡೇಜಾ ರವಿಯ ಕೈಯೊಂದನ್ನು ಕತ್ತರಿಸಿ, ಅದನ್ನು ಚೀರನಹಳ್ಳಿ ಶಂಕರನ ಗೋರಿಯ ಮೇಲೆ ಇಟ್ಟುಹೋಗಿದ್ದರು. ಮಂಡ್ಯ ಭೂಗತಲೋಕದಲ್ಲಿ ಹತ್ತಾರು ವರ್ಷ ಮೆರೆದಿದ್ದ ಜಡೇಜಾ ರವಿ ಎಂಬ ಅಧ್ಯಾಯ ರೌಡಿಸಂನ ಯಥಾಶೈಲಿಯಲ್ಲೇ ಮುಕ್ತಾಯವಾಗಿತ್ತು.

ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು 12 ಮಂದಿ ಆರೋಪಿಗಳನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡು ಜೈಲಿಗೆ ಗದುಮಿದ್ದರು. ಸುದೀರ್ಘ ವಿಚಾರಣೆ ನಡೆಸಿದ ಮಂಡ್ಯದ ಸೆಷನ್ಸ್ ನ್ಯಾಯಾಲಯ ಈಗ್ಗೆ ಒಂದೂವರೆ ವರ್ಷದ ಹಿಂದೆ ಎಲ್ಲ 12 ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಗಳೆಲ್ಲಾ ಉಲ್ಟಾ ಹೊಡೆದಿದ್ದರೂ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ ಎಂದು. ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ವಾದ ಮನ್ನಿಸಿರುವ ಹೈಕೋರ್ಟ್ ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸಿ ಎಲ್ಲರನ್ನು ಖುಲಾಸೆ ಮಾಡಿದೆ.

ಅವನು ಜಡೇಜಾ ರವಿ

ಜಡೇಜಾ ರವಿ ಮಂಡ್ಯ ಭೂಗತ ಲೋಕದ ಖತರ್ನಾಕ್ ರೌಡಿ. 1996ರಲ್ಲಿ ತನ್ನ ಅಕ್ಕ ನಾಗಮ್ಮಳ ಗಂಡ ರೌಡಿ ಸುಂದರನ ಹತ್ಯೆಗೈದಿದ್ದ ಮತ್ತೋರ್ವ ರೌಡಿಕ್ರಿಮಿ ಅಣ್ಣಯ್ಯ ಎನ್ನುವನನ್ನು ಕೊಲ್ಲುವ ಮೂಲಕ ಭೂಗತ ಜಗತ್ತಿಗೆ ಎಂಟ್ರಿ ಕೊಟ್ಟಿದ್ದ. ರವಿಯ ಡೆಬ್ಯು ಹತ್ಯೆಗೆ ಚೀರನಹಳ್ಳಿ ಶಂಕರ, ಕಲ್ಲಹಳ್ಳಿ ಅಶೋಕ್‌ಪೈ ಕೂಡ ಸಾಥ್ ನೀಡಿದ್ದರು. ನ್ಯಾಯಾಲಯದಲ್ಲಿ ಈ ಮೂವರೂ ಖುಲಾಸೆಗೊಂಡು ಹೊರಬಂದಿದ್ದರು. ಅಶೋಕ್ ಪೈ ಅಬಕಾರಿ ಕುಳ ರಂಗಸ್ವಾಮಿಯ ಬಳಿ ಅಕ್ರಮ ಸಾರಾಯಿ ರೈಡಿಂಗ್ ಟೀಂನಲ್ಲಿದ್ದರೆ, ಚೀರನಹಳ್ಳಿ ಶಂಕರ ತನ್ನ ಪಾಡಿಗೆ ಸಣ್ಣಪುಟ್ಟ ಡೀಲಿಂಗ್‌ಗಳಿಗೆ ಜೋತುಬಿದ್ದಿದ್ದ.

ಈ ನಡುವೆ ಮಂಡ್ಯ ಭೂಗತಲೋಕದ ಮೇಲೆ ಅಧಿಪತ್ಯ ಸಾಧಿಸುವ ಸಲುವಾಗಿ ಜಡೇಜಾ ರವಿ ಮತ್ತು ಚೀರನಹಳ್ಳಿ ಶಂಕರನ ನಡುವೆಯೇ ದುಶ್ಮನಿ ಶುರುವಾಗಿತ್ತು, ಕೊನೆಗದು ತಾರಕಕ್ಕೇರಿ ಚೀರನಹಳ್ಳಿ ಶಂಕರನ ಕೊಲೆಯಲ್ಲಿ ಮುಕ್ತಾಯವಾಯಿತು.. ಅದೊಂದು ದಿನ ಮಂಡ್ಯದ ಪೇಟೆಬೀದಿಯಲ್ಲಿರುವ ಕಾಳಿಕಾಂಭ ದೇವಸ್ಥಾನದ ಮುಂದೆ ಕಣ್ಮುಚ್ಚಿ ಕೈ ಮುಗಿಯುತ್ತಾ ನಿಂತಿದ್ದ ಚೀರನಹಳ್ಳಿ ಶಂಕರನ ಮೇಲೆ ಮುಗಿಬಿದ್ದ ಜಡೇಜಾ ರವಿ ಹುಡುಗರು ಭೀಕರವಾಗಿ ಕತ್ತರಿಸಿ ಪರಾರಿಯಾಗಿದ್ದರು. ಆ ಕೇಸಿನಲ್ಲಿ ಜಡೇಜಾ ರವಿ ಅಂದರ್ ಆಗಿದ್ದ.


ಆತ ಜೈಲಲ್ಲಿದ್ದ ಅವಧಿಯಲ್ಲೇ, ತನ್ನ ಅಣ್ಣ ಶಂಕರನನ್ನು ಜಡೇಜಾ ರವಿ ಕೊಲ್ಲುವುದಕ್ಕೆ ಅವನ ಹಿಂದಿರುವ ಎಸ್.ಕೆ.ರಾಮಣ್ಣನ ಬಲವೇ ಕಾರಣ ಎನ್ನುವ ತೀರ್ಮಾನಕ್ಕೆ ಬಂದ ಶಂಕರನ ತಮ್ಮ ಚೀರನಹಳ್ಳಿ ಶಿವರಾಮ, ರಾಮಣ್ಣನನ್ನು ಹತ್ಯೆ ಮಾಡಿದ್ದ. ಮಂಡ್ಯ ಭೂಗತಲೋಕದಲ್ಲಿ ಎಸ್.ಕೆ.ರಾಮಣ್ಣನದ್ದು ದೊಡ್ಡ ಹೆಸರು. ನೇರವಾಗಿ ಯಾವುದೇ ಕ್ರೈಮ್‌ನಲ್ಲಿ ಭಾಗಿಯಾಗದಿದ್ದರೂ ರೌಡಿಗಳನ್ನು ಬಟ್ಟು ತನ್ನ ಕೆಲಸ ಮಾಡಿಸಿಕೊಳ್ಳುವುದರಲ್ಲಿ ನಿಸ್ಸೀಮನಾಗಿದ್ದ. ಲಿಟಿಗೇಷನ್ ಪ್ರಾಪರ್ಟಿಗಳಲ್ಲಿ ಕೈಹಾಕಿ ಭರ್ಜರಿಯಾಗಿ ದುಡ್ಡು ಮಾಡಿದ್ದ. ಪೊಲೀಸ್ ಸ್ಟೇಷನ್ ವ್ಯವಹಾರದಲ್ಲಿ ಭಾಗಿಯಾಗಿ ದುಡ್ಡು ಕೊಟ್ಟವರ ಪರ ವಕಾಲತ್ತು ವಹಿಸಿ ವ್ಯಾಜ್ಯ ಬಗೆಹರಿಸುತ್ತಿದ್ದ. ಒಟ್ಟಾರೆ ಪೊಲೀಸ್ ಮತ್ತು ರೌಡಿಗಳ ನಡುವಿನ ಕೊಂಡಿಯಂತೆ ಕೆಲಸ ಮಾಡುತ್ತಿದ್ದ ರಾಮಣ್ಣ ಮಾಜಿ ಸಚಿವ ಆತ್ಮಾನಂದ ಕುಟುಂಬಕ್ಕೆ ಬಹಳ ಆತ್ಮೀಯನಾಗಿದ್ದ. ಇಂಥಾ ಎಸ್.ಕೆ.ರಾಮಣ್ಣ ಜಡೇಜಾ ರವಿ ಪಾಲಿಗೆ ಗಾಡ್‌ಫಾದರ್‌ನಂತಿದ್ದ.

ಹಾಗಾಗಿ ರಾಮಣ್ಣನನ್ನು ಮುಗಿಸಿಬಿಟ್ಟರೆ ಜಡೇಜಾ ರವಿಯ ಖದರ್ ಕಡಿಮೆಯಾಗುತ್ತದೆಂದು ಯೋಚಿಸಿದ ಚೀರನಹಳ್ಳಿ ಶಿವರಾಮ, ಜಡೇಜಾ ರವಿ ಮತ್ತವನ ಹುಡುಗರು ಜೈಲಿನಲ್ಲಿರೋದರಿಂದ ಇದೇ ಸುಸಮಯ ಎಂದುಕೊಂಡು ಸ್ಕೆಚ್ ರೂಪಿಸಿದ್ದ. ಅದರಂತೆ ತನ್ನ ಗ್ಯಾಂಗ್ ಕಟ್ಟಿಕೊಂಡು ಹೊಳಲು ಸರ್ಕಲ್ ಬಳಿ ಇರುವ ದೆಹಲಿ ಸ್ವೀಟ್ಸ್ ಮುಂದೆ ರಾಮಣ್ಣನನ್ನು ಭೀಕರವಾಗಿ ಕತ್ತರಿಸಿ ಹಾಕಿದ್ದ. ರಾಮಣ್ಣನ ಕೊಲೆ ಜಡೇಜಾ ರವಿಯನ್ನು ಅತಿಯಾಗಿ ಕೆರಳಿಸಿತು. ಪ್ರತೀಕಾರದ ಹಠಕ್ಕೆ ಬಿದ್ದ ಜಡೇಜಾ ರವಿ ಜೈಲಿನಲ್ಲಿದ್ದುಕೊಂಡೇ ತನ್ನ ಹುಡುಗರ ಮೂಲಕ ಚೀರನಹಳ್ಳಿ ಶಂಕರನ ಶಿಷ್ಯ ಗೋಪಾಲಪುರ ಕಿಟ್ಟಿಯನ್ನು ಕಾರಿಮನೆ ಗೇಟ್ ಬಳಿ ಹತ್ಯೆ ಮಾಡಿಸಿದ್ದ, ಅತ್ತ ರಾಮಣ್ಣನ ಕೊಲೆ ಕೇಸಿನಲ್ಲಿ ಖುಲಾಸೆಯಾಗಿ ಹೊರಬಂದ ಚೀರನಹಳ್ಳಿ ಶಿವರಾಮ ತನ್ನ ಪಾಡಿಗೆ ತಾನಿದ್ದರೂ ಜೈಲಿನಿಂದ ಹೊರಬಂದ ಸ್ವಲ್ಪ ದಿನಕ್ಕೆ ಜಡೇಜಾ ರವಿ ಅವನನ್ನೂ ತನ್ನ ಹುಡುಗರ ಮೂಲಕ ಕೊಲೆ ಮಾಡಿಸಿದ್ದ.

ರೌಡಿಸಂ, ಹತ್ಯೆಗಳ ಸೆರಗಿನಲ್ಲೇ ಸರಸವಾಡುತ್ತಿದ್ದ ಜಡೇಜಾ ರವಿಗೆ ಅದ್ಯಾರು ಐಡಿಯಾ ಕೊಟ್ಟರೋ ರಾಜಕೀಯದ ಅಮಲು ನೆತ್ತಿಗೇರಿಸಿಕೊಂಡಿದ್ದ. ಮುಂಚಿನಿಂದಲೂ ತನ್ನ ಗುರು ಎಸ್.ಕೆ.ರಾಮಣ್ಣನ ಆಣತಿಯಂತೆ ಕಾಂಗ್ರೆಸ್ ಪಕ್ಷದ ಪರ ಕೆಲಸ ಮಾಡಿಕೊಂಡು ಬಂದಿದ್ದ ಜಡೇಜಾ ರವಿ 2007ರ ಮಂಡ್ಯ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಕೌನ್ಸಿಲರೂ ಆಗಿಬಿಟ್ಟ. ನಿಧಾನಕ್ಕೆ ಅವನ ಹುಚ್ಚು ಎಂಎಲ್‌ಎ ಆಗುವ ದಿಕ್ಕಿನತ್ತ ಹೊರಳಿತ್ತು. ಲಿಟಿಗೇಷನ್ ಪ್ರಾಪರ್ಟಿಗಳಿಂದ ಕೈಸೇರಿದ್ದ ಮತ್ತು ಮಂಡ್ಯದ ಶ್ರೀಮಂತ ವ್ಯಾಪಾರಿಗಳು, ಮಾರ್ವಾಡಿಗಳಿಂದ ಹಫ್ತಾ ರೂಪದಲ್ಲಿ ಬಂದು ಬಿದ್ದಿದ್ದ ಹಡಬೆ ದುಡ್ಡಿನಿಂದ ಸಿಹಿನೀರು ಕೊಳದ ಹಿಂಭಾಗ ದಿವಿನಾದ ಭವ್ಯ ಬಂಗಲೆ ಎಬ್ಬಿಸಿದ್ದ. ಬಿ.ಹೊಸೂರು ಬಳಿ ಹತ್ತಾರು ಎಕರೆ ಜಮೀನು ಖರೀದಿಸಿದ್ದ. ಇಂಥಾ ದುಡ್ಡೇ ಅವನಿಗೆ ಎಂಎಲ್‌ಎ ಕನಸು ತುಂಬಿತ್ತು.

ರವಿ ಹತ್ಯೆಗೆ ಮುಯ್ಯಿ

ಜಡೇಜಾ ರವಿ ನಿಕಾಲಿಯಾದ ಮೇಲೆ ಮಂಡ್ಯ ತಣ್ಣಗಿರುತ್ತೆ ಅಂದುಕೊಂಡದ್ದು ಕೆಲವೇ ಗಂಟೆಗಳಲ್ಲಿ ಹುಸಿಯಾಗಿ ಹೋಯ್ತು. ತನ್ನ ಮಾವ ಜಡೇಜಾ ರವಿ ಕೊಲೆ ಮಾಡಿದ ಚೀರನಹಳ್ಳಿ ಚಿಲ್ಟುಗಳ ಬೆನ್ನಿಗೆ ನಿಂತದ್ದು ಅಬಕಾರಿ ಉದ್ಯಮಿ ಹನಕೆರೆ ನಾಗಣ್ಣ ಎಂಬ ವಾಸನೆ ಹಿಡಿದ ರವಿಯ ಅಕ್ಕನ ಮಗ ಡೇಂಜರ್ ಶಿವ ಕುದ್ದು ಹೋಗಿದ್ದ. ಮಾವ ಜಡೇಜ ರವಿ ಅಂತ್ಯಕ್ರಿಯೆ ಮುಗಿಸಿ ಬಂದ ಎರಡು ದಿನದಲ್ಲೇ ಹನಕೆರೆ ನಾಗಣ್ಣನಿಗೆ ಶಿವ ಸ್ಕೆಚ್ ಹಾಕಿದ್ದ. ಅದರಂತೆ 2007ರ ಡಿಸೆಂಬರ್ 9ರಂದು ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀರಾಮಕ?ಷ್ಣ ಆಶ್ರಮದ ವಿದ್ಯಾಶಾಲೆಯಲ್ಲಿ ಓದುತ್ತಿರುವ ಮಗನನ್ನು ನೋಡಲೆಂದು ಹೆಂಡತಿ ಜೊತೆ ಹೋಗಿದ್ದ ನಾಗಣ್ಣನ ಮೇಲೆ ಡೇಂಜರ್ ಶಿವನ ಹಂತಕ ಪಡೆ


ನಾಗಣ್ಣ


ಡೇಂಜರ್ ಶಿವ

ಮಚ್ಚು-ಲಾಂಗುಗಳಿಂದ ಮಾರಣಾಂತಿಕ ಹಲ್ಲೆ ಮ
2 ದಿನಗಳ ಕಾಲ ಮೈಸೂರಿನ ಬಿ.ಎಂ.ಆಸ್ಪತ್ರೆ
ನರಳಾಡಿದ ನಾಗಣ್ಣ ಕೊನೆಗೂ ಬದುಕುಳಿಯಲಿ
ಕೇಸಿನಲ್ಲಿ ಡೇಂಜರ್ ಶಿವ ಹಾಗೂ ಆತನ ಮ
ಸಹಚರರಿಗೆ ಮೈಸೂರಿನ ನ್ಯಾಯಾಲಯ ಜೀವಾವ
ವಿಧಿಸಿದೆ. ಅಪ್ಪ ಸುಂದರ ರೌಡಿಯಾಗಿದ್ದರೂ
ಊಟಿಯಲ್ಲಿ ಓದುತ್ತಿದ್ದ ಎಸ್‌ಎಸ್‌ಎಲ್‌ಸಿ ನಂತರ
ಬಂದ ಶಿವ ಮಾವ ಜಡೇಜಾ ರವಿಯ ಖದರ್
ಆಕರ್ಷಿತನಾಗಿ ರೌಡಿಸಂನ ಓಂಕಾರ ಕರಗತ ಮಾಡಿಕೊ
ಮಂಡ್ಯದ ಪೊಲೀಸರನ್ನು ಅಡ್ಜಸ್ಟ್ ಮಾಡಿಕೆ
ಸಾಲುಸಾಲು ಹತ್ಯೆ ಮಾಡಿದರೂ ರವಿಗೆ
ಆಗದಿರುವುದನ್ನು ಕಂಡ ಶಿವನಿಗೆ ಎಲ್ಲಿಲ್ಲದ
ತಂದಿತ್ತು. ಜಡೇಜ ರವಿಗೆ ಪೊಲೀಸರು
ಮಾಡಲಾಗದಿದ್ದರೂ ಅವನ ರೌಡಿಸಂ ದುಶ್ಮನಿಗಳೇ
ಕೊಂದು ಅಡ್ಡಡ್ಡ ಮಲಗಿಸಿದ್ದವು. ಇದನ್ನು
ಮಾಡಿಕೊಳ್ಳದ ಬಿಸಿರಕ್ತದ ಶಿವ ಥೇಟು ಫಿಲ್ಮಿ ಸ್ಟೈ
ಪ್ರತೀಕಾರಕ್ಕೆ ಬೊಬ್ಬಿರಿದು ಹನಕೆರೆ ನಾಗಣ್ಣನ ಹೊ
ನಾಗಣ್ಣನ ಕೊಲೆಗೆ ಆತನ ಹೆಂಡತಿ, ಮಗನೇ
ಸಾಕ್ಷಿಯಾಗಿದ್ದು, ಅವರೆಲ್ಲಾ ಪಕ್ಕಾ ಸಾಕ್ಷ್ಯ ಹೇಳಿ
ಡೇಂಜರ್ ಶಿವ ಜೀವಾವಧಿ ಶಿಕ್ಷೆಗೆ ಗುರಿಯಾ
ಇದೇ ಕೇಸಿನಲ್ಲಿ ಆರೋಪಿಗಳಾದ ಬೆಂಗ
ನಟೋರಿಯಸ್ ರೌಡಿ ಸಹೋದರರಾದ ರಾಮ
ಖುಲಾಸೆಯಾಗಿದ್ದಾರೆ.

ಸಾಲುಸಾಲು ಹತ್ಯೆಗಳು

ಜಡೇಜಾ ರವಿಯನ್ನು ಕೊಂದು ಜೇಲು
ರೌಡಿ ಕಲ್ಲಹಳ್ಳಿ ಅಶೋಕ್ ಪೈ ತನ್ನ ಒಂದು
ಗಾಡ್‌ಫಾದರ್ ಅಬಕಾರಿ ಕುಳ ರಂಗಸ್ವಾಮಿ ಜೊತೆ
ಕಚ್ಚಿಕೊಂಡ. ಆದರೆ ಆ ವೈರತ್ವಕ್ಕೆ ಬಲಿಯಾದದ್ದು ರ
ಮಗ ಬೂದನೂರು ಜಿ.ಪಂ. ಸದಸ್ಯ ಮಹೇಶ.
ವಿಧಾನಸಭೆ ಚುನಾವಣೆಗೆ ಇನ್ನೇನು ಕೆಲ ದಿ
ಎನ್ನುವಾಗ ಹರಿಪ್ರಿಯ ಹೋಟೇಲ್‌ನಲ್ಲಿ ಕರೆದಿದ್ದ
ಕಾರ್ಯಕರ್ತರ ಸಭೆಗೆ ಹೋಗುತ್ತಿದ್ದ ಜಿ.ಪಂ.
ಮಹೇಶನ ಮೇಲೆ ರೌಡಿ ಅಶೋಕ್ ಪೈ ಹು
ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದರು. ಭೀ
ಗಾಯಗೊಂಡಿದ್ದ ಮಹೇಶ ಆಸ್ಪತ್ರೆಯಲ್ಲಿ ಮೃ
ಈ ಪ್ರಕರಣದಲ್ಲಿ ಅಶೋಕ್ ಪೈ ಹಾಗೂ ಆತನ
ಸಹಚರರಿಗೆ ಜೀವಾವಧಿ ಶಿಕ್ಷೆಯಾಗಿದೆ.

ಈಗ ಜಡೇಜಾ ರವಿ ಪ್ರಕರಣದಲ್ಲಿ ಭಾಗಿ
12 ಮಂದಿ ಆರೋಪಿಗಳ ಪೈಕಿ ಅಶೋಕ್ ಪೈ
ಉಳಿದವರು ಶಿಕ್ಷೆಯಿಂದ ಬಚಾವಾಗಿ ಮಂಡ್ಯಕ್ಕೆ ಕಾಲಿ
ಜಡೇಜಾ ರವಿಯ ಶಿಷ್ಯರಲ್ಲಿ ಕೆಲವರು ರೌಡಿಸ
ಊರು ತೊರೆದಿದ್ದಾರೆ. ಮಂಡ್ಯ ಪೊಲೀಸರು
ಜಡೇಜಾ ರವಿಯನ್ನು ತಡವಿಕೊಳ್ಳುವ ಖದರ‍್ರು ತ
ಮಂಡ್ಯದ ನೆಲ ಈ ಪರಿ ನೆತ್ತರಿನಲ್ಲಿ ನೆಂದು ಹೋಗು
ಈಗಲೂ ಪೊಲೀಸರು ಎಚ್ಚೆತ್ತುಕೊಳ್ಳದಿದ್ದರೆ ಚಿಲ್ಟು
ರಿವೇಂಜ್ ಎಪಿಸೋಡು ಶುರುವಾಗುವ ಅಪಾ
ಅದೇನೇ ಇರಲಿ, ಸಮಾಜದ ನೆತ್ತರು ಹೀರು
ಕರಾಳ ಜಗತ್ತಿಗೆ ಕಾಲಿರಿಸಿದವನಿಗೆ ಕೊನೆಗೆ
ದುಶ್ಮನಿಗಳಿಂದ ಸಿಗುವ ಸನ್ಮಾನ ಎಂತದ್ದು ಅನ
ಮತ್ತೆಮತ್ತೆ ಸಾಬೀತಾಗುತ್ತಿದ್ದರೂ ಈ ಹಾಳು ಹು
ಅದ್ಯಾಕೆ ರೌಡಿಸಂ ಗುಂಗನ್ನು ನೆತ್ತಿಗೇರಿಸಿಕೊಳ್ಳ
ಗೊತ್ತಿಲ್ಲ, ಇದಕ್ಕೆಲ್ಲ ಪೊಲೀಸರೆ ಮದ್ದು ಅರೆ

■ ವರದ

ಮಳೆ ಹುಡುಗಿಯ ಬಾಳಲ್ಲಿ ಮತ್ತೆ ಮುಂಗಾರು?

ವಸಂತಕಾಲ ಬಂದಾಗ ಮಾವು ಚಿಗುರಲೇಬೇಕು. ...ಲೆ ಹಾಡಲೇಬೇಕು. ಹಾಗಂತ ಆಷಾಢವನ್ನು ಮರೆಯು ...ವಲ್ಲ, ಮಳೆ ಹುಡುಗಿ ಪೂಜಾ ಗಾಂಧಿಯ ಪಾಲಿನ ...ಷ್ಟೋ ಆಷಾಢಗಳ ಪೈಕಿ ಇದೆಷ್ಟನೆಯದೋ ಆಷಾಢ ...ದಿರಬೇಕು. ಮತ್ತೆ ಮುಂಗಾರು ಮಳೆ. ಮತ್ತೆ ವಸಂತ. ...ಕಳೆದ ರಾತ್ರಿ ಮತ್ತೊಂದು ಅರುಣೋದಯ?

...ಹೋದ ಶನಿವಾರ ಯಥಾವತ್ ಬಿಗ್‌ಬಾಸ್‌ನಲ್ಲಿ ಪೂಜಾ ...ಯ ಹೊಸ ಚಿತ್ರ ಜಿಲೇಬಿಯ ಪ್ರೊಮೋಷನ್ ...ೋಡು ಇತ್ತಲ್ಲ, ಪುಟ್ಟ ಬಾಲಕಿಯಂತೆ ಅದೇ ತುಂಟ ...ನ್ನುತ್ತಲೇ ಎಂಟ್ರಿ ಕೊಟ್ಟಿದ್ದಳು ಮಳೆ ಹುಡುಗಿ. ...ದ ಹೆಸರೇ ಜಿಲೇಬಿ! ಅಂದಮೇಲೆ ಕೇಳಬೇಕೆ? ...ಬಿಯ ರೊಮ್ಯಾಂಟಿಕ್ ಮೂಡಿಗೆ ರಂಗು ಎಂಬಂತೆ ...ಟ್ರೋ ಸ್ವೀಟ್ ಪ್ಯಾಕೆಟ್ ಒಂದನ್ನು ಬಿಚ್ಚಿದ್ದೇ ಬಿಗ್‌ಬಾಸ್ ...ಯಲ್ಲಿದ್ದವರಿಗೆಲ್ಲ ಜಿಲೇಬಿ ಹಂಚಿದ್ದೇ ಹಂಚಿದ್ದು. ...ನಾಯಿತೋ ಗೊತ್ತಿಲ್ಲ; ಇದ್ದಕ್ಕಿದ್ದಂತೆ ಬಿಗ್‌ಬಾಸ್ ...ಪ್ ಕಣ್ಣು ಸಿಹಿ ಹಂಚುತ್ತಿದ್ದ ಹುಡುಗಿಯ ಅಂಗೈಯತ್ತ ... ಅದೊಂದು ನಿಗೂಢ ಟ್ಯಾಟೂ.... ಅಂದರೆ ಹಚ್ಚೆ! ...ನಮ್ಮಾ... ಇದು? ಹೊಸ ಹಚ್ಚೆ? ಎಂದು ಸುದೀಪ್ ...ದ್ದೇ ತಡ, ಮಳೆ ಹುಡುಗಿಯ ಬಾಯಿಂದ ಬಂದ ... ಪದ-ಪ್ರಶಾಂತ್!

ಪ್ರಶಾಂತ್ ಯಾರು? ಏನದು? ನಮಗೂ ಒಂಚೂರು ...ಬಿ ಹಂಚ್ಕೊಳ್ಳಲ್ವಾ? ಅಷ್ಟೊಂದು ಸೀಕ್ರೆಟ್ಟಾ?' ಎಂದೆಲ್ಲಾ ...ಪ್ ಕಿಚಾಯಿಸಿದ್ದೇ ತಡ ನಾಚಿ ನೀರಾದಳು ಪೂಜಾ. ...ದೋ ನಾಚಿಕೆ! ಇನ್ನೆಂಥದೋ ಅಂಜಿಕೆ! ಕೆನ್ನೆ ... ಕೆಂಪು, ಮುಖದ ಭಾವ ರಂಗೋರಂಗು ; 'ಯಸ್ ...ತ್ ಈಸ್ ಮೈ ಬಾಯ್‌ಫ್ರೆಂಡ್....!' ಎಂದೇಬಿಟ್ಟಳು ...ಪಾ. ಇನ್ನು ಸುದೀಪ್ ರೇಗಿಸದೇ ಇರುತ್ತಾನಾ? ...ಬಾಸ್ ಧಾರಾವಾಹಿಯ ಅದ್ಯಾವ ಋಣಾನುಬಂಧವೋ, ...ಥ ಗಳಿಗೆಯೋ ಪೂಜಾ-ಪ್ರಶಾಂತ್ ಹೊಸ ಡ್ಯುಯೆಟ್ಟಿನ ...ಸ ಎಪಿಸೋಡಿಗೆ ಹೊಸ ಇನ್ನಿಂಗ್ಸ್ ಒಂದು ...ಹೊಸದಾಗಿ ಪರದೆಯ ಮೇಲೆ ಸರಿದಂತಾಯಿತು.


...ನೋಡೌಟ್, ಮಳೆ ಹುಡುಗಿಯ ಬದುಕಲ್ಲಿ ಮತ್ತೆ ...ಂಗಾರು ಮಳೆ ಆಷಾಢ ಕಳೆದು ಮತ್ತೆ ವಸಂತ. ...ದ ರಾತ್ರಿಯ ನಂತರ ಉದಯಿಸಿದ ಹೊಸ ಸೂರ್ಯ! ... ಯಾರಿಗೂ ಅರ್ಥವಾಗದ ಯಾವ ಲೆಕ್ಕಾಚಾರಕ್ಕೂ ...ದ ಒಂದು ಸಂಗತಿಯೆಂದರೆ, ಪ್ರಶಾಂತ್ ಅಲಿಯಾಸ್ ...ತ್ ರಾಜ್ ಎಂಬ ಸೋಕಾಲ್ಡ್ ನೋಟರಿಯಸ್(?) ...ಮಿ ಮಳೆ ಹುಡುಗಿಯ ಬಾಳಿಗೆ ಎಂಟ್ರಿ ...ಟ್ಟಿದ್ದಾದರೂ ಹೇಗೆ?


ಲಕ್ಕಿಸ್ಟಾರ್ ಪತನ

...ಇದು ಕೇವಲ ಗಾಂಧಿನಗರಕ್ಕಷ್ಟೇ ಅಲ್ಲ, ಸಿನಿಮಾ ...ಂಧಿ ಆಸಕ್ತ ಕುತೂಹಲವುಳ್ಳ ಪ್ರತಿಯೊಬ್ಬರನ್ನೂ ಕಾಡುವ ...ಯೇ. ಅದೇನು ಪ್ರಾರಬ್ಧವೋ ಗೊತ್ತಿಲ್ಲ ಪೂಜಾ ...ಯೆಂಬ ಮರಿ ಧೂಮಕೇತು ಕನ್ನಡ ಬೆಳ್ಳಿತೆರೆಯ ...ಲ್ಲಿ ಕಾಣಿಸಿಕೊಂಡಿದ್ದೇ ಅದೃಷ್ಟದ ತಾರೆಯಾಗಿ. ಬೆಳ್ಳಿ ... ಪೂಜಾ ಗಾಂಧಿಯಿದ್ದರೆ ಸಾಕು 'ಕೋತಿ ಹಾಕೊಂಡು ...ರೂ ಸಿನಿಮಾದ ದುಡ್ಡು ಗ್ಯಾರಂಟಿ!' ಹಿಂದೆ ಮಾಲಾಶ್ರೀ ...ದೆ ಮಂಗನ್ನ ಹಾಕೊಂಡರೂ ಸಿನಿಮಾ ಪಕ್ಕಾ ಹಿಟ್ ...ನ್ನು ಹುಟ್ಟಿಕೊಂಡಂತೆ ಪೂಜಾ ಗಾಂಧಿಗೂ ಸೆಕೆಂಡ್ ...ಲಾಶ್ರೀಯೆಂಬ ಇಮೇಜ್ ಸೃಷ್ಟಿಯಾಗಿತ್ತು. ಮೌಢ್ಯಕ್ಕೆ ...ದರೂ ಆಯಸ್ಸು ಕಮ್ಮಿಯೇ ತಾನೆ?

2008 ರ ಹೊತ್ತಿಗೆ ಗಾಂಧಿನಗರದ ನಂಬರ್ ಒನ್ ...ಸ್ಟಾರ್ ಎಂದೆಲ್ಲಾ ಮೆರೆದ ಪೂಜಾಗಾಂಧಿಯ ಅದೃಷ್ಟದ ...ಂಟು 2015 ರ ಹೊತ್ತಿಗೆ ಖಾಲಿಖಾಲಿ ...ಡಿಯಲಾರಂಭಿಸಿತು. 'ಕೋಡಗನ ಕೋಳಿ ನುಂಗಿತ್ತಾ' ... ನಿರೀಕ್ಷೆಯಲ್ಲೇ ಶುರುವಾಗಿತ್ತು, ನಂತರ 'ಇನಿಯ'ದ ...ಮೂ ಗಾಂಧಿನಗರ ಭರವಸೆಯಿಟ್ಟಿತ್ತು, ಇದಕ್ಕೂ ...ಾಗಿ 'ಹುಚ್ಚಿ'ಯ ಬಗ್ಗೆ ಮಾತುಗಳೇ ಕೇಳಿಬಂದಿದ್ದವು. ...ಾಗಿ ಕಾದಿರುವೆ', 'ಮಿನುಗು', 'ಗೋಕುಲ', ...ಥೆ'..... ಹೀಗೆ ಪೂಜಾಗಾಂಧಿಯ ಅದೃಷ್ಟವನ್ನೇ ...ಕೊಂಡು ಸಾಲುಸಾಲಾಗಿ ತೆರೆಕಂಡ ಅದ್ದೂರಿಯ ...ಗಳೆಲ್ಲವೂ ಒಂದರಮೇಲೊಂದರಂತೆ ನೆಲಕಚ್ಚಿದ್ದವು. ...ರಲ್ಲ ಪೂಜಾಳನ್ನು ಲಕ್ಕಿ ಸ್ಟಾರ್ ಎಂದು ...ರಿಸಿದ್ದರೋ ಅವರೇ 'ಲತ್ತೆ ಸ್ಟಾರ್' ಎಂದು ...ಗುವ ಕಾಲವೂ ಬಂತು.

...ಈ ಎಲ್ಲಾ ಅಪಸ್ವರಗಳನ್ನು ತೊಡೆಯಲೆಂದೇ ಪೂಜಾ ...ಟ್ಟಾ ಕಾರ್ಕ್ಷೆಯಿಟ್ಟೇ 'ಅಭಿನೇತ್ರಿ' ನಿರ್ಮಾಣಕ್ಕೆ ಮುಂದಾ... ಮಿನುಗುತಾರೆ ಕಲ್ಪನಾಳ ನಿಜ ಬದುಕಿನ ದುರಂತವನ್ನೇ ...ಮಾಡಿ ಅದಕ್ಕೆ ತಾನೇ ಹೀರೋಯಿನ್ನಾಗಿಬಿಟ್ಟರೆ ಮತ್ತೆ ...ಗೆ ಬರಬಹುದೆಂಬ ಭಾರೀ ನಿರೀಕ್ಷೆಯನ್ನೇ ಹೊತ್ತು ...ಣಕ್ಕಿಳಿದಳು ಪೂಜಾ. ಹಾಗೆ ಮಿನುಗುತಾರೆಯ ...ಥೆ ಒಂದನ್ನು ಆಕೆಯ ತಲೆಗೆ ಬಿಟ್ಟು ಇನ್ನಿಲ್ಲದಂತೆ ...ಯಾಮಾರಿಸಿದವನು ಸತೀಶ್ ಪ್ರಸಾದ್ ಎಂಬ ಖತರ್‌ನಾಕ್ ...ಮಿ. ಗಾಂಧಿನಗರದ ಸಂದಿಗೊಂದಿಗಳಲ್ಲಿ ಇಟ್ಟಾಡುವ ...ಶ್ ಪ್ರಸಾದನಂಥ ವಂಚಕರು, ದಗಲುಬಾಜಿಗಳು,





ಕಾಮುಕರು, ಕಿರಾತಕರಿಗೇನು ಗಾಂಧಿನಗರದಲ್ಲಿ ಕಮ್ಮಿಯೇ?

ಅಭಿನೇತ್ರಿಯ ಅವಸಾನ

ಆತುರಗಾರನಿಗೆ ಬುದ್ಧಿ ಮಟ್ಟ ಎಂಬಂತೆ ಒಂದರ ಮೇಲೊಂದು ಸೋಲು. ಪದೇಪದೇ ತೋಪು, ಬಂದವರೆಲ್ಲರಿಂದ ದೋಖಾ, ನೋಡಿನೋಡಿಯೇ ಹತಾಶಳಾಗಿದ್ದ ಮಳೆ ಹುಡುಗಿಗೆ ಸತೀಶ್ ಪ್ರಸಾದನಂಥ ಹರಾಮಿಗಳ ಧೂರ್ತತನದ ಉದ್ದೇಶ ಗೊತ್ತಾಗಲಿಲ್ಲ. ಎಲ್ಲೆಲ್ಲಿಂದಲೋ ಸಾಲ ತಂದಳು. ಅಕ್ಕಪಕ್ಕ ಪರಿಚಿತರನ್ನೆಲ್ಲ ಹಿಡಿದು ಹೆಚ್ಚುಕಮ್ಮಿ ಮೂರೂವರೆ ಕೋಟಿಯಷ್ಟು ಸಾಲ ಹೊಂಚಿದ್ದೇ ಅಭಿನೇತ್ರಿಗೆ ತಂದು ಸುರಿದಳು. ಪಕ್ಕಾ ಕಲ್ಪನಾ ರೀತಿಯಲ್ಲೇ ಹೇರ್‌ಸ್ಟೈಲ್ ಮಾಡಿಕೊಂಡು ಇನ್ನಿಲ್ಲದಂತೆ ಪ್ರಚಾರವನ್ನೂ ಮಾಡಿ ಏನೆಲ್ಲ ಸರ್ಕಸ್ ಮಾಡಿಯೂ 'ಅಭಿನೇತ್ರಿ'ಯನ್ನು ನಿಲ್ಲಿಸಲಾಗಲಿಲ್ಲ. ಮಿನುಗುತಾರೆ ಕಲ್ಪನಾಳ ದುರಂತ ಕತೆ ಕನ್ನಡಿಗರಿಗೇನೂ ಹೊಸದಲ್ಲವಲ್ಲ? ಈ ಹಿಂದೆಯೇ ರಮೇಶ್ ಯಾದವ್ ನಟಿ ಶೃತಿಯನ್ನು ಹಾಕಿಕೊಂಡು ಇದೇ ಕತೆಯನ್ನೇ 'ಮಿನುಗುತಾರೆ' ಎಂಬ ಟೈಟಲ್ಲಿಟ್ಟು ಮಾಡಿದ್ದರಲ್ಲ!

ಅಂಥಾದ್ದರಲ್ಲಿ ಮತ್ತೆ ಕಲ್ಪನಾರದ್ದೇ ಕತೆಗೆ 'ಅಭಿನೇತ್ರಿ' ಎಂದು ಹೆಸರಿಟ್ಟು ಏನೇ ಲಗಾಟಿ ಹೊಡೆದರೂ ಸಿನಿಮಾ ಓಡಬೇಕಲ್ಲ? ಒಂದೇ ವಾರಕ್ಕೆ 'ಅಭಿನೇತ್ರಿ' ಥೇಟರುಗಳಿಂದ ಪರಾರಿ. ಆದರೆ ಕಿಲಾಡಿ ಡೈರೆಕ್ಟರ್ ಸತೀಶ್ ಪ್ರಸಾದ್ ಸಿನಿಮಾದ ಹೆಸರಲ್ಲೇ ಪೂಜಾ ಗಾಂಧಿಗೆ ಬರೋಬ್ಬರಿ ಒಂದು ಕೋಟಿಯಷ್ಟು ಯಾಮಾರಿಸಿದ್ದ 'ಅಭಿನೇತ್ರಿ'ಗೆ ಕೈ ಇಟ್ಟು ಹೆಚ್ಚುಕಮ್ಮಿ ಐದು ಕೋಟಿಗೆ ಕೈಸುಟ್ಟುಕೊಂಡಳು ಪೂಜಾ.

ಸಿಕ್ಕಸಿಕ್ಕ ಪಾತ್ರಗಳನ್ನೆಲ್ಲಾ ಒಪ್ಪಿಕೊಂಡಿದ್ದು ತನ್ನ ಇಮೇಜಿಗೆ ತಕ್ಕಂತೆ ಸೂಪರ್ ಸ್ಟಾರ್‌ಗಳ ಜೊತೆಯಷ್ಟೇ ನಟಿಸುವ ಬದಲು ಚಿಲ್ಲೂಪಿಲ್ಲೂಗಳಿಗೂ ಹೀರೋಯಿನ್ನಾಗಿದ್ದು, ಇದೆಲ್ಲಕ್ಕೂ ಮಿಗಿಲಾಗಿ ತನ್ನ ಮೈಮಾಟವನ್ನು ಕಾಪಾಡಿಕೊಳ್ಳುವುದರಲ್ಲಿ ವಿಫಲಳಾಗಿದ್ದು, ಸಾಲದ್ದಕ್ಕೆ ಸಿಕ್ಕಸಿಕ್ಕವದ್ದರಿಂದೆಲ್ಲ ಸಾಲ ಎತ್ತಿದ್ದು ಪೂಜಾಳ ಅವನತಿಗೆ ಕಾರಣವಾಗಿತ್ತು. ಒಂದಷ್ಟು ದಿನ ಬರೀ ರಾಗಿಮುದ್ದೆ ತಿನ್ನುತ್ತೇನೆಂದು ಇನ್ನೆಂಥದ್ದೋ ವ್ಯಾಯಾಮ ಮಾಡುತ್ತೇನೆಂದು ಬೇರೇನೋ ಗಿಮ್ಮಿಕ್ ಶುರುವಿಟ್ಟಳು. ಆದರೆ ಆ ಹೊತ್ತಿಗಾಗಲೇ ಆಕೆಯ ಒಂದು ಡಜನ್ ಚಿತ್ರಗಳು ನೆಲಕಚ್ಚಿದ್ದವು. ರಾತ್ರೋರಾತ್ರಿ ಆಕೆಯ ಸ್ಟಾರ್‌ವ್ಯಾಲ್ಯೂ ಕುಸಿದುಬಿತ್ತು. 'ತವರಿನ ಋಣ', 'ರಾಣಿ ಮಹಾರಾಣಿ'ಯಂಥ ಸಾಧಾರಣದ ಚಿತ್ರಗಳಲ್ಲೂ ಏಳೆಂಟು ಲಕ್ಷ ರೂಪಾಯಿಗಳ ಸಂಭಾವನೆಗೆ ಪೂಜಾ ನಟಿಸುವಂತಾಯ್ತು. ಇಪ್ಪತ್ತೈದೋ ಮೂವತ್ತೋ ಲಕ್ಷಕ್ಕೆ ತನ್ನ ಕಾಲ್‌ಶೀಟ್ ಕೊಡುತ್ತಿದ್ದ ಪೂಜಾ ಏಕ್‌ದಂ ಏಳೆಂಟು ಲಕ್ಷಕ್ಕೆ ನಟಿಸುತ್ತಾಳೆಂದರೆ ಅದು ದುರ್ಗತಿಯಲ್ಲದೆ ಮತ್ತೇನು?

ದುರಂತದ ಸರಮಾಲೆ

ತನ್ನ ಲೆವೆಲ್ಲಿಗೆ ತಕ್ಕಂತೆ ಸ್ಟಾರ್‌ಗಳ ಜೊತೆಗಷ್ಟೇ ನಟಿಸಬೇಕಿದ್ದ ಪೂಜಾ ಹೊಸಬರು, ಸಿಕ್ಕಸಿಕ್ಕ ಚಿಲ್ಲೂಗಳ ಜೊತೆಗೂ ನಟಿಸಲಾರಂಭಿಸಿದ್ದು ಆಕೆಯ ಸ್ಟಾರ್‌ಗಿರಿಯನ್ನೇ ನುಂಗಿ ಹಾಕಿತ್ತು. ಹಾಗಂತ ಸೋಲೊಪ್ಪಿಕೊಳ್ಳಬಾರದಲ್ಲ, ತನ್ನ ತಂಗಿ ರಾಧಿಕಾ ಗಾಂಧಿಯನ್ನು ಅಖಾಡಕ್ಕಿಳಿಸಿದಳು. ಮಾಲಾಶ್ರೀ ಮಾಡಿದ ಹಾಗೆಯೇ! ಆದರೆ ಅಕ್ಕನ ದುರ್ದೆಸೆಗೆ ತಂಗಿ ಪರಿಹಾರವಾಗಲು ಸಾಧ್ಯವೇ? ತಂಗಿಯೂ ಒಂದೋ ಎರಡೋ ಚಿತ್ರಕ್ಕೆ ಸುಸ್ತುಬಿದ್ದಳು. ಒಂದೆಡೆ ಹಿಂದಿನ ಬೆಲೆಯಿಲ್ಲ, ಮತ್ತೊಂದೆಡೆ ಅವಕಾಶಗಳಿಲ್ಲ, ಮಗದೊಂದೆಡೆ ಹಳೆಯ ಮೈಮಾಟವಿಲ್ಲ, ಈ ಎಲ್ಲಾ ಹತಾಶೆಗಳ ಪರಿಣಾಮವೆಂಬಂತೆ ಪೂಜಾಳ ಬದುಕಲ್ಲಿ ಮೇಲಿಂದ ಮೇಲೆ ಅವಘಡಗಳು, ಅಪಸವ್ಯಗಳು ಸಂಭವಿಸುತ್ತಲೇ ಬಂದವು. ಯಾರೋ ಡಾಕ್ಟರ್ ಕಿರಣ್ ಎಂಬಾತ ಪೂಜಾ ಗಾಂಧಿಗೆಂದು ಕೊಟ್ಟಿದ್ದ ಕಾರನ್ನು ಕಿತ್ತುಕೊಂಡನಂತೆ, ಅದರ ವಿರುದ್ಧ ಪೂಜಾ ಪೊಲೀಸರಿಗೆ ದೂರು ಕೊಟ್ಟಳಂತೆ, ಇದಕ್ಕೆ ಪ್ರತಿಯಾಗಿ ಆತನೂ ಈಕೆಯ ವಿರುದ್ಧ ವಂಚನೆಯ ಕೇಸು ಹಾಕಿದ್ದಾನಂತೆ ಎಂಬಲ್ಲಿಂದ ಶುರುವಾದ ರಂಪರಾಮಾಯಣಗಳು ಕೊನೆಗೂ ನಿಲ್ಲಲೇ ಇಲ್ಲ. ಹೀಗೆ ರಾದ್ಧಾಂತಗಳೆದ್ದಾಗಲೆಲ್ಲಾ ಪೂಜಾಳನ್ನು ಈತನೇ ಮದುವೆಯಾಗಬೇಕಿತ್ತೆಂದೋ ಮದುವೆಯಾಗಿದ್ದನೆಂದೋ ರೂಮರ್ ಕೂಡ ಹಬ್ಬುತ್ತಿತ್ತು.

ಡಾಕ್ಟರ್ ಕಿರಣ್ ತೊಂಬೆಟ್ಟು ಎಂಬಾತ ಬೆಂಗಳೂರಿನ ಕಿಮ್ಸ್‌ನಲ್ಲಿ ವೈದ್ಯನಾಗಿದ್ದದ್ದು ಹೌದಾದರೂ ಆತನ ಸಿನಿಮಾ ಶೋಕಿಗಳು ಮತ್ತು ಅದರಿಂದ ಒದಗಿದ ದುರ್ಗತಿಯ ಬಗ್ಗೆ ಯಾರೂ ಗಮನ ಹರಿಸಲಿಲ್ಲ. ಇದರ ಬೆನ್ನಲ್ಲೇ ಪೂಜಾ ಗಾಂಧಿ ಆನಂದಗೌಡನೆಂಬ ಉದ್ಯಮಿಯನ್ನು ಮದುವೆಯಾಗುತ್ತಿದ್ದಾಳೆಂಬ ಹೊಸ ಎಪಿಸೋಡು ತಲೆ ಎತ್ತಿತ್ತು. ಒಂದು ದುರಂತದ ಮರೆಯಲ್ಲೇ ಮತ್ತೊಂದು ಸಂಭ್ರಮದ ಘಟನೆ ಎದ್ದು ನಿಲ್ಲುವುದು ಬಹುಶಃ ಪೂಜಾ ಗಾಂಧಿಯ ಜಾಯಮಾನವಿರಬೇಕು. ರಿಯಲ್ ಎಸ್ಟೇಟ್ ಉದ್ಯಮಿ, ಅನುಕೂಲದ ಬಿಜಿನೆಸ್‌ಮನ್, ಅಪ್ಪಟ ಕನ್ನಡಿಗ, ಜಾತಿಯಿಂದ ಒಕ್ಕಲಿಗ ಎಂದೆಲ್ಲಾ ಹೆಗ್ಗಳಿಕೆಯಿದ್ದ ಆನಂದ ಗೌಡನ ಸಹವಾಸವೋ ಅಥವಾ ಶುಕ್ರದೆಸೆಯೋ ಗೊತ್ತಿಲ್ಲ, ಅದೇ ಹೊತ್ತಿಗೆ ಪೂಜಾ ಗಾಂಧಿ ರಾಜಕೀಯಕ್ಕೂ ಎಂಟ್ರಿ ಕೊಟ್ಟು ತಾನು ಜೆಡಿಎಸ್ ಪಕ್ಷ ಸೇರಿಕೊಂಡಿದ್ದೇನೆಂದೂ ಮುಂದಿನ ಚುನಾವಣೆಯಲ್ಲಿ ದೇವೇಗೌಡರ ಪರ ಪ್ರಚಾರ ಮಾಡುತ್ತೇನೆಂದೂ ಘೋಷಿಸಿಯೇ ಬಿಟ್ಟಳು.

ಬಿಎಸ್‌ಆರ್ ಕಾಂಗ್ರೆಸ್!

ಅದೇನು ಗ್ರಹಚಾರವೋ ಗೊತ್ತಿಲ್ಲ, ನಿಶ್ಚಿತಾರ್ಥವನ್ನು ಅದ್ದೂರಿಯಾಗೇ ಮಾಡಿಕೊಂಡ ಆನಂದಗೌಡ ಒಂದೇ ತಿಂಗಳಲ್ಲಿ ಉಲ್ಟಾ ಹೊಡೆದ. ಕ್ಷುಲ್ಲಕ ವಿಷಯಕ್ಕೆ ಆನಂದಗೌಡನ ಜೊತೆ ಕಿತ್ತಾಡಿಕೊಂಡ ಪೂಜಾ ಗಾಂಧಿ ಅಷ್ಟೇ ನಿರ್ದಾಕ್ಷಿಣ್ಯವಾಗಿ ನಿಶ್ಚಿತಾರ್ಥದ ರಿಂಗು ಕಿತ್ತೆಸೆದಳು. ಗ್ರಹಚಾರದ ಸರಮಾಲೆಯೋ ಗೊತ್ತಿಲ್ಲ, ಅದೇ ಹೊತ್ತಿಗೆ ಜೆಡಿಎಸ್ ಅಧಿಪತಿ ಕುಮಾರಣ್ಣ ಬೇರೆ ಪೂಜಾಳ ವಿರುದ್ಧ ಕಿಡಿಕಾರಿ, ಪೂಜಾ ಗಾಂಧಿಯಂಥ ನಟಿಯನ್ನು ಕಟ್ಟಿಕೊಂಡು ಜೆಡಿಎಸ್‌ಗೆ ಆಗಬೇಕಾದದ್ದು ಏನೂ ಇಲ್ಲ ಎಂದು ಛೀಕರಿಸಿ ಬಿಟ್ಟರು. ಅಲ್ಲಿಗೆ ಪೂಜಾ-ಜೆಡಿಎಸ್- ಆನಂದಗೌಡನೆಂಬ ಪ್ರಿಯಕರ ಇತ್ಯಾದಿ ಎಪಿಸೋಡೇ ಮುರಿದುಹೋಗಿತ್ತು.

ಹಾಗಂತ ಕೈಕಟ್ಟಿ ಕೂರುವ ಜಾಯಮಾನವಲ್ಲವಲ್ಲ ಪೂಜಾಳ ಪಾಲಿಟಿಕ್ಸ್ ಖಯಾಲಿ ಗಣಿಕಳ್ಳರ ಬಿಎಸ್‌ಆರ್ ಕಾಂಗ್ರೆಸ್ ಮೂಲಕ ಮುಂದುವರಿದಿತ್ತು. ಅದ್ಯಾವ ಮಟ್ಟದ ಡೀಲು ಕುದುರಿತ್ತೋ ಅದರ ವೆಚ್ಚವೆಷ್ಟೋ ಬಲ್ಲವರ್ಯಾರು? ರಕ್ಷಿತಾ ಕೈಕೊಟ್ಟು ಖಾಲಿ ಬಿದ್ದ ಜಾಗಕ್ಕೆ ಪೂಜಾ ಗಾಂಧಿ ಕಾಲಿಟ್ಟಿದ್ದು ದೊಡ್ಡ ಸುದ್ದಿ ಕೂಡ ಎನಿಸಲಿಲ್ಲ. ಬಿಎಸ್‌ಆರ್ ಕಾಂಗ್ರೆಸ್ ಚುನಾವಣೆಯಲ್ಲಿ ಯಾವ ಗತಿ ಅನುಭವಿಸಿತೋ ಅದೇ ಗತಿ ಪೂಜಾ ಗಾಂಧಿಗೂ ಪ್ರಾಪ್ತಿಯಾಗಿತ್ತು. ಬಿಎಸ್‌ಆರ್ ಕಾಂಗ್ರೆಸ್‌ನ ಗದಗ್ ಅಭ್ಯರ್ಥಿ ಅನಿಲ್ ಮೆಣಸಿನಕಾಯಿ ಇನ್ನೇನು ಪೂಜಾ ಗಾಂಧಿಯ ಕೈಹಿಡಿದೇಬಿಟ್ಟ ಎಂಬಂತೆ ಒಂದು ಸುದ್ದಿ ಬೆನ್ನಲ್ಲೇ ಪೂಜಾ ಬಿಎಸ್‌ಆರ್ ಕಾಂಗ್ರೆಸ್ ಮತ್ತು ಅನಿಲ್ ಮೆಣಸಿನಕಾಯಿಗೆ ಒಟ್ಟೊಟ್ಟಿಗೆ ಗುಡ್ ಬೈ ಹೇಳಿದಳಂತೆ ಎಂಬುದು ಮತ್ತೊಂದು ಸುದ್ದಿ. ಬಿಡದಿ ಮೂಲದ ಭೂಗತ ದೊರೆಯೊಬ್ಬನ ಬಂಟ ಭರತ್ ಎಂಬಾತನ ಜೊತೆಗೆ ಪೂಜಾ ಮದುವೆಯೆಂಬುದು ಮಗದೊಂದು ಸುದ್ದಿ. ಇನ್ಯಾರೋ ಬಳ್ಳಾರಿ ಮೂಲದ ಗಣಿ ದೊರೆ ವಿಜಯ್ ಘೋರ್ಪಡೆ ಎಂಬಾತನ ಜೊತೆ ಪೂಜಾಳ ಒಡನಾಟವಂತೆ ಎಂಬ ಸುದ್ದಿ; ಹೀಗೆ ಗಾಸಿಪ್ಪುಗಳ ಮೇಲೆ ಗಾಸಿಪ್, ವದಂತಿಯ ಮೇಲೆ ವದಂತಿಗಳು ಪೂಜಾಳ ಬದುಕಲ್ಲಿ ಚಲಿಸುವ ಮೋಡಗಳಂತೆ ಹರಿದಾಡುತ್ತಲೇ ಇದ್ದವು.

ಮೇಲುನೋಟಕ್ಕೆ ಏನೇನೋ ಭಾನಗಡಿಗಳಂತೆ ಪೂಜಾಳ ದಿಕ್ಕುತಪ್ಪಿದ ಅಲೆದಾಟದಂತೆ ಕಾಣುತ್ತಿದ್ದ ಇಂಥ ಕ್ಷುಲ್ಲಕ ಸಂಗತಿಗಳೆಲ್ಲ ಜನರ ಮನೋವಿಕೃತಿಗೆ ಬಿಟ್ಟ ಮನರಂಜನೆಗಳಂತೆ ಕಂಡರೂ ಆಳದಲ್ಲಿ ತನ್ನ ಅಸ್ತಿತ್ವಕ್ಕಾಗಿ ಓರ್ವ ನಟಿಯಾಗಿ ತನ್ನ ಉಳಿವಿಗಾಗಿ, ಹೇಗಾದರೂ ಮಾಡಿ ತನ್ನ ಇಮೇಜನ್ನು ಕಾಪಾಡಿಕೊಳ್ಳಲೇಬೇಕೆಂಬ ಆಕೆಯ ಹೆಣಗಾಟದ ಫಲಶ್ರುತಿಗಳೇ ಆಗಿದ್ದವು. ಒಬ್ಬ ಹೆಣ್ಣಾಗಿ, ಅದರಲ್ಲೂ ಏಕಾಂಗಿಯಾಗಿ, ಹೆಜ್ಜೆಹೆಜ್ಜೆಗೂ ಮುಕ್ಕಲು ಹೊಂಚಿ ಕೂತ ತೋಳಗಳ ನಡುವೆ ಏನೆಲ್ಲಾ ನಾಟಕವಾಡಿಯೂ ತನ್ನ ಅಸ್ತಿತ್ವ ಕಾಪಾಡಿಕೊಳ್ಳಲು ಹೆಣಗಾಡುವ ಪೂಜಾಳ ಎಲ್ಲಾ ಪ್ರಯತ್ನಗಳೂ ಜನರ ವಿಕೃತಿಗೆ ವಸ್ತುಗಳಾದವು. ಕೆಲವೊಮ್ಮೆ ಹಾಸ್ಯಾಸ್ಪದವಾಗಿ, ಇನ್ನೂ ಕೆಲವೊಮ್ಮೆ ಹತಾಶಳಾಗಿ, ಮತ್ತೊಮ್ಮೆ ದಿಟ್ಟಳಾಗಿ, ಮಗದೊಮ್ಮೆ ಕೆಟ್ಟವಳಾಗಿ ಕಾಣುವ ಪೂಜಾ ಗಾಂಧಿಯನ್ನು ಪ್ರತಿಯೊಬ್ಬರೂ ತಂತಮ್ಮ ಅನುಕೂಲಕ್ಕೆ ತಕ್ಕಂತೆ ನೋಡುತ್ತಿದ್ದರೇ ಹೊರತು ಯಾರಿಗೂ ಆಕೆಯ ವರ್ಚಸ್ಸು ವ್ಯಕ್ತಿತ್ವ ಬೇಕಿರಲಿಲ್ಲ!

ಚೊಡಾಚಾರಿ

ಇನ್ನು ಲೋಕವೇ ಹಾಗಿರುವಾಗ ಅದನ್ನು ತನ್ನ ಸ್ವಾರ್ಥಕ್ಕೆ ತಕ್ಕಂತೆ ಬಳಸಿಕೊಳ್ಳುವುದು ಯಾವ ಮಹಾ ತಪ್ಪು?

ಪೂಜಾಳ ಇಂಥಾ ಹತಾಶ ಸ್ಥಿತಿಯಲ್ಲೇ ತಂತಮ್ಮ ಪಾಲಿನ ಚಳಿ ಕಾಯಿಸಿಕೊಂಡವರು, ಬೇಳೆ ಬೇಯಿಸಿಕೊಂಡವರು, ಸುಲಿದವರು, ವಂಚಿಸಿದವರು, ದೋಚಿದವರು, ದ್ರೋಹಗೈದವರು ಒಬ್ಬರಾ ಇಬ್ಬರಾ? ಈ ಸಾಲಿನಲ್ಲಿ ಲೇಟೆಸ್ಟ್ ಪೀಡಕನಂತೆ ಪೂಜಾಳ ಬದುಕಿಗೆ ಕಾಲಿಟ್ಟವನೇ ಚೊಡಾಚಾರಿ. ಸಿನಿಮಾ ನಟಿಯರೆಂದರೇನೇ ವಂಚಿಸುವುದು ತನ್ನ ಆಜನ್ಮ ಸಿದ್ಧ ಹಕ್ಕೆಂಬಂತೆ ಹೊಂಚುಹಾಕುವ ಚೊಡಾಚಾರಿಯಿಂದಾಗಿ ಈಗಾಗಲೇ ಖ್ಯಾತ ನಟಿಯೊಬ್ಬಳ ಬದುಕು ಮೂರಾಬಟ್ಟೆಯಾದ ದುರಂತ ಕಣ್ಣಮುಂದಿರುವಾಗಲೇ ಪೂಜಾ ಅದ್ಹೇಗೆ ಈತನಿಗೆ ಬಲಿ ಬಿದ್ದಳೋ ಗೊತ್ತಿಲ್ಲ, ತಾನೊಬ್ಬ ಪತ್ರಕರ್ತ, ನೀರಾವರಿ ತಜ್ಞ, ಸಿನಿಮಾ ಎಕ್ಸ್‌ಪರ್ಟ್, ಕಿತ್ತೋದ ಡೈರೆಕ್ಟರ್ ಎಂದೆಲ್ಲ ಕತೆ ಕಟ್ಟಿಯೇ ಎಂಟ್ರಿಕೊಟ್ಟ ಚೊಡಾಚಾರಿ ಶುರುವಿನಲ್ಲಿ ಪೂಜಾಳ ಪೀಯೇಕಂ ಆಪ್ತ ಸಲಹೆಗಾರನಂತೆ ಪೋಜು ಕೊಟ್ಟ. ಕಾಲಕ್ರಮೇಣ ಪೂಜಾಳನ್ನು ಮುಂದಿಟ್ಟುಕೊಂಡು ಕಳಸಾ ಬಂಡೂರಿ ಹೋರಾಟದ ಕುರಿತಂತೆ ಡಾಕ್ಯುಮೆಂಟರಿ ಮಾಡ್ತೀನಿ ಎಂದು ಭೋಂಗು ಬಿಟ್ಟ.


ಕಳಸಾ ಬಂಡೂರಿ ಕುರಿತಂತೆ ನೂರಾರು ಮಂದಿ ಹೋರಾಟಗಾರರೇ ಬೀದಿಗಿಳಿದಿರುವಾಗ ಈ ಚೊಡಾಚಾರಿ ಮಾಡುವ ಡಾಕ್ಯುಮೆಂಟರಿಯಿಂದ ಯಾರಾದರೂ ಏನಾದರೂ ಕಲಿಯುವುದುಂಟಾ ತಿಳಿಯುವುದುಂಟಾ? ಪಾಪ, ಮಳೆ ಹುಡುಗಿಗಿದು ಗೊತ್ತಾಗಬೇಕಲ್ಲ? ಚೊಡಾಚಾರಿಯನ್ನು ನಂಬಿ ಆತ ಕರೆದ ಊರು, ಹೇಳಿದ ಜಾಗ, ತೋರಿದ ತಾಣಕ್ಕೆಲ್ಲಾ ಅಲೆದದ್ದೇ ಅಲೆದದ್ದು. ಅದೇನು ಡಾಕ್ಯುಮೆಂಟರಿಯೋ ಮಣ್ಣಂಗಟ್ಟಿಯೋ ಅಂತೂ ಪೂಜಾಗಾಂಧಿಯ ಲಕ್ಷಗಟ್ಟಲೇ ರೊಕ್ಕವನ್ನು ಚೊಡಾಚಾರಿ ಹುಡಿ ಹಾರಿಸಿಬಿಟ್ಟ. ಸಾಲದ್ದಕ್ಕೆ ತಾನೇ ಪೂಜಾಗಾಂಧಿಯನ್ನು ಮದುವೆಯಾಗೋದು, ತನ್ನ ಮೊದಲ ಪತ್ನಿಗೆ ಪರಿಹಾರ ಕೊಟ್ಟು ಬಿಟ್ಟರೆ ಆಕೆಯೇ ಸಹಿ ಹಾಕಿ ಕೊಡುತ್ತಾಳೆ, ಅಂಥಾದ್ದರಲ್ಲಿ ನನ್ನನ್ನು ಬಿಟ್ಟರೆ ಪೂಜಾಗಾಂಧಿಗೆ ಗತಿಯೆಲ್ಲುಂಟು? ನಾನೇ ಆಕೆಯ ಪ್ರಿಯಕರ ಎಂದೆಲ್ಲ ಚೋಡಿದ್ದೇ ಚೋಡಿದ್ದ. ಅದಕ್ಕೆ ತಕ್ಕಂತೆ ಚೋಡಾಚಾರಿ ಹೆಣೆದ ಮತ್ತೊಂದು ಗಿಮ್ಮಿಕ್ ಎಂದರೆ 'ಲಾವಣಿ' ಹೆಸರಿನ ಸಿನಿಮಾ!

ಅದ್ಯಾರೋ ನೆಲಮಂಗಲದ ನೆಲಗಳ್ಳನೊಬ್ಬನನ್ನು ಯಾಮಾರಿಸಿ ಆತನನ್ನೇ ಹೀರೋ ಮಾಡ್ತೀನಿ ಎಂದೆಲ್ಲ ಕತೆ ಕಟ್ಟಿದ ಚೋಡಾಚಾರಿ ತನಗೊಂದು ಒಳ್ಳೆಯ ಪಾತ್ರ ಕೊಡುತ್ತಾನೆಂದೇ ಪೂಜಾ ನಿರೀಕ್ಷಿಸಿದ್ದಳು. ಆದರೆ ಚೋಡಾಚಾರಿಯ ಉದ್ದೇಶವೇ ಬೇರೆಯಿತ್ತು. ಪೂಜಾಳನ್ನು ತೋರಿಸಿ ನೆಲಮಂಗಲದ ಗೌಡನಿಗೆ ಟೋಪಿಯಿಕ್ಕುವುದು ಮತ್ತು ನೆಲಮಂಗಲದ ಪ್ರೊಡ್ಯೂಸರ್ ಬಳಿ ಕೋಟಿಯಿದೆಯೆಂದು ನಂಬಿಸಿ ಪೂಜಾಳನ್ನು ಪಟಾಯಿಸುವುದು. ಹಾಗಂತ ಸುಲಭಕ್ಕೆ ಯಾಮಾರುವಷ್ಟು ಮುಗ್ಧೆಯಲ್ಲ ಪೂಜಾ. 'ಮೊದಲು ಒಂದು ಕೋಟಿ ಮಡಗು.... ನನ್ನ ಬ್ಯಾನರ್‌ನಿಂದಲೇ ಸಿನಿಮಾ ಮಾಡೋಣವಂತೆ' ಎಂದು ಹಠಕ್ಕೆ ಬಿದ್ದಳು. ಕಳಸಾ ಬಂಡೂರಿ ಡಾಕ್ಯುಮೆಂಟರಿಯ ಹೆಸರಲ್ಲಿ ಚೋಡಾಚಾರಿ ಹುಡಿಹಾರಿಸಿದ ಮೊತ್ತವನ್ನೆಲ್ಲ ಕೊಟ್ಟ ಕಾಸಲ್ಲೇ ವಜಾ ಹಾಕಿಕೊಳ್ಳುತ್ತೇನೆಂದಳು. ಅದು ಇಷ್ಟಕ್ಕೆ ಮುಗಿಯದೇ ದಿನೇದಿನೇ ಘರ್ಷಣೆ ತೀವ್ರವಾದಾಗ ಚೋಡಾಚಾರಿ' ನೆಲಮಂಗಲದ ರೊಕ್ಕಸ್ಥ ಮತ್ತವನ ರೌಡಿ ಪಡೆಯ ವಿರುದ್ಧ ಪೂಜಾ ಮೊರೆ ಹೋಗಿದ್ದು ಪ್ರಶಾಂತ್ ಅಲಿಯಾಸ್ ಪ್ರಶಾಂತ್ ರಾಜ್ ಎಂಬ ಮತ್ತೊಬ್ಬ ರೊಕ್ಕಸ್ಥನಿಗೆ.

ಈಗ ಪ್ರಶಾಂತ್ ಪೂಜಾಳ ಹೃದಯಮಂದಿರಕ್ಕೇ ಎಂಟ್ರಿ ಕೊಟ್ಟಿರಬೇಕು. ತನ್ನ ಕೈಮೇಲೆ ಆತನ ಹೆಸರನ್ನೇ ಹಚ್ಚೆ ಹಾಕಿಸಿಕೊಂಡ ಮೇಲೆ ಮಾಂಗಲ್ಯಂ ತಂತುವಿನದ್ದು ಎಷ್ಟು ಹೊತ್ತು? ಪ್ರಶಾಂತ್ ರಾಜ್ ಒರಟು ನಿಜ. ಆತನ ಹಿನ್ನೆಲೆಯು ಒರಟುತನದಿಂದಲೇ ಕೂಡಿರಬೇಕು. ಟ್ರಾವೆಲ್ಸ್ ದಂಧೆಯಿದೆ. ಜೆ.ಪಿ. ನಗರದಲ್ಲಿ ಆಸ್ತಿಯಿದೆ. ಶುದ್ಧ ಕನ್ನಡಿಗನಂತೆ. ಈತನ ಅಣ್ಣನೊಬ್ಬ ಯಾವುದೋ ಕಾಲಕ್ಕೆ ಫೀಲ್ಡ್‌ನಲ್ಲಿದ್ದನಂತೆ. ಅವನ ಫೀಲ್ಡಿನ ಹೆಸರು ಬುಜ್ಜಿ ಎಂದಿತ್ತಂತೆ. ರೌಡಿಯೊಬ್ಬನ ತಮ್ಮನಾದ ಮಾತ್ರಕ್ಕೇ ಪ್ರಶಾಂತ್ ಕೂಡ ರೌಡಿಯಾಗಲು ಸಾಧ್ಯವೇ? ಅದೆಷ್ಟೋ ಗಂಡಸರನ್ನು ನಂಬಿ ಮೋಸಹೋದ ತಪ್ಪಿಗೆ ಮಳೆ ಹುಡುಗಿ ಮನೆ ಸೇರಲೇಬಾರದೆ?

ಕತ್ತಲು ಕಳೆಯಲೇಬೇಕು. ರಾತ್ರಿ ಮುಗಿಯಲೇಬೇಕು. ಪ್ರತಿ ಆಷಾಢಕ್ಕೂ ಕೊನೆಯೆಂಬುದು ಇರಲೇಬೇಕಲ್ಲವೇ? ಎಂಥಾ ಬಿರುಬೇಸಿಗೆಯಿದ್ದರೇನಂತೆ, ಮುಂಗಾರು ಮಳೆ ಹನಿಯಲೇಬೇಕಲ್ಲವೆ? ಅಂಥದೊಂದು ಮುಂಗಾರು ಪೂಜಾಳ ಬದುಕನ್ನು ಹಸನಾಗಿಸಲಿ, ಹಸಿರಾಗಿಸಲಿ, ನಳನಳಿಸಲಿ.

■ ರಾ. ಸೋಮನಾಥ್



ಭಾಸ್ಕರ್ ಶೆಟ್ಟಿ

ಉಡುಪಿಯ ಕಾಮಕುಂಡ ಕೊಲೆ ತನಿ

ಹೆಂಡತಿಯ ಪಲ್ಲಂಗ ಪ್ರಸಂಗ ಕಂಡಿದ್ದೇ ಕೇಡಾಯ್ತು ಶೆಟ್ಟಿಗೆ



ನಿರಂಜನ ಭಟ್ಟ | ರಾಜೇಶ್ವರಿ | ನವನೀತ ಶೆಟ್ಟಿ

ಗಲಾಟೆ-ಜಗಳದಲ್ಲಿ ಭಾಸ್ಕರ ಶೆಟ್ಟಿ, ಹೆಂಡತಿಯ ಮೊಬೈಲ್ ಸೆಟ್ ಕಸಿದುಕೊಂಡಿದ್ದಾನೆ. ಆದರಲ್ಲಿದ್ದ ದಾಖಲೆಗಳನ್ನೆಲ್ಲ ತಡಕಾಡಿದ್ದಾನೆ. ಮಂತ್ರವಾದಿ ಮಳ್ಳ ಭಟ್ಟನ ಜತೆಗೆ ಮಡದಿಗಿದ್ದ ಕೊಳಕು ಗೆಳೆತ ದೈಹಿಕ ನಂಟಿನ ಅಂಟೆಲ್ಲ ಆತನಿಗೆ ಕಾಣಿಸಿದೆ. ಆತ ಕುದ್ದು ಹೋಗಿದ್ದಾನೆ. ರಾಜೇಶ್ವರಿಯ ಹೊಲಸು ಚಿತ್ರಣಗಳು ಭಾಸ್ಕರ್ ಶೆಟ್ಟಿ ಕಣ್ಣಿಗೆ ಬಿದ್ದನಂತರ ಗಲಾಟೆಯಾಗಿತ್ತಲ್ಲ, ಆಗಲೇ ರಾಜೇಶ್ವರಿ-ನವನೀತ ಬೇಹುಗಾರಿಕೆ ಆರಂಭಿಸಿದ್ದರು. ಭಾಸ್ಕರ್ ಶೆಟ್ಟಿ ತಮ್ಮ ಮೇಲೆ ಕಾನೂನಾತ್ಮಕವಾಗಿ-ನೈತಿಕ-ಸಾಮಾಜಿಕ ತಿರುಗಿ ಬೀಳಬಹುದೆಂಬ ಭಯ ಅವರದಾಗಿತ್ತು. ಹೀಗಾಗಿ ಖತರ್‌ನಾಕ್ ನವನೀತ ದುರ್ಗಾ ಇಂಟರ್‌ನ್ಯಾಷನಲ್ ಹೊಟೇಲಿನಲ್ಲಿದ್ದ ಭಾಸ್ಕರಶೆಟ್ಟಿಯ ಖಾಸಗಿ ಕೋಣೆಯ ದೇವರ ಫೋಟೋದ ಹಿ ಮೊಬೈಲ್‌ನ ವಾಯಸ್ ರೆಕಾರ್ಡರ್ ಆನ್ ಮಾಡಿ ಇಡತೊಡಗಿದ್ದ. ಅಪ್ಪ ಏನೇನು ಯಾರ್ಯಾರ ಬ ಮಾತಾಡುತ್ತಾನೆ? ತಮಗೇನಾದರೂ ಮದ್ದು ಅರೆಯುತ್ತಿದ್ದಾನಾ? ಆತನ ಮುಂದಿನ ಯೋಚನೆ ಏನೆಂಬುದನ್ನು ಅರಿಯುವ ಉದ್ದೇಶ ನವನೀತನದಾಗಿತ್ತು. ಭಾಸ್ಕರ್ ಶೆಟ್ಟಿಯ ಯೋಜನೆ-ಯೋಚನೆಗಳೆಲ್ಲವೂ ರಾಜೇಶ್ವರಿ-ನವನೀತ-ನಿರಂಜನರಿಗೆ ಕರಾರುವಾಕ್ಕಾಗಿ ಗೊತ್ತಾಗಿತ್ತು.

ಅದು ಬರೋಬ್ಬರಿ ಸಾವಿರದ ಮುನ್ನೂರು ಪುಟಗಳ ಪ್ರಾಥಮಿಕ ದೋಷಾರೋಪಣಾ ಪಟ್ಟಿ; ಅಂದರೆ ಬಹುಕೋಟಿಗೆ ತೂಗುತ್ತಿದ್ದ ಉಡುಪಿಯ ಎನ್‌ಆರ್‌ಐ ಉದ್ಯಮಿ ಭಾಸ್ಕರ ಶೆಟ್ಟಿಯ ಕೊಲೆ ತನಿಖೆಯ ಆರಂಭಿಕ ಚಾರ್ಜ್‌ಶೀಟ್. ಸಿಐಡಿ ಪೊಲೀಸರ ಈ ತನಿಖಾ ವರದಿಯೀಗ ಉಡುಪಿ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿದೆ. ಇನ್ನೇನು ಈ ಕೋಟ್ಯಾನುಕೋಟಿ ಬೆಲೆಯ ಕೊಲೆ ಕೇಸು ಹಳ್ಳಹಿಡಿದಂತೆಯೇ ಎಂದು ಜನರು ಬೇಸರಿಸುತ್ತಿರುವಾಗಲೇ ಸಿಐಡಿ ಪೊಲೀಸರು ನಿಯತ್ತಿನಿಂದ ಕರ್ತವ್ಯ ನಿಭಾಯಿಸಿ ತೊಟ್ಟ ಖಾಕಿಯ ಮರ್ಯಾದೆ ಕಾಪಾಡಿರುವುದು ಎಲ್ಲರ ಹುಬ್ಬೇರುವಂತೆ ಮಾಡಿದೆ.

ಅಗ್ನಿಸಾಕ್ಷಿಯಾಗಿ ಕೈಹಿಡಿದ ಹೆಂಡತಿ, ಹೆತ್ತ ಮಗ ಮತ್ತು ಹೆಂಡತಿ 'ಇಟ್ಟುಕೊಂಡಿದ್ದ' ಮಾಂತ್ರಿಕ ಕರಾರುವಾಕ್ಕಾದ ಸ್ಕೆಚ್ ಹೆಣೆದು ಭಾಸ್ಕರ ಶೆಟ್ಟಿಯನ್ನು ಕೊಂದು, ಸುಟ್ಟು ಹಾಕಿ, ಬೂದಿ-ಮೂಳೆ ಮೂಟೆ ಕಟ್ಟಿ ಹೊಳೆಗೆ ಬಿಸಾಕಿದ್ದಾರೆಂಬುದು ಸಿಐಡಿ ವರದಿಯ ಪುಟಪುಟವೂ ಸಾರಿ-ಸಾರಿ ಹೇಳುತ್ತಿದೆ. ಸುಮಾರು ಎಂಬತ್ತರಷ್ಟು ಹೇಳಿಕೆ ದಾಖಲಾಗಿರುವ ಈ ವರದಿಯಲ್ಲಿ ಭಾಸ್ಕರ ಶೆಟ್ಟಿಯ ಹೆಂಡತಿ ರಾಜೇಶ್ವರಿಯ ಕಾಮಪಿಪಾಸು ಸ್ವಭಾವ ಹಾಗು ಆಸ್ತಿ ವಿವಾದಗಳೇ ಕಗ್ಗೊಲೆಗೆ ಮೂಲಕಾರಣವೆಂದು ಸಿಐಡಿ ಸ್ಪಷ್ಟವಾದ ತೀರ್ಮಾನಕ್ಕೆ ಬಂದಿದೆ.

ಮನೆಹಾಳು ಮಂತ್ರವಾದಿ ನಿರಂಜನ ಭಟ್ಟನ ನಂದಳಿಕೆಯ ಮನೆ ಹತ್ತಿರದ ಹೊಳೆಯಿಂದ ಸಿಐಡಿ ಪೊಲೀಸರು ಹೆಕ್ಕಿ ತೆಗೆದ ಎಲುಬಿನ ತುಂಡುಗಳು ಮತ್ತು ಸದ್ರಿ ಭಟ್ಟನ 'ವೆರ್ನಾ' ಕಾರಲ್ಲಿ ಹಾಗು ಭಾಸ್ಕರಶೆಟ್ಟಿಯ ಪುತ್ರ ನವನೀತನ 'ಕ್ರೇಟಾ' ಕಾರಲ್ಲಿದ್ದ ರಕ್ತದ ಕಲೆಗಳು ಹತ್ಯೆಯಾದ ಭಾಸ್ಕರ ಶೆಟ್ಟಿಯದೇ ಎಂಬುದು ಡಿಎನ್‌ಎ ಪರೀಕ್ಷೆಯಲ್ಲಿ ಪಕ್ಕಾ ಆಗಿದೆ. ಇದನ್ನು ಚಾರ್ಜ್‌ಶೀಟಲ್ಲಿ ದಾಖಲಿಸಿರುವ ಸಿಐಡಿ ಕೊಲೆ ಸಂಚಿನಲ್ಲಿ ಒಟ್ಟು ಐವರಿದ್ದಾರೆಂದು ಹೇಳಿದೆ. ಭಾಸ್ಕರಶೆಟ್ಟರ ಹೆಂಡತಿ ರಾಜೇಶ್ವರಿ, ಮಗ ನವನೀತ, ಮಂತ್ರವಾದಿ ನಿರಂಜನ ಭಟ್ಟ, ಆತನ ತಂದೆ ಶ್ರೀನಿವಾಸ ಭಟ್ಟ ಮತ್ತು ಕಾರಿನ ಚಾಲಕ ರಾಘವೇಂದ್ರರ ಮೇಲೆ ಐಪಿಸಿ 302, 201, 201, 120 (ಬಿ) ಹಾಗು ರೆ/ವಿ 34ರಂತೆ ಆರೋಪ ಫಿಕ್ಸ್ ಮಾಡಲಾಗಿದೆ. ಭಾಸ್ಕರ ಶೆಟ್ಟಿ ಬದುಕಿದ್ದರೆ ಆತನ ಕೋಟ್ಯಾಂತರ ರೂ. ಆಸ್ತಿಯಲ್ಲಿ ಪಾಲು ಸಿಗಲಾರದೆಂಬ ಆತಂಕ ರಾಜೇಶ್ವರಿ, ನವನೀತ ಮತ್ತು ನೀಚ ನಿರಂಜನರಿಗೆ ಶುರುವಾಗಿತ್ತು. ರಾಜೇಶ್ವರಿಗೋ ಗಂಡ ಬದುಕಿದ್ದರೆ ಮಾಂತ್ರಿಕ ನಿರಂಜನನ ಜೊತೆ ತನಗಿರುವ ಹಾದರದ ಸಂಬಂಧ ಜಗಜ್ಜಾಹೀರಾಗುತ್ತದಲ್ಲದೇ ಆ ಸುಖಕ್ಕೆ ಕಲ್ಲು ಬೀಳುತ್ತದೆಂಬ ಕಸಿವಿಸಿ ಶುರುವಾಗಿತ್ತು. ಈ ಅಂಶಗಳ ಸುತ್ತಲೇ ಸಿಐಡಿ ವರದಿ ಹೆಣೆದುಕೊಂಡಿದೆ.

ಕೃಷ್ಣನ ಸನ್ನಿಧಿಯಲ್ಲಿ ಸಂಚು

ವಯಸ್ಸು ಐವತ್ತು ದಾಟಿದರೂ ರಾಜೇಶ್ವರಿಯ ಕಾಮನೆಗಳಿನ್ನೂ ಪುಟಿದೇಳುವುದು ಮಾತ್ರ ನಿಂತಿರಲಿಲ್ಲ. ಆಕೆ ಮಗನ ವಿದ್ಯಾಭ್ಯಾಸದ ನೆಪ ಮಾಡಿಕೊಂಡು ಗಂಡನ ಬಿಟ್ಟು ದುಬೈನಿಂದ ಉಡುಪಿಗೆ ಬಂದುಳಿದದ್ದೇ ಈ ತಲುಬು ತೀರಿಕೆಗಾಗಿ ಆಗಿತ್ತು. ಗಂಡನ ದುರ್ಗಾ ಇಂಟರ್‌ನ್ಯಾಷನಲ್ ಹೊಟೇಲಿನ ಕೊಠಡಿಯಲ್ಲಿ ತನಗಿಂತ ಚಿಕ್ಕ ಪ್ರಾಯದ ಹುಡುಗರ ಪಳಗಿಸಿ ದಿಂಡುರುಳು ಸೇವೆ ನಡೆಸುತ್ತಿದ್ದ ರಾಜೇಶ್ವರಿಗೆ ಉಡುಪಿಯ ಪ್ರತಿಷ್ಠಿತ ಖಾಕಿ, ಖಾವಿ, ಖಾದಿಗಳ ಅಂಗಸಂಗ ಸರಸವೂ ಇತ್ತು. ಆದರೆ ಅಂತಿಮವಾಗಿ ಒಂಚೂರು 'ಕಾಯಂ' ಆಗಿ ಗಂಟುಬಿದ್ದುಕೊಂಡಿದ್ದವನೆಂದರೆ ನಂದಳಿಕೆ ಚೋರ ಮಾಂತ್ರಿಕ ನಿರಂಜನ ಅಸ್ರಣ್ಣ ಯಾನೆ ನಿರಂಜನ ಭಟ್ಟ!!

ಈ ನಿರಂಜನನ ವಯಸ್ಸು ಬರೀ ಇಪ್ಪತ್ತಾರು. ನಾನಾ ನಮೂನೆಯ ದಂಧೆ ಮಾಡಿ ಬರತ್ತಾಗದೇ ಕೊನೆಗಾತ ಮಂಕುಬೂದಿ ಮಾಂತ್ರಿಕನಾಗಿದ್ದ. ರಾಜೇಶ್ವರಿಗೆ ಅಂಟಿದ ಅದ್ಯಾವುದೋ ರೋಗ ವಾಸಿ ಮಾಡುವ ನೆಪದಲ್ಲಿ ಆಕೆಯ ಪಲ್ಲಂಗವೇರಿ ಬಿಟ್ಟಿದ್ದ. ಮಗನ ವಯಸ್ಸಿನ ಈ ಪಾಪಿ ನಿರಂಜನನಲ್ಲಿ ಅದೇನು ಸುಖ ಈ ರಂಗೀಲಾ ರಾಜೇಶ್ವರಿಗೆ ಸಿಕ್ಕಿತೋ? ಆದರೆ ಬದುಕಂತೂ ಬರ್ಬಾದ್ ಮಾಡಿ ಕೊಂಡಳು. ಹೆಂಡತಿಗೆ ನಂದಳಿಕೆಯ ಮಂತ್ರವಾದಿ ಭಟ್ಟನ ಜತೆ ಮಿತಿ ಮೀರಿದ ದೈಹಿಕ ಸಂಬಂಧ ಏರ್ಪಟ್ಟಿರುವುದು ಪಕ್ಕಾ ಮಾಡಿಕೊಂಡಿದ್ದ ಭಾಸ್ಕರ ಶೆಟ್ಟಿ ಇಬ ಎಚ್ಚರಿಕೆ ಕೊಟ್ಟಿದ್ದ. ಮಗ ನವನೀತನಿಗೆ ಈ ಕ ಸಹವಾಸಕ್ಕೆ ಬಿದ್ದು ಹಾಳಾಗಬೇಡ ಎಂದು ಬು ಹೇಳಿದ್ದ.

ಆದರೆ ತಾಯಿ ರಾಜೇಶ್ವರಿ ಮಗನನ್ನು ಯಶಸ್ವಿ ದಾರಿ ತಪ್ಪಿಸಿದ್ದಳು. ಇನ್ನೂ ಇಪ್ಪತ್ತರ ಪ್ರಾಯದ ನ ಅಪ್ಪನ ಕೊಪ್ಪರಿಗೆಗಟ್ಟಲೆ ಕಾಸಿನ ಸೊಕ್ಕಿಂದ ಬಿದ್ದುಹೋಗಿದ್ದ. ದಿನಕ್ಕೊಂದರಂತೆ ಹುಡುಗಿ ಬೆನ್ನುಬಿದ್ದಿದ್ದ. ಇದಕ್ಕೆ ಸ್ವತಃ ಮಾತೃದೇವತೆಯೇ ಪ್ರೋ



ಮಟ್ಪಾಡು ರತ್ನಾಕರ್

ಪಾಪಿ ಭಟ್ಟನಿಗೆ ಬೇಕಾಗಿತ್ತು ಪಿಸ್ತೂಲು-ಕ್ಲೋರೋಫಾರ್ಮ್

ಹಣ ಹಾಗು ಹಾದರವೇ ಕೋಟಿ-ಕೋಟಿಗಳ ತ್ರಾಣಿಕ ಉದ್ಯಮಿ ಭಾಸ್ಕರ ಶೆಟ್ಟಿಯ ಕೊಲೆಗೆ ಕಾರಣ ಎಂಬುದನ್ನು ಪತ್ತೆ ಹಚ್ಚಿರುವ ಸಿಐಡಿ ಪೊಲೀಸರ ತನಿಖಾ ತಂಡ ಹಲವು ಸಾಕ್ಷ್ಯ-ಆಧಾರ ಕಲೆ ಹಾಕಿದೆ. ಇದರಲ್ಲಿ ಮಹತ್ವದ ಸಾಕ್ಷಿ ಎಂದರೆ ಸತೀಶ್ ಎಂಬ ನಂದಳಿಕೆ ಮೂಲದ ಮುಂಬೈನ ಹೊಟೇಲು ನೌಕರ. ಈತ ಕೊಲೆಗಡುಕ ಮಂತ್ರವಾದಿ ನಿರಂಜನ ಭಟ್ಟನ ಬಾಲ್ಯ ಸ್ನೇಹಿತ. ಸಿಐಡಿ ಅಧಿಕಾರಿಗಳು ನಿರಂಜನನ ಮೊಬೈಲ್ ಕಾಲ್ ವಿವರದ ಸಿಡಿಆರ್ ಪರಿಶೀಲಿಸಿದಾಗ ಈ ಸತೀಶನ ಹತ್ತಿರ ನಿರಂತರವಾಗಿ ಮಾತಾಡಿದ್ದು ಪತ್ತೆಯಾಗಿದೆ. ಭಾಸ್ಕರ್ ಶೆಟ್ಟಿ ಹತ್ಯೆಗೂ ಮೊದಲಿನ ಮೂರ್ನಾಲ್ಕು ದಿನ ಮತ್ತು ಕೊಲೆಯ ಬಳಿಕದ ಮೂರ್ನಾಲ್ಕು ದಿನ ಈತ ಸತತವಾಗಿ ಸತೀಶ್‌ಗೆ ಕಾಟ ಕೊಟ್ಟಿದ್ದಾನೆ.

ಭಾಸ್ಕರ ಶೆಟ್ಟಿ ತನ್ನೆಲ್ಲ ಆಸ್ತಿ ತಾಯಿ ಹೆಸರಿಗೆ ವೀಲು ಮಾಡುವ ಮೊದಲೇ ಆತನ ಮುಗಿಸಬೇಕಾದ ಒತ್ತಡ-ಅವಸರಕ್ಕೆ ರಾಜೇಶ್ವರಿ-ನವನೀತ ಮತ್ತು ನಿರಂಜನ ಭಟ್ಟ ಬಿದ್ದಿದ್ದರು. ಇಂಟರ್‌ನೆಟ್‌ನಲ್ಲಿ ಕೊಲೆಯ ದಾರಿಗಾಗಿ ತಡಕಾಡಿದ್ದಾರೆ. ಮೊದಲು ಗುಂಡಿಟ್ಟು ಭಾಸ್ಕರಶೆಟ್ಟಿಯನ್ನು ಕೊಲ್ಲುವ ಪ್ಲಾನ್ ಹಾಕಿದ್ದರು. ಅದಕ್ಕಾಗಿ ನಿರಂಜನ ಭಟ್ಟ ಮುಂಬೈನಲ್ಲಿದ್ದ ಗೆಳೆಯ ಸತೀಶ್‌ನ ನೆರವು ಪಡೆಯಲು ಹವಣಿಸಿದ್ದಾನೆ. ಸತೀಶ್‌ಗೆ ಪದೇಪದೇ ಫೋನಾಯಿಸಿ ತನಗೊಂದು ಪಿಸ್ತೂಲು ಖರೀದಿಸಿ ಕಳಿಸು ಎಂದು ದುಂಬಾಲು ಬಿದ್ದಿದ್ದಾನೆ. ಪಿಸ್ತೂಲು ಅಷ್ಟು ಸುಲಭವಾಗಿ ಸಿಗಲಾರದೆಂದು ಸತೀಶ್ ಹೇಳಿದ್ದಾನೆ. ಆಗಾತ ಪಿಸ್ತೂಲು ಇಲ್ಲದಿದ್ದರೆ ಬೇಡ.... ಕ್ಲೋರೋಫಾರ್ಮಾದರೂ ತೆಗೆದುಕೊಂಡು ಬಾ. ಪಿಸ್ತೂಲಿಗೆ ಎಷ್ಟು ದುಡ್ಡಾದರೂ ಕೊಡುತ್ತೇನೆಂದಿದ್ದ ಭಟ್ಟ ಕ್ಲೋರೋಫಾರ್ಮಿಗೂ ಹೇಳಿದಷ್ಟು ಕಾಸು ಕೊಡಲು ರೆಡಿಯಿದ್ದ.

ಗೆಳೆಯನ ದುರುದ್ದೇಶ ಅರಿಯದ ಸತೀಶ್ ಮುಂಬೈನಲ್ಲಿ ಹಲವು ಮೆಡಿಕಲ್ ಶಾಪ್‌ಗೆ ಎಡತಾಗಿ ಕ್ಲೋರೋಫಾರ್ಮ್ ಕೇಳಿದ್ದಾನೆ. ಅಂಗಡಿಕಾರರೆಲ್ಲಾ ಕ್ಲೋರೋಫಾ ಯಾವ ಉದ್ದೇಶಕ್ಕೆಂದು ಕೇಳಿದ್ದಾರೆ; ಹೆಸರು, ವಿಳಾಸ, ಮೊಬೈಲ್ ನ ಬರೆದುಕೊಡುವಂತೆ ಹೇಳಿದ್ದಾರೆ. ಗಾಬರಿ ಬಿದ್ದ ಸತೀಶ್ ಕ್ಲೋರೋಫಾರ್ಮ್ ಉಸಾಬ ಬೇಡವೆಂದು ಸುಮ್ಮನಾಗಿದ್ದಾನೆ. ನಿರಂಜನ ಭಟ್ಟನ ಫೋನ್ ಬರುತ್ತಲೇ ಇತ್ತು. ತಡೆಯಲಾಗದೆ ಸ್ವಿಚ್‌ಆಫ್ ಮಾಡಿ ಮೂರ್ನಾಲ್ಕು ದಿನ ಸತೀಶ್ ಕಳೆದಿದ್ದಾನೆ.

ಕ್ಲೋರೋಫಾರ್ಮ್ ಇಲ್ಲ, ಪಿಸ್ತೂಲು ಸಿಗಲಾರದೆಂದು ಪಕ್ಕಾ ಆದಾಗ ನಿ ಗೆಣೆಗಾರ್ತಿ ರಾಜೇಶ್ವರಿಗೆ ಪೆಪ್ಪರ್ ಸ್ಪ್ರೈ ಹಾಕಿ, ಕಬ್ಬಿಣದ ಸಲಾಖೆಯಿಂದ ಶೆಟ್ಟಿಯನ್ನು ಕೊಂದು ಹಾಕುವ ಪ್ಲಾನ್ ಹೇಳಿಒಪ್ಪಿಸಿದ್ದಾನೆ. ಹೆಣವನ್ನು ತನ್ನ ಹೋಮದ ಅಗ್ನಿಕುಂಡದಲ್ಲಿ ಹಾಕಿ ಬೂದಿ ಮಾಡೋಣ ಎಂದಿದ್ದಾನೆ. ತಲೆ ಒಡೆದು ಶೆಟ್ಟಿಯನ್ನು ಕೊಂದು ಹಾಕಿದ ನಂತರ ಮತ್ತೆ ಮುಂಬೈನಲ್ಲಿದ್ದ ಸ ಸತಾಯಿಸತೊಡಗಿದ್ದಾನೆ. "ನಾನು ಜಮೀನು ವ್ಯಾಜ್ಯದಲ್ಲಿ ಒಬ್ಬ ಉದ್ಯಮಿಯನ್ನು ಕ ಹಾಕಿ ಸಮಸ್ಯೆ ಸಿಲುಕಿದ್ದೇನೆ... ನೀನು ಮುಂಬೈನಲ್ಲಿ ಯಾವುದಾದರೂ ಸುಪಾರಿ ಕಿಲ್ಲರ್ ಹುಡುಕು... ಅವರು ಈ ಕೊಲೆ ತಾನೇ ಮಾಡಿದ್ದೆಂದು ಪೊಲೀಸರಿಗೆ ಶರ ಸಾಕು.... ಹೇಳಿದಷ್ಟು ಹಣ ಕೊಡುತ್ತೇನೆ..." ಎಂದು ವರಾತ ಹಚ್ಚಿದ್ದ. ಆದರೆ ಸತೀಶ್ ಸಿದ್ಧನಾಗಲಿಲ್ಲ; ಅದು ಅವನಿಂದ ಆಗುವ ಕೆಲಸವೂ ಆಗಿರಲಿಲ್ಲ.

ಈ ಸತೀಶನನ್ನು ಸಿಐಡಿ ಪೊಲೀಸರು ಉಡುಪಿಗೆ ತಂದು ವಿಚಾರಣೆ ನಡ ಇದೆಲ್ಲ ಕತೆ ಹೇಳಿದ್ದಾನೆ. ಕೋರ್ಟಿನಲ್ಲೂ ಇದ್ದದ್ದು ಇದ್ದಂತೆಯೇ ಹೇಳಿದ್ದಾನೆ. ಸಾಕ್ಷ್ಯ ಒಂದೇ ಸಾಕು, ಕೆವಲುಗಾರ್ತಿ ರಾಜೇಶ್ವರಿ, ಪಾತಕಿ ಭಟ್ಟ ಮತ್ತು ಘಟಿಂಗ ನವನೀತ ನೇಣು ಗಂಬವೇರಲಿಕ್ಕೆ! ಸಿಐಡಿಗೆ ಸತೀಶನೇ ಶಕ್ತಿಶಾಲಿ ಸಾಕ್ಷಿ!!

ಸಿಐಡಿ ಸಾಹಸ!

ಮಲ್ಟಿ ಮಿಲೇನಿಯರ್-ಎನ್‌ಆರ್‌ಐ ಉದ್ಯಮಿ ಭಾಸ್ಕರ್‌ಶೆಟ್ಟಿ ಹಠಾತ್ ಕಣ್ಮರೆಯಾದಾಗ ಉಡುಪಿ ಜಿಲ್ಲಾ ಪೊಲೀಸರು ಪ್ರಾಮಾಣಿಕ ತನಿಖೆ ಮಾಡಲಾಗದೆ ಎಡವಿದ್ದರು. ರಾಜೇಶ್ವರಿಯ ಹಣ-ಮೋಹದ ಬಲೆಯಲ್ಲಿ ಖಾಕಿಗಳು ಸಿಲುಕಿಬಿದ್ದಿದ್ದಾರೆಂದೇ ಜನ ಮಾತಾಡಿಕೊಂಡಿದ್ದರು. ಬಿಜೆಪಿ ಜಿಲ್ಲಾಧ್ಯಕ್ಷರೂ ಆಗಿರುವ ವಕೀಲರು ಮಟ್ಟಾರು ರತ್ನಾಕರ ಹೆಗ್ಡೆ ವಕೀಲರ ಸಂಘದ ನಿರ್ಧಾರವನ್ನೂ ಮೀರಿ ಪಾಪಿ ರಾಜೇಶ್ವರಿ ಗ್ಯಾಂಗಿಗೆ ಸಹಾಯ ಮಾಡುತ್ತಿದ್ದಾರೆಂಬ ಮಾತುಗಳೂ ಕೇಳಿಬಂದಿತ್ತು. ಯಾವಾಗ ಭಾಸ್ಕರ ಶೆಟ್ಟಿಯ ವೃದ್ಧ ತಾಯಿ ಜಿಲ್ಲಾ ಉಸ್ತುವಾರಿ ಮಂತ್ರಿ ಪ್ರಮೋದ್ ಮಧ್ವರಾಜ್‌ಗೆ ಗೋಳು ಹೇಳಿಕೊಂಡರೋ ಆಗ ಪ್ರಮೋದ್ ಸಿಐಡಿ ತನಿಖೆಗೆ ಪ್ರಯತ್ನ ನಡೆಸಿದರು. ತನಿಖೆ ಕೈಗೆತ್ತಿಕೊಂಡ ಸಿಐಡಿ ಅಧಿಕಾರಿಗಳು ದಿಕ್ಕು ತಪ್ಪಲಿಲ್ಲ ಎಂಬುದೇ ಸಮಾಧಾನ ಕರಾವಳಿಗಳಿಗೆ!



ಈ ಕೇಸು ಕೈಗೆತ್ತಿಕೊಂಡಾಗ ಸಿಐಡಿಗೆ ದೊಡ್ಡ ಸವಾಲುಗಳು ಎದುರಾಗಿದ್ದವು. ಭಾಸ್ಕರ ಶೆಟ್ಟಿ ಜೀವಂತ ಇದ್ದಾರಾ? ಸತ್ತಿದ್ದಾರಾ? ಕೊಲೆಯಾದರಾ? ಕಣ್ಮರೆಯಷ್ಟೇನಾ? ಎಂಬುದೇ ಅಸಲೀ ಪ್ರಶ್ನೆಯಾಗಿತ್ತು. ಇಡೀ ಕರಾವಳಿ ಇದೊಂದು ಹೆಂಡತಿ-ಮಗ-ಹೆಂಡತಿಯ ಗೆಣೆಗಾರ ಸೇರಿ ಮಾಡಿದ ಕೊಲೆಯೆಂದೇ ನಿರ್ಧಾರಕ್ಕೆ ಬಂದಿತ್ತು. ಆದರೆ ಮಣಿಪಾಲದ ಸಿಪಿಐ ಗಿರೀಶ್ ಎಡವಟ್ಟು ಆಟ ಆರಂಭಿಸಿದ್ದ. ಆದರೆ ಸಿಐಡಿ ಭಾಸ್ಕರ ಶೆಟ್ಟಿಯದು ಕೊಲೆ ಎಂದೇ ತೀರ್ಮಾನಿಸಿ ಹೆಂಡತಿ-ಮಗ-ಪ್ರೇಮಿ ಸುತ್ತ ತನಿಖೆ ಕೇಂದ್ರೀಕರಿಸಿತ್ತು. ಭಾಸ್ಕರ ಶೆಟ್ಟಿಯ ದೇಹ ಹುಡುಕಲು ಸಿಐಡಿ ತಿಪ್ಪಲಾಗ ಹಾಕಬೇಕಾಗಿಬಂತು. ಹೋಮ ಕುಂಡದಲ್ಲಿ ಭಾಸ್ಕರ ಶೆಟ್ಟಿಯ ಶವ ಹಾಕಿ ಸುಟ್ಟಿರುವುದಾಗಿ ಆರೋಪಿಗಳು ಹೇಳುತ್ತಿದ್ದರೂ ಎಲುಬು-ಬೂದಿ-ಮತ್ತಿತರ ಸಾಂದರ್ಭಿಕ ಸಾಕ್ಷ್ಯ ಸಂಗ್ರಹಿಸಲಾಗಲಿಲ್ಲ. ಮುಂಗಾರು ಹಂಗಾಮಾದ್ದರಿಂದ ನಂದಳಿಕೆಯ ನದಿಯಲ್ಲಿ ಮುಳುಗುಗಾರರ ಇಳಿಸಿ ಎಲುಬು ತರಲು ಹರಸಾಹಸ ಮಾಡಬೇಕಾಯ್ತು. ಅಂತೂ ಹೊಳೆಯಲ್ಲಿ ಗೋಣಿ ಚೀಲದಲ್ಲಿದ್ದ ಎಲುಬುಗಳು ಸಿಕ್ಕಿದವು; ಶೆಟ್ಟಿಯ ತಲೆ ಒಡೆದ ಕಬ್ಬಿಣದ ರಾಡೂ ಸಿಕ್ಕಿದೆ!!

ಆರೋಪಿಗಳು ಹೆಣ ವಿಲೇವಾರಿಗೆ ತರತರದ ಯೋಜನೆ-ಯೋಚನೆ ಹಾಕಿದ್ದರು. ಇಂಟರ್‌ನೆಟ್‌ನಲ್ಲೂ ಹತ್ತಾರು ಸಲ ಸರ್ಚ್ ಮಾಡಿದ್ದರು. ಕೊನೆಗೆ ಸುಟ್ಟು ಹಾಕುವ ಪ್ಲಾನ್ ಮಾಡಿದ್ದರು. ದೇಹವನ್ನು ಸುಟ್ಟು ಮೂಳೆ ನೀರಿಗೆಸೆದರೆ ಮೂರ್‍ನಾಲ್ಕು ದಿನದಲ್ಲೇ ಜೀವಕಣ ಹಾಳಾಗುತ್ತದೆ. ಆಗ ಮೂಳೆಯ ಡಿಎನ್‌ಎ ಪತ್ತೆಯೂ ಸಾಧ್ಯವಾಗುವುದಿಲ್ಲವೆಂಬುದು ವಿಧಿವಿಜ್ಞಾನ ತಜ್ಞರ ಅಭಿಮತ. ಆದರೆ ಭಾಸ್ಕರ ಶೆಟ್ಟಿಯದೆಂದು ಭಾವಿಸಲಾದ ಮೂಳೆಗಳು ಆತನ ಸಾವಿನ ಹದಿಮೂರು ದಿನಗಳ ನಂತರ ಹೊಳೆಯಿಂದ ತೆಗೆಯಲಾಗಿತ್ತು. ಎರಡು ವಾರಗಳ ಕಾಲ ನೀರಲ್ಲಿದ್ದರೂ ಭಾಸ್ಕರ ಶೆಟ್ಟಿಯ ಮೂಳೆಯ ಜೀವಕಣಗಳು ನಾಶವಾಗಿರಲಿಲ್ಲ. ಇದೇ ಡಿಎನ್‌ಎ ಪರೀಕ್ಷೆಯ ಭಾಸ್ಕರ ಶೆಟ್ಟಿಯನ್ನು ಕೊಂದು-ಸುಟ್ಟು ಹಾಕಲಾಗಿದೆ ಎಂಬುದನ್ನು ದೃಢಪಡಿಸಿದೆ!

ನಿರಂಜನ ಭಟ್ಟ ಹಲವು ಗೋಣಿಚೀಲಗಳಲ್ಲಿ ಮೂಳೆ-ಬೂದಿ-ಇಟ್ಟಿಗೆ ಕಲ್ಲು ತುಂಬಿ ನೀರಿಗೆ ಎಸೆದಿದ್ದು ಇದರಲ್ಲಿ ಒಂದು ಚೀಲದಲ್ಲಿ ಮೂಳೆಗಳು ಇಟ್ಟಿಗೆ, ಇನ್ನಿತರ ವಸ್ತುಗಳ ಜತೆಯಲ್ಲಿತ್ತು. ಹಾಗಾಗಿ ಆ ಚೀಲದಲ್ಲಿನ ಮೂಳೆಗಳಿಗೆ ಜೀವಕಣ ನಾಶವಾಗುವಷ್ಟು ನೀರಿನ ಸಂಪರ್ಕ ಸಿಕ್ಕಿರಲಿಲ್ಲ. ಹಾಗಾಗಿ ಆ ಒಂದು ಚೀಲದ ಮೂಳೆಗಳ ಜೀವಕಣ ನಾಶವಾಗದೇ ಇದು ಭಾಸ್ಕರಶೆಟ್ಟಿಯದೇ ಮೂಳೆ ಎಂಬುದನ್ನು ಡಿಎನ್‌ಎ ಪರೀಕ್ಷೆಯಲ್ಲಿ ಪಕ್ಕಾ ಆಗಿದೆ. ಸದ್ಯಕ್ಕೆ ಸಿಕ್ಕಿರುವ ಸಾಕ್ಷ್ಯಗಳೆಲ್ಲವೂ ಭಾಸ್ಕರಶೆಟ್ಟಿ ಹತ್ಯೆ ಮಾಡಿ ಸುಟ್ಟು ಹಾಕಿರುವುದನ್ನು ದೃಢ ಪಡಿಸುವಂತಿವೆ. ಇದು ಜೈಲಿನ ಹೊರಗಿರುವ ರಾಜೇಶ್ವರಿಯ ಮಿತ್ರಮಂಡಳಿಯನ್ನು ಕಂಗಾಲಾಗಿಸಿಬಿಟ್ಟಿದೆ! ರಾಜೇಶ್ವರಿಯ ಸಖ್ಯದ ಕಾವಿ-ಖಾಕಿಗಳಿಗೆ ನಿದ್ದೆಯೇ ಬೀಳುತ್ತಿಲ್ಲ!!

...ನು. ತನ್ನ ತೆವಲಿಗೆ ಮಗ ಅಡ್ಡಿ ಬರಬಾರದೆಂಬ ... ಒಂದಾದರೆ, ಅಪ್ಪನ ಹಣಿಯಲು ಮಗನೇ ...ಂಬ ನಂಬಿಕೆ ಆಕೆಯದಾಗಿತ್ತು. ಅಪ್ಪನಿಗೆ ಸ್ವಜಾತಿ ಹೆಂಗಸೊಬ್ಬಳ ಜತೆ, ವಾಚ್‌ಮನ್ ಒಬ್ಬನ ...ಂದಿಗೆ ಮತ್ತು ಮುಸ್ಲಿಮ್ ಹೆಂಗಸಿನ ಸಂಗದ ...ದೆ ಎಂದು ನಂಬಿಸಿದ್ದಳು. ಹೀಗಾಗಿ ನವನೀತ ...ಲೆ ದ್ವೇಷ ಬೆಳೆಸಿಕೊಂಡಿದ್ದ. ಅಮ್ಮನ ಹಾದರಕ್ಕೆ ಮಾಡಿಕೊಟ್ಟಿದ್ದ ತಾನೂ ತುಡುಗು ಮೇಯುತ್ತಿದ್ದ. ...ಜನ ಭಟ್ಟನ ಸಹವಾಸ ಬಿಡಲಾಗದಿದ್ದರೆ ...ಕ್ಕೆ ಸಿದ್ಧಳಾಗುವಂತೆ ಭಾಸ್ಕರ ಶೆಟ್ಟಿ ಹೆಂಡತಿಗೆ ...ಗೇ ಹೇಳಿದ್ದ. ಆಗ ಕೆರಳಿದ ಮಗ ನವನೀತ ದೈಹಿಕವಾಗಿ ಥಳಿಸಿದ್ದ. ಮಂತ್ರವಾದಿ ನಿರಂಜನ ...ಜೇಶ್ವರಿಯೂ ಭಾಸ್ಕರ ಶೆಟ್ಟಿಗೆ ದೈಹಿಕ ಹಿಂಸೆ ... ಇದೊಂದು ದೊಡ್ಡ ರಂಪವಾಗಿ ಉಡುಪಿ ...ಕಟ್ಟೆಗೂ ಪ್ರಕರಣ ಹೋಗಿತ್ತು. ಕ್ರುದ್ಧನಾಗಿದ್ದ ...ಶೆಟ್ಟಿಯ ಚಹರೆ ಕಂಡು ನವನೀತ, ನಿರಂಜನ ...ಜೇಶ್ವರಿ ಈತ ತಮ್ಮ ಕೈಗೆ ಚಿಪ್ಪು ಕೊಡುವುದು ...ದೆನಿಸಿತ್ತು. ಆಸ್ತಿ ಕೈತಪ್ಪಿ ಹೋಗುವ ಆತಂಕದಿಂದ ...ಶೆಟ್ಟಿಯ ಹತ್ಯೆಗೆ ಸಂಚು ರೂಪಿಸತೊಡಗಿದರು.

...ರ ಜುಲೈನಲ್ಲಿ ಭಾಸ್ಕರ ಶೆಟ್ಟಿ ಊರಿಗೆ (ಉಡುಪಿಗೆ) ಹೆಂಡತಿ-ಮಗನಿಗೊಂದು ಪಾಠ ಕಲಿಸಲೆಂದಾಗಿತ್ತು. ಹತ್ಯೆಯಾದ ದಿನ (27.7.2016) ಆತನ ಆಸ್ತಿ ... ತಾಯಿ ಗುಲಾಬಿ ಹೆಸರಿಗೆ ವೀಲು ನಾಮೆ ... ಮುಹೂರ್ತ ನಿಗದಿಯಾಗಿತ್ತು. ಅಂದೇ ಆತನ ...ಯಲು ಇತ್ತ ರಾಜೇಶ್ವರಿ, ನಿರಂಜನ, ನವನೀತ ...ಹಾಕುತ್ತಿದ್ದರು. ಇಂದ್ರಾಳಿಯ ಮನೆ ಈಶ್ವರಿ ...ಲ್ಲಿ ಉಡುಪಿ ಸಿಟಿ ಆಸ್ಪತ್ರೆ ಹತ್ತಿರ ಕುಳಿತು ...ಾಸ್ಕರ ಶೆಟ್ಟಿಯ ಜೀವ ತೆಗೆದು ಹೆಣದ ವಿಲೇವಾರಿ ...ಕೆಂಬ ಚರ್ಚೆ ನಡೆಸಿದ್ದರು. ಕೊನೆಗವರು ಒಂದು ...ಕ್ಕೆ ಬಂದಿದ್ದು ಕೃಷ್ಣ ಮಠದ ರಾಜಾಂಗಣದ ... ಪ್ರದೇಶದಲ್ಲಿ! ಅರ್ಥಾತ್ ಕೃಷ್ಣ ಸನ್ನಿಧಿಯಲ್ಲಿ ... ಕರಾಮತ್ತು ಮಾಡಲಾಗಿತ್ತು!!

ಮೂರು ಕೋಟಿ ಮಜಾ

...85 ರಲ್ಲಿ ಸೌದಿ ಆರೇಬಿಯಾಕ್ಕೆ ಹೋಗಿದ್ದ ಭಾಸ್ಕರ ...ಷ್ಟಪಟ್ಟು ದುಡಿದು ಗಲ್ಫ್‌ನಲ್ಲಿ ಆರು ಸೂಪರ್ ...ರ್ ಉದ್ಯಮ ಕಟ್ಟಿಕೊಂಡಿದ್ದ. ವರ್ಷಕ್ಕೆ ಎರಡ್ಮೂರು ...ಷ್ಟೇ ಊರಿಗೆ ಬರುತ್ತಿದ್ದ. ತಿಂಗಳು-ತಿಂಗಳು ಲಕ್ಷ ...ಲೆಕ್ಕದಲ್ಲಿ ಹಣ ಹೆಂಡತಿಯ ಹೆಸರಿಗೆ ಕಳಿಸುತ್ತಿದ್ದ ...ಲ್ಲಿಯ ವ್ಯವಹಾರವೆಲ್ಲ ಹೆಂಡತಿಗೆ ವಹಿಸಿದ್ದ. ...ದ ದಂಡಿಯಾಗಿ ಹಣ ಹರಿದು ಬರುವ ಹೊತ್ತಿಗೆ ನವನೀತನಿಗೂ ಮೀಸೆ ಮೂಡತೊಡಗಿತ್ತು. ...ಮಿ-ವೈಭೋಗದ ಜೀವನ ನಡೆಸುತ್ತಿದ್ದರೂ ತಾಯಿ-...ಗೆ ತೃಪ್ತಿ ಎಂಬುದೇ ಇರಲಿಲ್ಲ. ಸಾಮಾಜಿಕ ...ತಿ-ಶಿಷ್ಟಾಚಾರ-ಶೀಲದ ಪರಿವೆಯೇ ಇಲ್ಲದೆ ದಾರಿ ...ೇಗಿದ್ದರು.

...ಡದಿ-ಮಗನ ನಡತೆ ಕೆಟ್ಟಿರುವುದು ಭಾಸ್ಕರ ಶೆಟ್ಟಿಗೆ ...ಂದಾಗಿ ಗೊತ್ತಾಗಹತ್ತಿತ್ತು. ತಾನು ದುಬೈನಿಂದ ...ದ್ದ ಹಣ ಉದ್ಯಮದಲ್ಲಿ ತೊಡಗದೆ ಹೆಂಡತಿ-...ಮೋಜು-ಮಸ್ತಿಗೆ ವ್ಯಯವಾಗುತ್ತಿರುವ ಅನುಮಾನ ... ಬಂದಿತ್ತು. ಈಚಿಗೆ ಆತ ತನ್ನ ಉಡುಪಿಯ ... ಇಂಟರ್‌ನ್ಯಾಷನಲ್ ಎಂಬ ಸ್ಟಾರ್ ಹೊಟೇಲ್ ...ಣಕ್ಕೆಂದು ಮೂರು ಕೋಟಿ ಕಳಿಸಿದ್ದ. ಆದರದು ...ುವಾಗಿತ್ತು. 6.5.2016ರಂದು ಉಡುಪಿಗೆ ಬಂದಿದ್ದ ...ಶೆಟ್ಟಿ ವ್ಯವಹಾರ-ಬ್ಯಾಂಕ್ ಖಾತೆಯತ್ತ ವಿಚಾರಣಾ ...ಹರಿಸಿದ್ದಾನೆ. ಆಗಾತನಿಗೆ ಬರೋಬ್ಬರಿ ಮೂರು ...ಹೆಂಡತಿ-ಮಗ-ಮಂತ್ರವಾದಿ ಚಿಂದಿ ಉಡಾಯಿಸಿ ...ಖಾತ್ರಿಯಾಗಿ ಹೋಗಿದೆ! ಹೆಂಡತಿಯನ್ನು ಭಾಸ್ಕರ್ ...ಾಟೆಗೆ ತೆಗೆದುಕೊಂಡಿದ್ದಾನೆ. ಆಕೆಯ ಅಶ್ಲೀಲ-... ನಡವಳಿಕೆ, ಮಂತ್ರವಾದಿ ಭಟ್ಟನ ಜತೆಗಿನ ಅಸಹ್ಯ ...ಗಳ ಬಗ್ಗೆ ದೊಡ್ಡ ರಂಪವೇ ಆಗಿಹೋಗಿದೆ. ...ಂತಿಮವಾಗಿ ಭಾಸ್ಕರಶೆಟ್ಟಿಯ ಹತ್ಯೆಗೆ ಹೇತುವಾಗಿದೆ ...ದು ಸಿಐಡಿ ತನಿಖೆಯಲ್ಲಿ ದೃಢಪಟ್ಟಿದೆ!!

ರಾಜೇಶ್ವರಿಯ ರಂಗೀಲಾ ಫೋಟೋ ಶಾಪ್

...ಬೈನಿಂದ ಹೊಟೇಲ್ ಉದ್ಯಮಕ್ಕೆ ವ್ಯಯಿಸುವಂತೆ ಭಾಸ್ಕರಶೆಟ್ಟಿ ಕಳಿಸಿದ್ದ ಮೂರು ಕೋಟಿ ಮೂರು ... ಸೋರಿಹೋಗಿತ್ತು! ಒಂದು ಕೋಟಿ ಮಗ ...ಸ ಕೈಗಿತ್ತಿದ್ದ ರಾಜೇಶ್ವರಿ ಮತ್ತೊಂದಿಷ್ಟನ್ನು 'ಸಂಗಾತಿ' ... ಭಟ್ಟನಿಗೆ ಕೊಟ್ಟಿದ್ದಳು. ಬದ್ಮಾಶ್ ಭಟ್ಟನಿಗೆ ...ಬ್ಬರಿ ಹದಿನೇಳು ಲಕ್ಷದ ಒಂದು ಫ್ಲಾಟ್ ...ಯಲ್ಲಿ ಕೊಡಿಸಿದ್ದ ರಾಜೇಶ್ವರಿ ಅಷ್ಟೇ ದುಡ್ಡಿನ ... ಕಾರು ಕೂಡ ಕೊಡಿಸಿದ್ದಳು. ನವನೀತ ತನ್ನ ... ಬಂದ ಹಣದಲ್ಲಿ ಹೈಟೆಕ್ ಜಿಮ್ ತೆರೆದು ... ಈ ಜಿಮ್ 'ಲೋಕಾರ್ಪಣೆ'ಗೆ ಮಂತ್ರವಾದಿ ...ೇ ಯಜಮಾನಿಕೆ ಆಗಿತ್ತು! ಒಂದು ಪಾಲು ತನ್ನ ...ಚೆಗೆ ಬಳಸಿಕೊಂಡಿದ್ದಳು ರಾಜೇಶ್ವರಿ; ನಿರಂಜನ ಭಟ್ಟನ ಬ್ಯಾಂಕ್ ಖಾತೆಗೂ ಹಣ ಹಾಕಿ ಆತ ಸಂಪ್ರೀತಗೊಳಿಸಿಟ್ಟುಕೊಂಡಿದ್ದಳು.

ತಾನು ಕಳಿಸಿದ್ದ ಮೂರು ಕೋಟಿಯ ಲೆಕ್ಕಾಚಾರ ಕೇಳಿದ್ದಾನೆ ಭಾಸ್ಕರ್ ಶೆಟ್ಟಿ. ಒಂದೊಂದಾಗಿ ಖರ್ಚಿನ ವಿಚಾರಣೆ ಮಾಡಿದ್ದಾನೆ. ಆಗ ತಮ್ಮ ಬಂಡವಾಳ ಬೀದಿಗೆ ಬೀಳುತ್ತದೆಂದು ಹೌಹಾರಿದ್ದಾರೆ ತಾಯಿ-ಮಗ. ಆಗ ಭಾಸ್ಕರ ಶೆಟ್ಟಿ ಮತ್ತು ರಾಜೇಶ್ವರಿ-ನವನೀತನ ನಡುವೆ ಘನಘೋರ ಸಂಘರ್ಷವೇ ನಡೆದು ಹೋಗಿದೆ. ಈ ಗಲಾಟೆ-ಜಗಳದಲ್ಲಿ ಭಾಸ್ಕರ ಶೆಟ್ಟಿ ಹೆಂಡತಿಯ ಮೊಬೈಲ್ ಸೆಟ್ ಕಸಿದುಕೊಂಡಿದ್ದಾನೆ. ಅದರಲ್ಲಿದ್ದ ದಾಖಲೆಗಳನ್ನೆಲ್ಲ ತಡಕಾಡಿದ್ದಾನೆ. ಮಂತ್ರವಾದಿ ಮಳ್ಳ ಭಟ್ಟನ ಜತೆಗೆ ಮಡದಿಗಿದ್ದ ಕೊಳಕು ಗೆಳೆತನ-ದೈಹಿಕ ನಂಟಿನ ಅಂಟೆಲ್ಲ ಆತನಿಗೆ ಕಾಣಿಸಿದೆ. ಆತ ಕುದ್ದು ಹೋಗಿದ್ದಾನೆ.

ಗ್ಯಾಲರಿಯಲ್ಲಿದ್ದ ಫೋಟೋಗಳು ಆಕೆಯ ಹಸಿ-ಬಿಸಿ ಕಾಮಕಾಂಡವನ್ನೇ ಭಾಸ್ಕರ ಶೆಟ್ಟಿಗೆ ನಿಸ್ಸಂಶಯವಾಗಿ ವಿವರಿಸಿದ್ದವು. ರಾಜೇಶ್ವರಿಯ ಅನೈತಿಕ ವ್ಯವಹಾರ ಕಣ್ಣಿಗೆ ಕಟ್ಟುವಂತೆ ಆ ಫೋಟೋಗಳು ಸಾಕ್ಷ್ಯ ನುಡಿದಿವೆ. ರಾಜೇಶ್ವರಿ ತನಗಿಂತ ಕಿರಿಯನಾದ-ಮಗನಂಥ ವಯಸ್ಸಿನ ಹುಡುಗ ನಿರಂಜನ ಭಟ್ಟನ ಜತೆ ಪಲ್ಲಂಗದಲ್ಲಿ ಅಶ್ಲೀಲವಾಗಿ ಬಿದ್ದುಕೊಂಡಿದ್ದು ನೋಡಿ ಭಾಸ್ಕರ ಶೆಟ್ಟಿಗೆ ಏನು ಮಾಡಬೇಕೆಂದೇ ತಿಳಿಯದೇ ಒದ್ದಾಡಿದ್ದಾನೆ. ಇಷ್ಟಕ್ಕೆ ರಾಜೇಶ್ವರಿಯ ಕಾಮೋನ್ಮಾದ ಮುಗಿದಿಲ್ಲ; ಆಕೆ ವಾಟ್ಸ್‌ಅಪ್‌ನಿಂದ ತನ್ನದೇ ವಿವಿಧ ಭಂಗಿಯ ನಗ್ನಚಿತ್ರಗಳನ್ನು ನಿರಂಜನನಿಗೆ ರವಾನಿಸಿದ್ದಳು.

ತಾಯಿ ಹೆಸರಿಗೆ ವೀಲುನಾಮೆ!

ಭಾಸ್ಕರಶೆಟ್ಟಿ ಮಡದಿಯ ವಿಕೃತಿಗಳನ್ನೆಲ್ಲ ಕಣ್ಣಾರೆ ಕಂಡು ದಿಗ್ಭ್ರಾಂತನಾಗಿ ಕುಳಿತಿದ್ದರೆ, ರಾಜೇಶ್ವರಿ ಪತಿಗೆ ತನ್ನೆಲ್ಲ ಕಾಮಕಾಂಡ ಗೊತ್ತಾಗಿಹೋದ ಆಕ್ರೋಶದಲ್ಲಿ ಬುಸುಗುಡ ತೊಡಗಿದ್ದಳು. ಅಪಮಾನದಿಂದ ಕೆರಳಿದ್ದ ಆಕೆ ಮಗನನ್ನು ಪುಸಲಾಯಿಸಿ ಭಾಸ್ಕರ ಶೆಟ್ಟಿ ಮೇಲೆ ದಾಳಿ ಮಾಡಿದ್ದಾಳೆ. 'ಈ ಸಂಗತಿ' ಯಾರಿಗೂ ತಿಳಿಸದಂತೆ ತಾಕೀತುಮಾಡಿ ತಾಯಿ-ಮಗ ಇಬ್ಬರೂ ಸೇರಿ ಭಾಸ್ಕರ್ ಶೆಟ್ಟಿ ಮೇಲೆ ಹಲ್ಲೆ ಮಾಡಿದ್ದಾರೆ. ಆಗಲೇ ಭಾಸ್ಕರ ಶೆಟ್ಟಿ ತನಗೆ ಮೋಸ-ವಂಚನೆ ಮಾಡಿದ, ಸತಿ ಧರ್ಮಕ್ಕೆ ಚ್ಯುತಿ ತಂದು ಅಕ್ರಮ ಕೂಡಿಕೆ ನಡೆಸುತ್ತಿದ್ದ ಹೆಂಡತಿ ಹಾಗು ತಾಯಿ ತೆವಲಿಗೆ ಬೆಂಬಲ-ಬೆಂಗಾವಲಾಗಿ ನಿಂತು ತನಗೆ ದೈಹಿಕ ಹಿಂಸೆ ಕೊಡುವ ಮಗನಿಗೆ ತನ್ನ ಸಂಪತ್ತಿನಲ್ಲಿ ಒಂದು ಬಿಲ್ಲೆಯೂ ಸಿಗದಂತೆ ಮಾಡುವ ಹಠಕ್ಕೆ ಬಿದ್ದುಬಿಟ್ಟಿದ್ದ!



ತನ್ನ ಸಕಲೆಂಟು ಆಸ್ತಿಯನ್ನು ತಾಯಿ ಗುಲಾಬಿ ಶೆಟ್ಟಿಯ ಹೆಸರಿಗೆ ವೀಲುನಾಮೆ ಮಾಡುವ ದೃಢ ನಿರ್ಧಾರಕ್ಕೆ ಭಾಸ್ಕರ ಶೆಟ್ಟಿ ಬಂದುಬಿಟ್ಟಿದ್ದ. ಈ ಬಗ್ಗೆ ಚರ್ಚಿಸಲೆಂದು ಆತ ತನ್ನ ಆಡಿಟರ್ ಸುರೇಂದ್ರರನ್ನು ಸಂಧಿಸಿ-ಸಂಪರ್ಕಿಸಿ ವೀಲುನಾಮೆ ವಿವರ ಒದಗಿಸಿದ್ದ. 28.7.16ರಂದು ಈ ವೀಲ್‌ನ ಕಾನೂನಾತ್ಮಕ ಕಾರ್ಯ ನೆರವೇರಿಸಲು ಆಡಿಟರ್ ಮತ್ತು ಭಾಸ್ಕರ್‌ಶೆಟ್ಟಿ ನಿರ್ಧರಿಸಿದ್ದರು. ಅಂದವರು ಸಬ್‌ರಿಜಿಸ್ಟರ್ ಬಳಿಗೆ ಹೋಗಲು ಸಮಯ ನಿಗದಿಸಿಯೂಕೊಂಡಿದ್ದರು.

ಕೊಲೆಗೆ ಸ್ಕೆಚ್

ಭಾಸ್ಕರ್ ಶೆಟ್ಟಿಯ ಯೋಜನೆ-ಯೋಚನೆಗಳೆಲ್ಲವೂ ರಾಜೇಶ್ವರಿ-ನವನೀತ-ನಿರಂಜನರಿಗೆ ಕರಾರುವಾಕ್ಕಾಗಿ ಗೊತ್ತಾಗಿತ್ತು. ರಾಜೇಶ್ವರಿಯ ಹೊಲಸು ಚಿತ್ರಗಳು ಭಾಸ್ಕರ್ ಶೆಟ್ಟಿ ಕಣ್ಣಿಗೆ ಬಿದ್ದನಂತರ ಗಲಾಟೆಯಾಗಿತ್ತಲ್ಲ, ಆಗಲೇ ರಾಜೇಶ್ವರಿ-ನವನೀತ ಬೇಹುಗಾರಿಕೆ ಆರಂಭಿಸಿದ್ದರು. ಭಾಸ್ಕರ್ ಶೆಟ್ಟಿ ತಮ್ಮ ಮೇಲೆ ಕಾನೂನಾತ್ಮಕವಾಗಿ-ನೈತಿಕ-ಸಾಮಾಜಿಕವಾಗಿ ತಿರುಗಿ ಬೀಳಬಹುದೆಂಬ ಭಯ ಅವರದಾಗಿತ್ತು. ಹೀಗಾಗಿ ಖತರ್‌ನಾಕ್ ನವನೀತ ದುರ್ಗಾ ಇಂಟರ್‌ನ್ಯಾಷನಲ್ ಹೊಟೇಲಿನಲ್ಲಿದ್ದ ಭಾಸ್ಕರಶೆಟ್ಟಿಯ ಖಾಸಗಿ ಕೋಣೆಯ ದೇವರ ಫೋಟೋದ ಹಿಂದೆ ಮೊಬೈಲ್‌ನ ವಾಯಿಸ್ ರೆಕಾರ್ಡರ್ ಆನ್ ಮಾಡಿ ಇಡತೊಡಗಿದ್ದ. ಅಪ್ಪ ಏನೇನು ಯಾರ್‍ಯಾರ ಬಳಿ ಮಾತಾಡುತ್ತಾನೆ? ತಮಗೇನಾದರೂ ಮದ್ದು ಅರೆಯುತ್ತಿದ್ದಾನಾ? ಆತನ ಮುಂದಿನ ಯೋಚನೆ ಏನೆಂಬುದನ್ನು ಅರಿಯುವ ಉದ್ದೇಶ ನವನೀತನದಾಗಿತ್ತು.


ಆತ ಆಡಿಟರ್ ಸುರೇಂದ್ರರ ಜತೆ ಮಾತಾಡುವಾಗ "ನನಗೆ ಅನ್ಯಾಯ ಮಾಡಿದ ಹೆಂಡತಿ-ಮಗನಿಗೆ ನನ್ನ ಒಂಚೂರು ಆಸ್ತಿಯೂ ಸಿಗಬಾರದು... ಅವರು ಭಿಕ್ಷೆ ಬೇಡಿ ತಿನ್ನುವಂತಾಗಬೇಕು.... ನನ್ನೆಲ್ಲ ಆಸ್ತಿ ತಾಯಿ ಗುಲಾಬಿ ಹೆಸರಿಗೆ ವೀಲ್ ಮಾಡೋಣ...." ಎಂದಾತ ಹೇಳಿದ್ದ. ಇದು ರಿಕಾರ್ಡ್ ಆಗಿತ್ತು. ಇದನ್ನು ಕೇಳಿದ್ದೇ ತಡ, ತಾಯಿ-ಮಗ-ಮಂತ್ರವಾದಿ ಭಟ್ಟ ಮೂವರೂ ಸೇರಿ ಭಾಸ್ಕರ ಶೆಟ್ಟಿಗೆ 'ಮೋಕ್ಷ' ಕಾಣಿಸುವ ಕ್ರೂರ ನಿರ್ಧಾರಕ್ಕೆ ಬಂದೇಬಿಟ್ಟರು!!

ಭಾಸ್ಕರ ಶೆಟ್ಟಿ ಮಡದಿ-ಮಗನೊಂದಿಗಿನ ಸಂಬಂಧ ಹಾಳಾದ ಬಳಿಕ ಹೆಚ್ಚಾಗಿ ಇಂದ್ರಾಳಿಯ ಮನೆಗೆ ಬರುವುದು ಕಡಿಮೆ ಮಾಡಿದ್ದ. ತನ್ನ ದುರ್ಗಾ ಹೊಟೇಲಿನಲ್ಲೇ ಆತ ಇರುತ್ತಿದ್ದ. ಆದರೆ ಪ್ರತಿ ದಿನವೂ ಸ್ನಾನಕ್ಕೆಂದು ಮನೆಗೆ ಬರುತ್ತಿದ್ದ. ಭಾಸ್ಕರ ಶೆಟ್ಟಿ ಸ್ನಾನಕ್ಕೆಂದು ಮನೆಗೆ ಬಂದಾಗಲೇ ಕೊಂದು ಹಾಕೋದು ಸುಲಭವೆಂಬ ತೀರ್ಮಾನಕ್ಕೆ ರಾಜೇಶ್ವರಿ ಬಂದಿದ್ದಳು. ಇದಕ್ಕೆ ಪ್ರಿಯಕರ ಭಟ್ಟ ಮತ್ತು ಮಗರಾಯ ರೆಡಿಯಾಗಿ ನಿಂತಿದ್ದರು. ಎಂದಿನಂತೆ ಅಂದು 28.7.2016ರಂದು ಭಾಸ್ಕರ ಶೆಟ್ಟಿ ಸ್ನಾನಕ್ಕೆಂದು ಮನೆಗೆ ಬಂದಿದ್ದಾನೆ. ಅದು ಮಧ್ಯಾಹ್ನ ಮೂರು ಗಂಟೆಯ ಸಮಯ. ಬಂದವನೇ ಸೀದ ಬಚ್ಚಲು ಕೋಣೆಗೆ ಹೋಗಿದ್ದಾನೆ. ಆತ ಹೊರಬರುವುದನ್ನೇ ಕಾಯುತ್ತಿದ್ದ ರಾಜೇಶ್ವರಿ-ನಿರಂಜನ-ನವನೀತ ಪೆಪ್ಪರ್ ಸ್ಪ್ರೇ ಕಣ್ಣಿಗೆ ಹಾಕಿದ್ದಾರೆ. ಕಣ್ಣು ಕಾಣದಂತಾದ ಭಾಸ್ಕರಶೆಟ್ಟಿಯ ತಲೆಗೆ ಕಬ್ಬಿಣದ ರಾಡಿಂದ ರಾಜೇಶ್ವರಿ ಬಲವಾಗಿ ಹೊಡೆದಿದ್ದಾಳೆ. ರಕ್ತದ ಮಡುವಲ್ಲಿ ಒದ್ದಾಡುತ್ತ ಬಿದ್ದಿದ್ದ ಭಾಸ್ಕರ್ ಶೆಟ್ಟಿಗೆ ಜಿರಲೆ ಮದ್ದು 'ಹಿಟ್' ನವನೀತ ಕುಡಿಸಿದ್ದಾನೆ.

ಮೂವರೂ ಸೇರಿಕೊಂಡು ಹೆಣವನ್ನು ನವನೀತನ ಕ್ರೇಟಾ ಕಾರಲ್ಲಿ ಹಾಕಿಕೊಂಡು ಮಂತ್ರವಾದಿ ನಿರಂಜನನ ನಂದಳಿಕೆ ಮನೆಯ ಯಾಗಶಾಲೆಗೆ ತಂದಿದ್ದಾರೆ. ಹೋಮಕುಂಡದಲ್ಲಿ ಶವ ಹಾಕಿ ಅದಕ್ಕೆ ಯಥೇಚ್ಛವಾಗಿ ತುಪ್ಪ, ಪೆಟ್ರೋಲ್ ಮತ್ತು ಕರ್ಪೂರ ಸುರಿದಿದ್ದಾರೆ. ಬೆಂಕಿ ಹಾಕಿ ಹೆಣ ಹೋಮ ಮಾಡಿದ್ದಾರೆ. ಸಾಕ್ಷ್ಯಾಧಾರ ನಾಶಮಾಡಲೆಂದು ನಿರಂಜನಭಟ್ಟ ಮತ್ತವನ ಕಾರು ಚಾಲಕ ರಾಘವೇಂದ್ರ ಯಾಗಶಾಲೆಯನ್ನು ತೊಳೆದಿದ್ದಾರೆ. ಮೂಳೆ-ಬೂದಿ-ಹೋಮ ಕುಂಡದ ಸಿಮೆಂಟ್ ಇಟ್ಟಿಗೆ ಚೂರುಗಳನ್ನು ಗೋಣಿಚೀಲಗಳಲ್ಲಿ ತುಂಬಿದ್ದಾರೆ ನಿರಂಜನ-ರಾಘವೇಂದ್ರ. ಹತ್ತಿರವೇ ಇದ್ದ ಹೊಳೆ ಬಳಿಗೆ ಆ ಚೀಲಗಳನ್ನು ತನ್ನ ವೆರ್ನಾ ಕಾರಲ್ಲಿ ನಿರಂಜನ ತಂದಿದ್ದಾನೆ. ಹೊಳೆಗೆ ಎಲುಬು-ಬೂದಿ-ಕಲ್ಲಿನ ಚೀಲಗಳನ್ನು ಒಂದೊಂದಾಗಿ ಎಸೆದು ರಾತ್ರಿಯ ಕತ್ತಲಲ್ಲಿ ಕರಗಿ ಹೋಗಿದ್ದಾನೆ.

ತಾರ್ಕಿಕ ಅಂತ್ಯ ಕಂಡೀತಾ?

ಇತ್ತ ನಿರಂಜನನ ತಂದೆ ಮಗ ನಾಪತ್ತೆಯಾಗುತ್ತಲೇ ಹೋಮಕುಂಡದ ಸುತ್ತಲಿನ ಟೈಲ್ಸ್ ತೆಗೆದು ನವೀಕರಣ




ಮಾಡಿಸಿದ್ದಾನೆ. ಹೋಮಕುಂಡ ಹೊಸದಾಗಿ ಮಾಡಿಸಿದ್ದಾನೆ. ಇದೆಲ್ಲಾ ಸಿಐಡಿಯ ಪ್ರಾಥಮಿಕ ದೋಷಾರೋಪಣಾ ಪಟ್ಟಿಯಲ್ಲಿ ಎಳೆ-ಎಳೆಯಾಗಿ ವಿವರಿಸಲಾಗಿದೆ. ಸದ್ಯಕ್ಕಂತೂ ಸಿಐಡಿ ಪೊಲೀಸರು ಪ್ರಾಮಾಣಿಕವಾಗೇ ತನಿಖೆ ನಡೆಸಿದ್ದಾರೆ. ಹಾಗಾಗಿ ಕೇಸು ಹಳಿ ಮೇಲೇ ಇದೆ. ಹಾಗಾಗಿ ಕೊಲೆಗಡುಕರು ಜೈಲಲ್ಲಿ ಕೊಚ್ಚಕ್ಕಿ ಗಂಜಿ-ಒಣ ಮೀನು ಉಣ್ಣುವ ಪರಿಸ್ಥಿತಿ ಮುಂದುವರೆದಿದೆ. ಈ ಪಾಪಿಗಳಿಗೆ ಜಾಮೀನು ಸಿಗುವುದು ಸುಲಭವಲ್ಲ. ಅಷ್ಟು ಬಿಗಿಯಾಗಿದೆ ಸಿಐಡಿ ತನಿಖಾ ವರದಿ ಮತ್ತು ವಿಧಿವಿಜ್ಞಾನ ಪ್ರಯೋಗಾಲಯ ದೃಢಪಡಿಸಿರುವ ಸಾಕ್ಷ್ಯಾಧಾರಗಳು. ಅಂತಿಮ ದೋಷಾರೋಪಣಾ ಪಟ್ಟಿ ತಯಾರಿಕೆಗೆ ಇನ್ನಷ್ಟು ತನಿಖೆಯಲ್ಲಿ ತೊಡಗಿರುವ ಸಿಐಡಿ ಪೊಲೀಸರು ಭಾಸ್ಕರ್ ಶೆಟ್ಟಿಯ ಮುದಿ ತಾಯಿಗೆ ನ್ಯಾಯ ಒದಗಿಸುವರಾ?

ಈ ಹೈಪ್ರೊಫೈಲ್ ಕೊಲೆ ತನಿಖೆ ತಾರ್ಕಿಕ ಅಂತ್ಯ ತಲುಪಿಸುವ ತನಕವೂ ಸಿಐಡಿ ಖಾಕಿವಾಲಾಗಳು ದಾರಿ ತಪ್ಪದಿರಲಿ. ಸೊಸೆ ಮತ್ತು ಮೊಮ್ಮಗನ ಘಾತಕದಿಂದ ಮಗನನ್ನು ಕಳೆದುಕೊಂಡ ಭಾಸ್ಕರ ಶೆಟ್ಟಿಯ ಮುದಿ ತಾಯಿಯ ಕಣ್ಣೀರ ಹನಿಗಳನ್ನು ವ್ಯರ್ಥ ಮಾಡಿದರೆ ಆ ಶಾಪ ಸಿಐಡಿ ಅಧಿಕಾರಿಗಳಿಗೆ ತಟ್ಟದೇ ಇರದು!!

- ವರದಿಗಾರ

ಅಂಬೇಡ್ಕರ್ ಹೇಳಿದ್ದು ನೋಟು ರದ್ಧತಿಯಲ್ಲ, ಖಾಸಗಿ ಒಡೆತನ ರದ




ಕೇಂದ್ರ ಸರ್ಕಾರ 500 ಮತ್ತು 1000 ರೂಪಾಯಿಗಳ ನೋಟುಗಳನ್ನು ರದ್ದು ಮಾಡಿದ ಕೂಡಲೇ 'ಕಾಳಧನ ತಡೆಯಲು ಪ್ರತಿ 20 ವರ್ಷಗಳಿಗೊಮ್ಮೆ ರೂಪಾಯಿ ನೋಟುಗಳನ್ನು ಬದಲಾಯಿಸಬೇಕು ಎಂದು ಅಂಬೇಡ್ಕರ್‌ರವರು ರೂಪಾಯಿ ಸಮಸ್ಯೆ ಕೃತಿಯಲ್ಲಿ ಹೇಳಿದ್ದಾರೆ' ಎಂಬ ಮಾಹಿತಿ ಮಾಧ್ಯಮಗಳಲ್ಲಿ ಹರಿದಾಡಿತು. ಅಂಬೇಡ್ಕರ್‌ವಾದಿಗಳು ಎನಿಸಿಕೊಂಡವರೂ ಸಹ ಅದಕ್ಕೆ ಹೌದೆಂದು ತಲೆಯಾಡಿಸಿದರು. ಸತ್ಯವೆಂದರೆ ಅಂಬೇಡ್ಕರ್‌ರವರು ತಮ್ಮ 'ರೂಪಾಯಿ ಸಮಸ್ಯೆ' ಎಂಬ ಸಂಶೋಧನಾ ಗ್ರಂಥದಲ್ಲಿಯಾಗಲೀ, 1924 ರಲ್ಲಿ ಭಾರತದ ಹಣಕಾಸು ವ್ಯವಸ್ಥೆ ಪರಿಶೀಲನೆಗಾಗಿ ಬಂದ ಹಿಲ್ಟನ್ ಯಂಗ್ ಆಯೋಗದ ಮುಂದೆ ಹೇಳಿಕೆ ನೀಡುವಲ್ಲಿಯಾಗಲೀ ಕಾಳಧನದ ಬಗ್ಗೆ ಪ್ರಸ್ತಾಪಿಸಿಲ್ಲ.

ಆ ಕಾಲಘಟ್ಟದಲ್ಲಿ ಕಪ್ಪು ಹಣವು ಒಂದು ಸಮಸ್ಯೆಯಾಗಿದ್ದರೆ ಖಂಡಿತವಾಗಿಯೂ ಬಾಬಾಸಾಹೇಬರು ಅದರ ಬಗ್ಗೆ ಮಾತನಾಡುತ್ತಿದ್ದರು. ಆದರೆ ಅಂದಿನ ಸ್ಥಿತಿ ಹಾಗಿರಲಿಲ್ಲ. ಬದಲಾಗಿ ಬೆಳ್ಳಿ ಅಥವಾ ಚಿನ್ನದ ಸ್ಟಾಂಡರ್ಡ್ ಬಗ್ಗೆ ಹೆಚ್ಚು ಚರ್ಚಿತವಾಗುತ್ತಿತ್ತು. ಬೆಳ್ಳಿಯ ನಾಣ್ಯ ಅಪಮೌಲ್ಯೀಕರಣಗೊಂಡು ತನ್ನ ಮೌಲ್ಯವನ್ನು ಕಳೆದುಕೊಂಡಿತ್ತು. ಬ್ರಿಟಿಷ್ ಸರ್ಕಾರ ಭಾರತದ ಮೂರು ಪ್ರಾಂತ್ಯಗಳಾದ ಮುಂಬೈ, ಮದ್ರಾಸ್ ಮತ್ತು ಬಂಗಾಲಗಳಲ್ಲಿ ವಿಧಿಸಿದ್ದ ವಿವಿಧ ಹಾಗೂ ಪ್ರತ್ಯೇಕ ನಾಣ್ಯ ಪದ್ಧತಿಗಳು ಹೇಗೆ ಭಾರತದ ಆಂತರಿಕ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸಿವೆ ಎಂಬುದನ್ನು ಸೂಚ್ಯವಾಗಿ ಹಾಗೂ ಕರಾರುವಾಕ್ಕಾಗಿ ಹೇಳುವ ಪ್ರಯತ್ನವನ್ನು ಬಾಬಾಸಾಹೇಬರು ಮಾಡಿದ್ದರು.

ಜನಸಾಮಾನ್ಯರ ಬಗ್ಗೆ ಹೆಚ್ಚು ಯೋಚಿಸುವ ಅಂಬೇಡ್ಕರರು ಬ್ರಿಟಿಷರ ಹಾಗೂ ಆಳುವವರ ತೆರಿಗೆ ಪದ್ಧತಿಯನ್ನು ಖಂಡತುಂಡವಾಗಿ ಖಂಡಿಸುತ್ತಾರೆ. "ಶಾಂತಿ ಹಾಗೂ ಸುವ್ಯವಸ್ಥೆ ಸ್ಥಾಪಿಸಲು ಸಾಮಾನ್ಯ ಜನರಿಂದ ಕರವಸೂಲು ಮಾಡುವುದು, ಶ್ರೀಮಂತರನ್ನು ಕರದಿಂದ ಮುಕ್ತಗೊಳಿಸುವುದು, ಇವರ ಹಣಕಾಸಿನ ವ್ಯವಸ್ಥೆಯ ಲಕ್ಷಣಗಳಾಗಿವೆ" ಎನ್ನುವ ಅವರು ಪರೋಕ್ಷ ತೆರಿಗೆಗಳು ಹೆಚ್ಚಾಗಿ ಬಡವರನ್ನು ಕಾಡಿಸುತ್ತವೆ ಎನ್ನುತ್ತಾರೆ.

ಬ್ರಿಟಿಷರ ಉಪ್ಪಿನ ತೆರಿಗೆಯನ್ನು ಖಂಡಿಸುವ ಅಂಬೇಡ್ಕರರು "ಬ್ರಿಟಿಷ್ ಸರ್ಕಾರದಿಂದ ಹೆಚ್ಚಿನ ಸಂರಕ್ಷಣೆ ಮತ್ತು ಲಾಭ ಪಡೆಯುವ ಭಾರತದ ಶ್ರೀಮಂತ ವರ್ಗ ಅದಕ್ಕೆ ಅತೀ ಕಡಿಮೆ ತೆರಿಗೆ ಕೊಡುತ್ತದೆ" ಎನ್ನುತ್ತಾರೆ.

ಕುತೂಹಲವೆಂದರೆ ಕಳೆದ ವಾರ ರಾಷ್ಟ್ರೀಕೃತ ಬ್ಯಾಂಕುಗಳು ಬೃಹತ್ ಉದ್ಯಮಿಗಳ ಸಾವಿರಾರು ಕೋಟಿ ಸಾಲವನ್ನು ಮನ್ನಾ ಮಾಡಿದೆ. ನಮ್ಮ ಕೇಂದ್ರ ಸರ್ಕಾರ ಬಾಯಿಮುಚ್ಚಿ ಕುಳಿತಿದೆ. ಅಂದು ಬ್ರಿಟಿಷ್ ಸರ್ಕಾರ ಬಡವರಿಗೆ ಮಾಡಿದ ಮೋಸವನ್ನೇ ಇಂದು ನಮ್ಮ ಸರ್ಕಾರಗಳು ನಮಗೆ ಮಾಡುತ್ತಿವೆ. ಹೀಗೆ ಆಳುವ ಸರ್ಕಾರಗಳ ಶ್ರೀಮಂತರ ಪರ ಧೋರಣೆಯನ್ನು ಅಂಬೇಡ್ಕರ್ ಅಂದೇ ಖಂಡಿಸಿದ್ದಾರೆ.



ಹೀಗೆ ಅಂಬೇಡ್ಕರ್‌ರವರು ಬ್ರಿಟಿಷ್ ಭಾರತದ ಎರಡು ಶತಮಾನದ ಹಣಕಾಸು ವ್ಯವಸ್ಥೆಯನ್ನು ಪರಿಶೀಲಿಸಿ ಬೆಳ್ಳಿಯ ಸ್ಟಾಂಡರ್ಡಿಗೆ ಬದಲು ಚಿನ್ನದ ಸ್ಟಾಂಡರ್ಡಿಗೆ ಮರಳಬೇಕೆಂದು ಹೇಳುತ್ತಾರೆ. ಇದನ್ನು ಬಿಟ್ಟು ಕಪ್ಪು ಹಣದ ಬಗ್ಗೆ ಯಾವ ಪ್ರಸ್ತಾಪವನ್ನೂ ಅವರು ಮಾಡುವುದಿಲ್ಲ. ಆ ಕಾಲಘಟ್ಟದಲ್ಲಿ ಅದೂ ಒಂದು ಸಮಸ್ಯೆಯೂ ಆಗಿರಲಿಲ್ಲ. ಆದರೆ ತಮ್ಮ 'ರಾಜ್ಯ ಮತ್ತು ಅಲ್ಪಸಂಖ್ಯಾತರು' ಕೃತಿಯಲ್ಲಿ ಅಂಬೇಡ್ಕರ್‌ರವರು ಖಾಸಗಿ ಒಡೆತನದ ರದ್ಧತಿ ಬಗ್ಗೆ ಮಾತನಾಡುತ್ತಾರೆ. ಅತ್ಯಂತ ನಿಖರವಾಗಿ ಭೂಒಡೆತನ, ಕೈಗಾರಿಕೆ ಒಡೆತನ ಮತ್ತು ವಿಮೆ ಒಡೆತನದಲ್ಲಿ ಖಾಸಗಿಯವರ ಹಕ್ಕು ರದ್ಧತಿಯಾಗಬೇಕೆಂದು ಹೇಳುತ್ತಾರೆ. ಮುಂದುವರೆದು ಈ ಮೂರೂ ಒಡೆತನವನ್ನು ಸರ್ಕಾರವೇ ಕೈಗೆತ್ತಿಕೊಳ್ಳಬೇಕು, ರಾಷ್ಟ್ರೀಕರಣವಾಗಬೇಕು ಎ... ಹೇಳುತ್ತಾರೆ.

ಇಂದು ನಮ್ಮ ಮುಂದೆ ಇರುವ ಸವಾ... ಕಾಳಧನವನ್ನು ಮೂಟೆಯಲ್ಲಿರಿಸಿಕೊಳ್ಳುವ ಜ... ಚಿರಳೆಣಿಕೆಯಷ್ಟು. ಕಾಳಧನವನ್ನು ತೊಡಗಿಸಲು... ಬಹಿರಂಗ ಕ್ಷೇತ್ರಗಳೇ ಹುಟ್ಟಿ... ರಿಯಲ್ ಎಸ್ಟೇಟ್ ಉದ್ಯಮ... ರಂಗ, ಚುನಾವಣಾ ವ್ಯವ... ಆರಂಭವಾಗಿ ಚಿನ್ನ ಕೊಳ್ಳು... ಹಾಗೂ ವಿದೇಶಿ ಬ್ಯಾಂ... ಬೇನಾಮಿ ಹೆಸರಿನಲ್ಲಿ ಶೇರ್... ವರೆಗೂ ಕಾಳಧನದ ಅಪರಾ... ವಿಸ್ತರಿಸಿವೆ. ಹೀಗಿರುವಾಗ ... ರದ್ಧತಿ ಎಂಬ ಪ್ರಹಸನ... ವ್ಯಾಪಾರಿಗಳನ್ನಷ್ಟೇ ಕೊಲ್ಲ... ಹಳ್ಳಿಯಲ್ಲಿನ ಲೇವಾದೇವಿ... ಮಟ್ಟಹಾಕಲು ಇದು ಶಕ್ತಾ...


ಆದ್ದರಿಂದ ಅಂಬೇ... ಹೇಳಿದಂತೆ ಶ್ರೀಮಂತ... ಬಡವರ ಕಡೆ ಹರಿಯುವಂತಹ ಕಾನೂ... ಜಾರಿಯಾಗಬೇಕು. ಭೂಮಿ, ವಿಮೆ, ಬೃಹತ್ ಕೈ... ರಾಷ್ಟ್ರೀಕರಣವಾಗಬೇಕು. ಇದನ್ನು ಬಿಟ್ಟು ... ಕ್ರಮಗಳೂ ಸಹ ಕಾಳಧನವನ್ನು ಮಟ್ಟ ಹಾಕು...

■ ವಿಕಾಸ ಆರ್

ಸಾರಾ ಅಬೂಬಕರ್‌ಗೆ ಸಮಜಾಯಿ

ಕನ್ನಡ ಭಾಷೆ ಬೆಳೆಸುವಲ್ಲಿ ಗ್ರಂಥಾಲಯಗಳು ಮಹತ್ವದ ಪಾತ್ರ ವಹಿಸುತ್ತವೆಂದು ಸಾರಾ ಅಬೂಬಕರ್ ಅಭಿಪ್ರಾಯಪಟ್ಟಿದ್ದಾರೆ. ಅದೇನೋ ನಿಜ. ಓದನ್ನು ಅರ್ಧಕ್ಕೇ ನಿಲ್ಲಿಸಿದ ಜನಗಳು ಗ್ರಂಥಾಲಯಗಳನ್ನು ಆಶ್ರಯಿಸಿ ವಿದ್ವಾಂಸರಾದ ಉದಾಹರಣೆಗಳು ಹೇರಳವಾಗಿವೆ. ಎಷ್ಟೋ ಜನ ಸಾಹಿತಿಗಳು ಕೂಡ ಈ ಉದಾಹರಣೆಯೊಳಗಿದ್ದಾರೆ.

ಮೂರ್‍ನಾಲ್ಕು ದಶಕದ ಹಿಂದೆ ಗ್ರಂಥಾಲಯಗಳಿಗೆ ಹೋದಾಗ ಉಪಯುಕ್ತ ಗ್ರಂಥಗಳ ಹೊರತಾಗಿ ಇನ್ಯಾವ ಗ್ರಂಥಗಳೂ ಅಲ್ಲಿರಲಿಲ್ಲ. ಅಲ್ಮೇರಾಗಳಲ್ಲಿ ಕನ್ನಡದ ದಿಗ್ಗಜರ ಪುಸ್ತಕಗಳನ್ನು ನೋಡುವುದೇ ಒಂದು ಸಂಭ್ರಮವಾಗಿತ್ತು. ಆದರೆ ಈಗ ಹಾಗಿಲ್ಲ. ನಾವು ಕಂಡುಕೇಳರಿಯದ ಅನಾಮಧೇಯ ಲೇಖಕರ ಪುಸ್ತಕಗಳ ರಾಶಿಯನ್ನೇ ನೀವು ನೋಡಬಹುದು. ಇದು ಸಗಟು ಖರೀದಿಯಿಂದ ಆದ ಅನಾಹುತ.



ಸರಕಾರವೇನೋ ಕೋಟ್ಯಂತರ ರೂಪಾಯಿಗಳ ಅನುದಾನ ನೀಡುತ್ತದೆ. ಗ್ರಂಥ ಖರೀದಿಗಾಗಿ ಒಂದು ಆಯ್ಕೆ ಸಮಿತಿಯೂ ಇದೆ. ಈ ಆಯ್ಕೆ ಸಮಿತಿ ಹದಗೆಟ್ಟ ಕೆಲಸ ಮಾಡಿದ್ದು ಬಿಜೆಪಿ ಆಡಳಿತದ ಅವಧಿಯಲ್ಲಿ. ಅಂದಿನ ಆಯ್ಕೆ ಸಮಿತಿ ಅಧ್ಯಕ್ಷ ಸ್ವತಃ ತಾನೇ ಅಸಮರ್ಥನಿದ್ದ. ಅಂದು ಆಯ್ಕೆ ಸಮಿತಿಗೆ ಗ್ರಂಥ ಕಳಿಸಿದ ಬಿಜೆಪಿ ಸಾಹಿತಿಗಳು ತನ್ನ ಕೇರಾಫ್ ಅಡ್ರೆಸ್ಸುಗಳನ್ನು ಬಿಜೆಪಿ ಎಮ್ಮೆಲ್ಲೆ ಮನೆ ಅಥವಾ ಶಾಸಕರ ಭವನದ ಅಡ್ರೆಸ್ ಕೊಡುತ್ತಿದ್ದರು. ಸುಮಾರು ಸಾಹಿತಿಗಳು ಇಂದು ಟಿವಿಯಲ್ಲಿ ಬರುವ ಬಿಗ್‌ಬಾಸ್ ಕಾರ್ಯಕ್ರಮದಲ್ಲಿನ 'ಪ್ರಥಮ್' ಎಂಬ ಈಶ್ವರಪ್ಪನ ಕಡೆ ಹುಡುಗನಂತಿದ್ದರು. ಈಗಲೂ ಇದ್ದಾರೆ. ಆ ಸಾಹಿತಿಗಳ ಜೊತೆ ಮಾತನಾಡಲು ಸಾಧ್ಯವೇ ಇಲ್ಲ, ಅಂತಹ ಕ್ರಾಕ್ ಸಾಹಿತಿಗಳು.

ಇಂಥವರು ಬರೆದು ಕಳಿಸಿದ ಪುಸ್ತಕಗಳು ಆ ಸಂದರ್ಭದಲ್ಲಿ ಗ್ರಂಥಾಲಯಗಳಿಗೆ ಖರೀದಿಯಾಗಿವೆ. ಆ ಆಡಳಿತದ ಅವಧಿ ಸುದೈವದಿಂದ ಕೊನೆಗೊಳ್ಳಲಾಗಿ ನಮ್ಮ ಗ್ರಂಥಾಲಯಗಳು ಉಳಿದುಕೊಂಡವು. ಆದರೂ ಈ ಗ್ರಂಥಾಲಯಗಳು ಪುಸ್ತಕದ ಗೋಡೌನ್‌ಗಳಾಗುವುದನ್ನು ಯಾರೂ ತಡೆಯಲಾಗುತ್ತಿಲ್ಲ. ಅದಕ್ಕೆ ಕಾರಣ ಸಗಟು ಖರೀದಿ!

ಈ ಖರೀದಿ ದೆಸೆಯಿಂದ ಇಡೀ ಕರ್ನಾಟಕದ ಅರೆಬರೆ ಸಾಹಿತಿಗಳು ಕರಕರ ಎಂದು ಪುಸ್ತಕ ಕೆರೆಯಲಾರಂಭಿಸಿದ್ದಾರೆ. ಹೇಗಿದ್ದರೂ ಸರಕಾರ 300 ಪ್ರತಿ ಕೊಳ್ಳುತ್ತೆ, ಅದರಲ್ಲಿ ಪ್ರಿಂಟಿಂಗ್ ಖರ್ಚು ಬಂದರೆ ಇನ್ನುಳಿದವನ್ನು ಅವ್ರಿವರಿಗೆ ಹಂಚಿ ತಾನೂ ಕೂಡ ಸಾಹಿತಿಯಾದೆ ಎಂದು ಪ್ರಚಾರ ಮಾಡಿದರಾಯ್ತು ಎಂಬ ಮನೋಭಾವದ ಸಾಹಿತಿಗಳ ಹಿಂಡೇ ಇದೆ. ಇದರಿಂದ ರಾಜ್ಯದ ಗ್ರಂಥಾಲಯಗಳಿಗೆ ಮೂಟೆಗಟ್ಟಲೆ ಪುಸ್ತಕ ಬಂದುಬೀಳುತ್ತಿವೆ. ಈ ಮೂಟೆ ನೋಡಿದವರಿಗೆ ಗ್ರಂಥಗಳ ಬಗ್ಗೆ ಇದ್ದ ಭಾವನೆಯೇ ಹೊರಟುಹೋಗಿ ದಂಗು ಬಡಿಯುವಂತಾಗುತ್ತದೆ.

ಅದ್ಯಾವುದೋ ಕಾರಣಕ್ಕೆ ಗ್ರಂಥ ಖರೀದಿ ನಿಂತಿದೆ. ಇಲಾಖೆಯವರನ್ನು ಕೇಳಿದರೆ ಸಮಂಜಸ ಉತ್ತರ ಸಿಗುತ್ತಿಲ್ಲ. ಬೀಚಿಯವರು ಬರೆದಿರುವಂತೆ ಎಲ್ಲಾ ಮಹಾಯುದ್ಧಗಳ ಮೂಲಕಾರಣ ಅತಿಸಣ್ಣದಾಗಿರುತ್ತವಂತೆ ಅಥವಾ ಕ್ಷುಲ್ಲಕವಾಗಿರುತ್ತವಂತೆ. ಹಾಗೆಯೇ ಈ ಸಗಟು ಖರೀದಿ ನಿಂತುಹೋಗಲು ಒಂದು ಸಣ್ಣ ಕಾರಣ ಬೃಹತ್ತಾಗಿ ಬೆಳೆದಿರಬಹುದು. ಒಂದು ಕಾರಣ ಹೀಗಿದೆ: ಬೆಂಗಳೂರಿನ ಕಾರ್ಪೊರೇಷನ್ ತೆರಿಗೆ ಹಣದಲ್ಲಿ ಗ್ರಂಥಾಲಯದ ಕರವನ್ನು ಕಟಾವು ಮಾಡಿ ಗ್ರಂಥಾಲಯ ಇಲಾಖೆಗೆ ಕೊಟ್ಟಿಲ್ಲ ಎಂದು ಕೋರ್ಟಿಗೆ ಹೋದರಂತೆ. ನ್ಯಾಯಾಧೀಶರು ಗ್ರಂಥಾಲಯ ಸಾರ್ವಜನಿಕರಿಗೆ ಸಲ್ಲಿಸುತ್ತಿರುವ ಸೇವೆಯ ವಿವರ ಕೇಳಿದರಂತೆ. ಅಲ್ಲಿಗೆ ತಡಬಡಾಯಿಸಿದ ಗ್ರಂಥಾಲಯ ಬೆಬ್ಬೆಬ್ಬೆ ಇಕ್ಕಿತಂತೆ. ಇದೇ ಕಾರಣವಾಗಿ ಕರ ನಿರಾಕರಣೆ ಸಮಸ್ಯೆ ಮುಂದುವರಿದಿದೆಯಂತೆ.


ಸಾಮಾನ್ಯವಾಗಿ ನಮ್ಮ ನ್ಯಾಯಾಲಯಗಳು ಕೆಲವೊಮ್ಮೆ ಹೀಗೆ ವರ್ತಿಸುತ್ತವೆ. ಹೇಗೆಂದರೆ ನಾನು ಸಾರಾ ಅಬೂಬಕರ್ ಬರೆಯದಂತೆ ಸ್ಟೇ ತರಬಹುದು. 'ಸ್ಟೇ' ವೆಕೇಟಾಗುವುದರಲ್ಲಿ ಸಾರಾ ಬರವಣಿಗೆ ಸ್ಫೂರ್ತಿಯನ್ನು ಕಳೆದುಕೊಂಡು ಬರೆಯುವುದಕ್ಕಿಂತಲೂ ನಮಾಜೇ ಒಳ್ಳೆಯದೆಂಬ ತೀರ್ಮಾನ ತೆಗೆದುಕೊಳ್ಳಬಹುದು. ಇಂತಿರುವ ಕೋರ್ಟುಗಳಿಗೆ ಹೋಗಬಾರದೆಂಬ ಕನಿಷ್ಠ ಜ್ಞಾನ ನಮ್ಮ ಸಾರ್ವಜನಿಕ ವಲಯಕ್ಕೆ ಬರುವವರೆಗೂ ಇಂತಹ ಸಮಸ್ಯೆಗಳು ಉದ್ಭವಿಸುತ್ತಲೇ ಇರುತ್ತವೆ. ಆದರೀಗ ಬೆಳಗಾವಿ ಅಧಿವೇಶನದ ನಂತರ ಗ್ರಂಥ ಖರೀದಿ ಎಂಬ ವ್ಯಾಪಾರದ ವಹಿವಾಟು ಆರಂಭವಾಗುತ್ತದೆಂಬ ಸೂಚನೆ ಸಿಕ್ಕಿರುವುದರಿಂದ ಗ್ರಂಥಗಳನ್ನು ಕೆರೆದು ಗುಡ್ಡೆ ಹಾಕಿಕೊಂಡವರು ನಿರಾಶರಾಗುವ ಅಗತ್ಯವಿಲ್ಲ.

ಇನ್ನ ಸಾರಾ ಅವರ ಹಲವು ಅನುಮಾನಗಳು ಉತ್ತರಿಸಲು ಯೋಗ್ಯವಾಗಿವೆ. ಖರೀದಿ ನಿಂತುಹೋಗಿರುವುದರಿಂದ 2010ರಿಂದ ಪ್ರಕಟಗೊಂಡು ಆಯ್ಕೆಯಾಗಿರುವ ಪುಸ್ತಕಗಳನ್ನು ಖರೀದಿಸುವುದು ಅಥವಾ ಬಿಡುವುದು ಗ್ರಂಥಪಾಲಕನ ವಿವೇಚನೆಗೆ ಬಿಟ್ಟದ್ದು. ಆತ ಸದಭಿರುಚಿಯ ಓದುಗನಾಗಿದ್ದರೆ ಆಯ್ಕೆ ಸಮಿತಿಯಿಂದ ಬಂದ ಪಟ್ಟಿಯನ್ನು ಸೋಸಿ, ಆಯ್ಕೆ ಮಾಡಿ ಆರ್ಡರು ಕೊಡಬಲ್ಲ. ಪರ್ಸಂಟೇಜ್ ಗಿರಾಕಿಗಳಿಗೆ ಈ ಸಮಸ್ಯೆಯಿಲ್ಲ. ಗ್ರಂಥ ಖರೀದಿಗೆ 30 ರಿಂದ 40 ಪರಸೆಂಟ್ ಕಮಿಷನ್ ನಡೆಯುತ್ತಿರುವ ಈ ಸಮಯದಲ್ಲಿ ಗತಿಗೆಟ್ಟ ಲೇಖಕರು ಮತ್ತು ಭ್ರಷ್ಟ ಗ್ರಂಥಾಲಯಾಧಿಕಾರಿಗಳ ಕರಾಮತ್ತು 'ಎಗ್ಗಿಲ್ಲದೆ ನಡೆಯತೊಡಗಿದೆ. ಇದು ಸಗಟು ಖರೀದಿಯ ತೀರ್ಮಾನದಿಂದ ಬೆಳೆದುಬಿಟ್ಟ ಭ್ರಷ್ಟಲೋಕ.

ನಿಜಕ್ಕೂ ಸಾಹಿತಿಯಾದವನು ಇಂತಹ ಕೃತ್ಯಗಳನ್ನು ತಡೆಯಬೇಕಾದರೆ 'ನನ್ನ ಪುಸ್ತಕ ಹೋಗದಿದ್ದರೂ ಸರಿ, ನಾನು ಲಂಚ ಕೊಡುವುದಿಲ್ಲ' ಎಂಬ ತೀರ್ಮಾನಕ್ಕೆ ಬರಬೇಕು. ಈ ವ್ಯವಹಾರದಿಂದ ರೋಸಿದ ಕೆಲ ಸಾಹಿತಿಗಳು ತಮ್ಮ ಪುಸ್ತಕವನ್ನು ನುರಿತ ಪ್ರಕಾಶಕನಿಗೆ ಕೊಟ್ಟು ಆತನಿಂದ ಮೂರು ಸಾವಿರ ರೂಪಾಯಿ ಕ್ಯಾಶು ಮತ್ತು 50 ಪುಸ್ತಕ ಪಡೆಯುತ್ತಾರೆ. ಇಂತಹ ಪ್ರಕಾಶಕರ ಪೈಕಿ ಒಬ್ಬ ಸುಮಾರು 40 ಪ್ರಕಾಶನ ಸಂಸ್ಥೆ ತೆರೆದಿದ್ದಾನೆ. ಆತನಿಗೆ ಸಾರಾ ಪರಿಚಯವಾದರೆ ಅವರ ಅಡ್ರೆಸ್ಸಿನ ಪ್ರಕಾಶನ ನಾಳೆಯೇ ರೆಡಿಯಾಗುತ್ತದೆ. ಈ ಪ್ರಕಾಶಕನ ಹಾವಳಿ ತಡೆಯಲು ಬಸವರಾಜ ಹೊರಟ್ಟಿ ಆತನ ಪುಸ್ತಕ ಖರೀದಿಸದಂತೆ ತಡೆಯೊಡ್ಡಿದರು. ಇದರಿಂದ ಕಂಗಾಲಾದ ಪ್ರಖ್ಯಾತ ಸಾಹಿತಿಗಳು ವಾಚಕರ ವಾಣಿಗೆ ಪ್ರತಿಭಟನೆ ಕೆರೆದು ಗ್ರಂಥಾಲಯ ಇಲಾಖೆಯನ್ನು ಪ್ರಬುದ್ಧ ಮಾತುಗಳಿಂದ ಟೀಕಿಸಿದರು.

ಈ ಸಗಟು ಖರೀದಿ ಮಾಡಿರುವ ಅನಾಹುತಗಳ ಪಟ್ಟಿ ದೊಡ್ಡದಿದೆ. ಜನ ಕೊಂಡು ಓದದ ಲೇಖಕ ಸಗಟು ಖರೀದಿ ಮೊರೆ ಹೋಗುತ್ತಿದ್ದಾನೆ. ಇಂತಹ ಲೇಖಕನೊಬ್ಬ ಮೂಡಿಗೆರೆ ಬಹಿರಂಗ ಸಭೆಯಲ್ಲಿ "ಗ್ರಂಥಾಲಯ ಇಲಾಖೆ ನನ್ನ ಪುಸ್ತಕ ಖರೀದಿಸುತ್ತಿಲ್ಲ" ಎಂದು ತೇಜಸ್ವಿಯವರಿಗೆ ದೂರಿದ. ತೇಜಸ್ವಿ ಸಿಟ್ಟುಗೊಂಡು "ಜನ ಖರೀದಿಸಲಾಗದಂತಹ ಪುಸ್ತಕನ ಯಾಕ್ ಬರಿತಿರ್ರಿ? ಯಾರು ನಿಮ್ಮನ್ನು ಬರಿಲೇಬೇಕು ಅಂತ ಒತ್ತಾಯ ಮಾಡಿದೋರು" ಎಂದರು. ಇಂತಹ ಅಭಿಪ್ರಾಯ ಹೊಂದಿದ್ದ ತೇಜಸ್ವಿ ಸಾಯುವವರೆಗೂ ಸಗಟು ಖರೀದಿ ಸನಿಹಕ್ಕೇ ಹೋಗಲಿಲ್ಲ.

ಜನ ಕೊಂಡು ಓದುವಂತೆ ಪ್ರಜ್ಞೆ ಮೂಡಿಸಿಕೊಂಡು ಪುಸ್ತಕ



ಬರೆಯಲಾರದವರೆಲ್ಲಾ ಸಗಟು ಖರೀದಿ ಕಾಯುತ್ತ ಕುಳಿತಿದ್ದಾರೆ... ಸೃಷ್ಟಿ ಮಾಡಿದ ಅನಾಹುತ ನೋಡಬೇಕಾದರೆ ಸಾರ್ವಜನಿಕ ಗ್ರಂಥಾ... ಹೋಗಿ ನೋಡಬೇಕು. ಗ್ರಂಥಾಲಯ ಕ್ರಮಬದ್ಧವಾಗಿ ಬೆಳೆಯ... ಅದು ಒಳ್ಳೆ ಕಟ್ಟಡ ಹೊಂದಿರಬೇಕು. ಜನ ಓದಲು ಕುರ್ಚಿಮೇಜು... ಪುಸ್ತಕ ಜೋಡಿಸಲು ಅಲ್ಮೇರಾಗಳಿರಬೇಕು. ಆದರೆ ಇಂತಹ ಬ... ಅಂಗಗಳ ಬೆಳವಣಿಗೆಯೆಲ್ಲಾ ನಿಂತುಹೋಗಿ ಬೆಂಗಳೂರಿನಿಂದ ... ವಿಆರ್‌ಎಲ್ ಲಾರಿಗಳು ಸಗಟು ಖರೀದಿ ಗ್ರಂಥಗಳ... ಎಸೆದುಹೋಗುತ್ತಿವೆ. ಈಗ ಸಗಟು ಖರೀದಿಯಿಲ್ಲದಿರುವುದರಿಂ... ನಿಂತಿದೆ. ಆದರೆ ಯಾವ ಅನಾಹುತವೂ ಆಗಿಲ್ಲ. ಆದ್ದರಿಂದ ಸಗಟು... ಮರುಚಿಂತನೆಗೆ ಒಳಪಡಬೇಕಿದೆ.

ದುರಂತ ನೋಡಿ, ಈ ಇಲಾಖೆ ಎಷ್ಟು ಅನಾದರಕ್ಕೆ ಗುರಿಯಾಗಿ... ಇದಕ್ಕೆ ಇಲ್ಲಿಯವರೆಗೂ ಒಬ್ಬ ಸಮರ್ಥ ಮಂತ್ರಿ ಸಿಗಲಿಲ್ಲ. ಶಿಕ್ಷಣ... ಇದನ್ನು ತಾಗಿಸಿ ಸುಮ್ಮನಾಗುವುದರಿಂದ ಬೃಹತ್ ಶಿಕ್ಷಣದ ಸವಾ... ಆ ಮಂತ್ರಿ ಇತ್ತ ತಲೆ ಇಕ್ಕಲಾಗುವುದಿಲ್ಲ. ಸುದೈವಕ್ಕೆ ಈಗ ... ಕಮಿಟಿಯಿದೆ. ಕಸಕಡ್ಡಿಯನ್ನೆಲ್ಲಾ ಸೋಸುವ ಡಾ. ಶ್ರೀಕಂಠ ಕೂಡಿಗೆ... ಈ ಅವಧಿಯಲ್ಲಿ ಒಳ್ಳೆ ಗ್ರಂಥಗಳು ಲಭ್ಯವಾಗಬಹುದು.

ಇನ್ನ 2016ರ ಕೃತಿಯೊಂದು ಆಯ್ಕೆ ಹೇಗಾಯಿತು ಎಂ... ತಲೆಕೆಟ್ಟ ಸಾಹಿತಿಯೊಬ್ಬನ ಮಾತಿಗೆ ವಿವರ ಕೇಳಿದ್ದಾರೆ. ಯಾವ ... ಇಂತಹ ಅನಾಹುತ ಜರುಗುವುದಿಲ್ಲ. ಮುಖ್ಯ ಗ್ರಂಥಾಲಯಾ... ತಮಗಿರುವ ವಿವೇಚನಾ ಕೋಟಾದಲ್ಲಿ ಕೆಲ ಸಾಹಿತಿಗಳ... ಪ್ರತಿಕೊಳ್ಳಬಹುದು. ಇದು ಹಣಕಾಸಿನ ಲಭ್ಯತೆ ಮತ್ತು ವಿಶ್ವಾಸದ ಮ... ಜರುಗುವ ಅನಾಹುತ. ಸಗಟು ಖರೀದಿ ಆರಂಭವಾದಾಗಲೇ ಗ್ರ... ಗೋಡೌನ್‌ಗಳಾಗಿವೆ. ಇಲ್ಲಿಗೆ ಬರುವ ಜನಗಳನ್ನ ಗಮನಿಸಿದರೆ ಕ... ಗ್ರಂಥಾಲಯಗಳಿಂದ ಉಳಿದು ಬೆಳೆಯುವ ಸೂಚನೆ ಕಾಣುತ್ತಿ... ಉಳಿಸಲು ಸಾರಾ ಅಬೂಬಕರ್ ಬೇರೆಯದೆ ಆಲೋಚನೆ ಮಾಡ...

■ ಪುಸ್ತಕ



ಕುರಿಯ ಚಾಲಾಕಿತನ

ದೊಡ್ಡವರಿಗಾಗಿ ಮಕ್ಕಳ ಕಥೆ

ಹಾನೊಂದು ಕಾಲದಲ್ಲಿ ಒಬ್ಬ ಐಲು ದೊರೆ ವನು ಹುಚ್ಚು, ಹುಚ್ಚಾಗಿ ರಾಜ್ಯಭಾರ ದ್ದುದರಿಂದ ಅವನಿಗೆ ಜನ 'ಐಲು ದೊರೆ' ಯುತ್ತಿದ್ದರು. ಅವನಿಗೆ ಸಹಾಯಕರಾಗಿ ರಾಜ್ಯಭಾರ ಒಬ್ಬ ಪ್ರಧಾನ ಮಂತ್ರಿ, ಮೂರ್ನಾಲ್ಕು , ಮೂರ್ನಾಲ್ಕು ಪುರೋಹಿತರು, ಜ್ಯೋತಿಷಿಗಳು ತ್ತು ಶಾಸ್ತ್ರಿಗಳು ಇದ್ದರು. ಒಂದು ದಿನ ಅವರೆಲ್ಲರೂ ಹತ್ತಿರ ಹೋಗಿ ಒಂದು ಮನವಿಯನ್ನು ರು: "ದೊರೆ, ನಮ್ಮ ರಾಜ್ಯದಲ್ಲಿ ಪ್ರಾಣಿಹಿಂಸೆ ಣಿ-ಆಹಾರ ಸೇವನೆ ಜಾಸ್ತಿಯಾಗಿದ್ದು ಅದನ್ನು ು. ಇಲ್ಲದಿದ್ದರೆ ನಮ್ಮ ಧರ್ಮಕ್ಕೆ ಅಪಚಾರ ಹಾಗೆ. ನಮ್ಮ ರಾಜ್ಯವನ್ನು ತಾವು ಉದ್ಧರಿಸಬೇಕು". ಾತುಕೇಳಿ ದೊರೆ ಯಥಾ ಪ್ರಕಾರ ಹಿಂದೆ-ಮುಂದೆ ಯೋಚಿಸದೆ ಒಂದು ಆಜ್ಞೆಯನ್ನು ಹೊರಡಿಸಿದ. ೇಗಿತ್ತು:

ಜ್ಯದ ಜನರೆ, ಇಂದಿನಿಂದ ನಮ್ಮ ರಾಜ್ಯದಲ್ಲಿ ಗಿ ಪ್ರಾಣಿಗಳನ್ನು ಹಿಂಸಿಸುವುದಾಗಲಿ ಅಥವಾ ವುದಾಗಲಿ ನಿಷಿದ್ಧ. ನಿಮ್ಮ ಬಳಿ ಇರುವ ಕುರಿ, ದನ-ಕರುಗಳನ್ನು ಒಂದು ವಾರದೊಳಗೆ ೊಳಗೆ ಸಾಗಿಸಬೇಕು. ಇಲ್ಲದಿದ್ದರೆ ನಿಮಗೆ ಕಾರಾಗೃಹ ನೀಡಲಾಗುವುದು. ಇನ್ನು ಮುಂದೆ ನೀವು ನ್ನು ಸಾಕಬೇಕಾದರೆ ಹುಲಿ, ಸಿಂಹ ಅಥವಾ ನ್ನು ಮಾತ್ರ ಸಾಕತಕ್ಕದ್ದು. ಬೇರೆ ಯಾವುದೇ ನ್ನು ಸಾಕತಕ್ಕದ್ದಲ್ಲ. ಇದು ರಾಜಾಜ್ಞೆ."

ಜ್ಞೆಯನ್ನು ಕೇಳಿದ ಜನರು ಹೌಹಾರಿದರು. ಇದು ೊರೆಯ ಮತ್ತೊಂದು ಹುಚ್ಚುತನ ಎಂದು ಜನ ಕೊಂಡರು. ಕುರಿ, ಕೋಳಿ, ದನ-ಕರುಗಳನ್ನು ಹುಲಿ, ಸಿಂಹ, ಚಿರತೆಗಳನ್ನು ಸಾಕುವುದೆ? ದರೂ ಉಂಟೆ? ಎಂದು ಹಣೆ, ಹಣೆ ೊಂಡರು. ಎಲ್ಲರಿಗೂ ದೊರೆ ಮತ್ತು ಅವನ ೆ ಮೇಲೆ ಬಹಳ ಸಿಟ್ಟು ಬಂತು. ಆದರೆ ಯನ್ನು ಪಾಲಿಸದಿದ್ದರೆ ಸೆರೆಮನೆ ವಾಸ ಎಂದು ಮ್ಮಲ್ಲಿರುವ ಎಲ್ಲಾ ಜಾನುವಾರುಗಳನ್ನು ಕೋಟೆಗೆ ು. ಕೆಲವರು ಎಲ್ಲಾ ಜಾನುವಾರುಗಳನ್ನು ಕೊಡದೆ ಯಾರಿಗೂ ಗೊತ್ತಾಗದ ಹಾಗೆ ಬಚ್ಚಿಟ್ಟುಕೊಂಡರು.

ೋಟೆಯೊಳಗೆ ಸಾವಿರಾರು ಜಾನುವಾರುಗಳು ಬಂದು ು. ಆದರೆ ದೊರೆಗೆ ಈಗ ಹೊಸ ತಲೆನೋವು ಾಯಿತು. ಇಷ್ಟೊಂದು ಕುರಿ, ಕೋಳಿ, ುಗಳನ್ನು ಇಟ್ಟುಕೊಂಡು ಏನು ಮಾಡೋದು? ಮಂತ್ರಿಯನ್ನು ಇದರ ಬಗ್ಗೆ ಕೇಳಿದಾಗ ಅವನು "ದೊರೆಗಳೆ, ನೀವು ಚಿಂತೆ ಮಾಡಬೇಡಿ. ಈ ಜಾನುವಾರುಗಳನ್ನು ನಮ್ಮ ವಾಸ್ತುಶಾಸ್ತ್ರಿ ಮತ್ತು ುತರು ನಡೆಸುವ ಪಿತೃಪಕ್ಷ, ಹೋಮ, ಹವನ, ರಾಜಸೂಯಯಾಗದಲ್ಲಿ ನಮ್ಮ ದೇವರಿಗೆ ಬಲಿ ಯ್ತು, ಧರ್ಮೋ ರಕ್ಷತಿ ರಕ್ಷಿತಃ ಅಂತ ಕೇಳಿಲ್ಲವೆ. ರ್ಯಗಳು ನಿಲ್ಲಬಾರದು". ದೊರೆ ಈ ಸೂಚನೆಗೆ ಒಪ್ಪಿದ. ರಾಜಸೂಯಯಾಗ, ಹೋಮ ಮತ್ತು ಯಜ್ಞಕ್ಕೆ ಕೋಟೆಯಲ್ಲಿರುವ ಜಾನುವಾರುಗಳನ್ನು ಬಲಿ ಕೊಡಲು ವ್ಯವಸ್ಥೆ ಮಾಡಿದ.

ಬಲಿ ಕೊಡುವುದಕ್ಕಿಂತ ಮೊದಲಿಗೆ ಒಂದು ಕುರಿಯನ್ನು ಬಲಿಪೀಠಕ್ಕೆ ಕರೆಯ ಲಾಯಿತು. ಆ ಕುರಿ ಬಹಳ ಚಾಲಾಕಿಯಿತ್ತು. ಜ್ಯೋತಿಷ್ಯದ ಬಗ್ಗೆ ದೊರೆಯಲ್ಲಿ ಇದ್ದ ದೌರ್ಬಲ್ಯ ವನ್ನು ತಿಳಿದಿದ್ದ ಆ ಕುರಿ ತಾನು ಬಲಿಯಾಗುವುದನ್ನು ತಪ್ಪಿಸಿಕೊಳ್ಳಲು ಒಂದು ಉಪಾಯ ಹೂಡಿತು. ಇನ್ನೇನು ಕಟುಕ ಅದರ ತಲೆಯನ್ನು ಕಡಿಯಬೇಕು ಅನ್ನುವಷ್ಟರಲ್ಲಿ ಅದು ಒಮ್ಮೆ ಗಹಗಹಿಸಿ ನಕ್ಕಿತು. ಮರುಕ್ಷಣ ಗೋಳೋ ಅಂತ ಅತ್ತಿತು. ಇದ್ಯಾಕೆ ಈ ಕುರಿ ಹೀಗೆ ನಕ್ಕು, ಅಳುತ್ತಿದೆ ಎಂದು ಕಟುಕ ಆಶ್ಚರ್ಯ ಪಟ್ಟ. ಆತ ಕುರಿಯನ್ನು, "ಎಲೈ, ಕುರಿಯೆ. ನಕ್ಕಿದ್ದು ಯಾಕೆ? ನಂತರ ಅತ್ತಿದ್ದು ಯಾಕೆ?" ಎಂದು ಗದರಿಸಿ ಕೇಳಿದ. ಕುರಿ ಒಂದಷ್ಟು ವಿಚಲಿತವಾಗದೆ ಹೇಳಿತು, "ನನ್ನನ್ನು ನಿನ್ನ ದೊರೆಯ ಬಳಿ ಕರೆದುಕೊಂಡು, ಮತ್ತೊಮ್ಮೆ ಈ ಪ್ರಶ್ನೆಯನ್ನು ಕೇಳು. ಆಗ ಎಲ್ಲವನ್ನು ಹೇಳುತ್ತೇನೆ". ಕಟುಕ ಕುರಿಯನ್ನು ದೊರೆಯ ಬಳಿ ತೆಗೆದುಕೊಂಡು ಹೋದ. ನಡೆದುದನ್ನೆಲ್ಲಾ ಹೇಳಿದ.

ದೊರೆಗೆ ಆಶ್ಚರ್ಯವಾಗಿ ಕೇಳಿದ, "ಈಗ ಹೇಳು. ನೀನು ನಕ್ಕಿದ್ದು ಯಾಕೆ? ನಂತರ ಅತ್ತಿದ್ದು ಯಾಕೆ. ಇದು ನನ್ನ ಆಜ್ಞೆ"

ಕುರಿ ದೊರೆಯ ಮುಂದೆ ತಲೆತಗ್ಗಿಸಿ, ವಿನಯಪೂರ್ವಕವಾಗಿ ಹೇಳಿತು, "ದೊರೆ, ನಕ್ಕಿದ್ದು ಯಾಕೆ ಅಂದ್ರೆ. ನನ್ನ ತಲೆಯನ್ನು ಕಡಿದಾದ ಮೇಲೆ ನನ್ನ ಪ್ರಾಣಿ ಜನ್ಮ ಮುಗಿಯುತ್ತದೆ. ನನಗೆ ಮುಕ್ತಿ ಸಿಗುತ್ತದೆ. ನಾನು ಹಿಂದಿನ ಜನ್ಮದಲ್ಲಿ ನಿನ್ನ ಹಾಗೆ ನೂರಾರು ಪ್ರಾಣಿಗಳನ್ನು ಹೋಮ, ಹವನಕ್ಕೆ ಅಂತ ಬಲಿಕೊಟ್ಟೆ. ನಾನು ಮಾಡಿದ ಪಾಪಕ್ಕೆ ಅನೇಕ ಜನ್ಮಗಳನ್ನು ತಾಳಿ, ಈ ರೀತಿ ನೂರಾರು ಬಾರಿ ನನ್ನ ತಲೆಯನ್ನು ಕಡಿಸಿಕೊಂಡಿದ್ದೇನೆ. ಈಗ ಈ ಜನ್ಮದಲ್ಲಿ ಕುರಿಯಾಗಿ ಹುಟ್ಟಿ, ನಿನ್ನ ಕಟುಕನ ಕೈಯಲ್ಲಿ ಬಲಿಯಾಗುವ ದುಸ್ಥಿತಿಗೆ ಬಂದಿದ್ದೇನೆ. ಈ ಕಟುಕ ನನ್ನನ್ನು ಕಡಿದಾದ ಮೇಲೆ ನನಗೆ ಜನ್ಮಜನ್ಮಾಂತರಗಳಿಂದ ಮುಕ್ತಿ ಸಿಗುತ್ತದೆ. ಹಾಗಾಗಿ ಸಂತೋಷದಿಂದ ನಕ್ಕಿದೆ. ಅತ್ತಿದ್ದು ಯಾಕೆ ಅಂದ್ರೆ ನೀನು ನನ್ನನ್ನು ಮತ್ತು ಇತರ ಸಹ-ಪ್ರಾಣಿಗಳನ್ನು ಬಲಿ ಕೊಡುವುದರಿಂದ ನೀನು ಕೂಡ ಮುಂದಿನ ಅನೇಕ ಜನ್ಮಗಳಲ್ಲಿ ಪ್ರಾಣಿಯಾಗಿ ಹುಟ್ಟುತ್ತೀಯ. ನೀನು ಕೂಡ ನನ್ನ ಹಾಗೆ ತಲೆಯನ್ನು ಕಡಿಸಿಕೊಳ್ಳುತ್ತೀಯ. ಅದನ್ನು ಜ್ಞಾಪಿಸಿಕೊಂಡು ನಿನ್ನ ಮೇಲೆ ನನಗೆ ಕನಿಕರ ಬಂತು. ನಿನ್ನ ದುಸ್ಥಿತಿಯನ್ನು ನೆನೆದು ಅಳು ಬಂತು."

ಕುರಿಯ ಮಾತು ಕೇಳಿ ದೊರೆ ತಣ್ಣಗೆ ನಡುಗಿದ. ಪುರೋಹಿತ, ಜ್ಯೋತಿಷಿಗಳು ಈಗಾಗಲೇ ಜನ್ಮಾಂತರದ ಬಗ್ಗೆ ದೊರೆಯ ಮೆದುಳನ್ನು ಕೆಡಿಸಿದ್ದರು. ಹಾಗಾಗಿ ಕುರಿ ಹೇಳುವುದೆಲ್ಲಾ ನಿಜ ಎಂದು ಐಲು ದೊರೆ ನಂಬಿದ.

ಪ್ರಧಾನ ಮಂತ್ರಿ ಮತ್ತು ಪುರೋಹಿತರ ಮಾತು ಕೇಳಿ ಈ ಪ್ರಾಣಿಗಳನ್ನು ಬಲಿ ಕೊಡುತ್ತಿದ್ದೇನಲ್ಲಾ?! ಅದರ ಮಾತು ಕೇಳಿ ನಾನು ಹಾಳಾಗಿಹೋಗುತ್ತಿದ್ದೆ ಎಂದು ಅವರನ್ನು ಮನಸ್ಸಿನಲ್ಲಿ ಬೈದುಕೊಂಡು ಎಲ್ಲಾ ಪ್ರಾಣಿಗಳ ಬಲಿಯನ್ನು ನಿಲ್ಲಿಸಲು ಆದೇಶ ಹೊರಡಿಸಿದ. ಕೋಟೆಯಲ್ಲಿನ ಎಲ್ಲಾ ಪ್ರಾಣಿಗಳು ತಮ್ಮ [illegible] ಉಳಿಯಿತು ಎಂದು ಕೇಕೆ ಹಾಕಿದವು. ಕುರಿಯ ಚಾಲಾಕಿತನವನ್ನು ಕೊಂಡಾಡಿದವು. ಆದರೆ ದೊರೆಗೆ ಮತ್ತೆ ಒಂದು ಸಮಸ್ಯೆ ಎದುರಾಯಿತು. ಬಲಿ ಕೊಡಲು ನಿಲ್ಲಿಸಿದ ಮೇಲೆ ಕೋಟೆಯೊಳಗಿನ ಪ್ರಾಣಿಗಳನ್ನು ಏನು ಮಾಡುವುದು? ಪ್ರಧಾನ ಮಂತ್ರಿ ದೊರೆಗೆ ಒಂದು ಉಪಾಯ ಹೇಳಿದ. ಯಾರ್‍ಯಾರು ಜಾನುವಾರುಗಳನ್ನು ಇಲ್ಲಿಗೆ ಸಾಗಿಸಿದ್ದಾರೋ ಅವರಿಗೆ ಅವುಗಳನ್ನು ವಾಪಾಸು ಕೊಡುವುದು ಎಂದು ನಿರ್ಧಾರ ವಾಯಿತು. ಆದರೆ ಯಾವ ಕುರಿ, ಕೋಳಿ, ದನ-ಕರುಗಳು ಯಾರಿಗೆ ಸೇರಿದ್ದು, ಎಷ್ಟು ಸೇರಿದ್ದು ಎಂದು ನಿರ್ಧರಿಸೋದಿಕ್ಕೆ ಆಗದೆ ದೊರೆ ಗೊಂದಲಮಯವಾದ. ರಾಜ್ಯದ ಜನರೆಲ್ಲ ಪ್ರಾಣಿಗಳು ನಮ್ಮದು, ಅವರದು ಎಂದು ಕಿತ್ತಾಡತೊಡಗಿದರು. ರಾಜ್ಯದಲ್ಲಿ ಅರಾಜಕತೆ ಉಂಟಾಯಿತು. ಏನು ಮಾಡೋದು ಎಂದು ಗೊತ್ತಾಗದೆ ದೊರೆ ತಲೆ ಮೇಲೆ ಕೈ ಇಟ್ಟುಕೊಂಡು ಕೂತ. ಮಂತ್ರಿಗಳು ಮತ್ತು ಜ್ಯೋತಿಷಿಗಳ ಮಾತು ಕೇಳಿ ಮಣ್ಣು ತಿಂದೆ ಎಂದು ಪಶ್ಚಾತ್ತಾಪಪಟ್ಟ.

ಆ ದಿನ ರಾತ್ರಿ ಚಾಲಾಕಿ ಕುರಿ ಎಲ್ಲಾ ಪ್ರಾಣಿಗಳ ರಹಸ್ಯ ಸಭೆ ಕರೆದು ಹೀಗೆ ಹೇಳಿತು: "ಗೆಳೆಯರೆ, ನಮ್ಮ ಐಲು ದೊರೆ ಮತ್ತು ರಾಜ್ಯದ ಜನರ ನಡುವೆ ನಮ್ಮ ಜೀವನ ಕಾಲ್ಚೆಂಡಿನ ಹಾಗೆ ಆಗಿದೆ. ಹೀಗೆ ಆದರೆ ನಮ್ಮ ಜೀವನ ಅಯೋಮಯ. ಹಾಗಾಗಿ ನನ್ನ ಮಾತು ಕೇಳಿ. ಯಾರಿಗೂ ಸಿಗದ ಹಾಗೆ ನಾವೆಲ್ಲರು ಈ ಕೋಟೆಯಿಂದ ತಪ್ಪಿಸಿಕೊಂಡು ದೂರ ಹೋಗಿಬಿಡೋಣ". ಎಲ್ಲಾ ಪ್ರಾಣಿಗಳು ಕುರಿಯ ಉಪಾಯವನ್ನು ಒಪ್ಪಿಕೊಂಡು ಆ ರಾತ್ರಿ ಯಾರಿಗು ಗೊತ್ತಾಗದೆ ಹಾಗೆ ಕೋಟೆಯನ್ನು ಒಡೆದು, ಚೆಲ್ಲಾಪಿಲ್ಲಿಯಾಗಿ ತಪ್ಪಿಸಿಕೊಂಡು ಓಡಿಹೋದವು.

ಮರುದಿನ ನಡೆದ ಎಲ್ಲಾ ಸಂಗತಿಗಳು ಜನರಿಗೆ ಗೊತ್ತಾಯಿತು. ಮೊದಲೆ ಐಲು ದೊರೆಯ ಹುಚ್ಚುತನದಿಂದ ಬೇಸತ್ತಿದ್ದ ಜನ ಈಗ ತಮ್ಮ ಎಲ್ಲಾ ಸಾಕುಪ್ರಾಣಿಗಳು ತಪ್ಪಿಸಿಕೊಂಡು ಓಡಿಹೋಗಿವೆಯೆಂದು ತಿಳಿದು ದೊರೆಯ ಮೇಲೆ ಕೆಂಡಮಂಡಲವಾದರು. ಎಲ್ಲರೂ ಕೋಟೆಗೆ ಲಗ್ಗೆ ಹಾಕಿ ದೊರೆ ಮತ್ತು ಅವನ ಮಂತ್ರಿ, ಪ್ರಧಾನ ಮಂತ್ರಿ, ಜ್ಯೋತಿಷ್ಯ ಪಂಡಿತರನ್ನು ಥಳಿಸಿದರು. ಉಟ್ಟ ಬಟ್ಟೆಯಲ್ಲೆ ಅವರು ರಾಜ್ಯ ಬಿಟ್ಟು, ಪಲಾಯನವಾಗುವಂತೆ ಮಾಡಿದರು.

*****

ರಾಜ್ಯದಲ್ಲಿ ಈಗ ಜನಗಳೆ ಹೊಸ ದೊರೆಯನ್ನು ಆಯ್ಕೆ ಮಾಡಿದ್ದಾರೆ. ತಮಗೆ ಬೇಕಾದ ಪ್ರಾಣಿ, ಪಶು, ಪಕ್ಷಿಗಳನ್ನು ಯಾವುದೇ ತೊಂದರೆಯಿಲ್ಲದೆ ಸಾಕುತ್ತಿದ್ದಾರೆ.


(ಒಂದು ಜಾತಕ ಕತೆಯಿಂದ ಪ್ರೇರೇಪಣೆಗೊಂಡದ್ದು)

■ ಡಾ.ವಿಜಯಕುಮಾರ ಎಂ.ಬೋರಟ್ಟಿ

ಮೋದಿಯ 'ದೇಶಸೇವೆ'ಯ ಪರಿ

ಮೋದಿಯವರು ದೇಶಸೇವೆಗಾಗಿ ಮನೆ ಮಠ ು ತೊರೆದಿದ್ದು ಅಕ್ಷರಶಃ ನಿಜ. ಅವರು ಗಾಗಿ ಮೊಟ್ಟ ಮೊದಲು ಮಾಡಿದ ಕೆಲಸವೆಂದರೆ ಲ್ಲಿ ಬೇಕೆಂದೇ ಫೇಲ್ ಆಗಿದ್ದು. ಅದಕ್ಕಾಗಿ ಯಿ ಬೈದರೆಂದು 17ನೇ ವರ್ಷಕ್ಕೆ ಮೋದಿ ೊಂದಿಗೆ ಜಗಳಾಡಿ ಮನೆ ಬಿಟ್ಟು ಓಡಿಹೋಗಿದ್ದು ಸೇವೆಯೇ. ಹಾಗೆ ಓಡಿಹೋಗಿ ಒಂದು ಗುಜರಾತಿ ಕಂಪನಿ ಸೇರಿದ್ದು ಸಹ ದೇಶಸೇವೆಯೇ ಆಗಿತ್ತು. ವರ್ಷ ಗುಜರಾತಿ ನಾಟಕ ಕಂಪನಿಯಲ್ಲಿ ದುಡಿದು ತನ್ನ ತವರು ವಡ್ನಾಗರ್ ಎಂಬ ಊರಿಗೆ ಂದರೂ ತನ್ನ ತಂದೆಯ ಮನೆಗೆ ಹೋಗದೇ ಮನೆ ಮಾಡಿ ತಾನು ಹಿಮಾಲಯದ ಗುಹೆಯಲ್ಲಿ ರ್ಷ ತಪಸ್ಸು ಮಾಡಿ ಬಂದಿರುವುದಾಗಿ ಬೂಸಿ ಸಹ ದೇಶಸೇವೆ ಹಾಗೂ ಧರ್ಮದ ಸೇವೆ ಂತರ ತನ್ನ ಸ್ನೇಹಿತನೊಂದಿಗೆ ಅಲ್ಲಿಯ ಬಸ್ ಲ್ಲಿ ಕ್ಯಾಂಟೀನ್ ತೆರೆದಿದ್ದು ಸಹ ದೇಶಸೇವೆ ಆಗಿತ್ತು. ಸ್ ಸ್ಟ್ಯಾಂಡ್ ಕ್ಯಾಂಟೀನ್‌ನಿಂದ ಕೈತುಂಬಾ ಿದ್ದರೂ ತಂಗಿಯ ಮದುವೆಗೆ ಚಿಕ್ಕಾಸೂ ಸಹಾಯ ದ್ದು ಸಹ ಮೋದಿಯ ದೇಶಸೇವೆಯೇ ಆಗಿತ್ತು. ಲ್ಲಿ ತಂಗಿ ವಸಂತಿ ಬೆಹೆನಳ ಮದುವೆಗೆ ಅಕ್ಷತೆ ಹೋಗದಿದ್ದದ್ದು ಸಹ ದೇಶಸೇವೆ ಅಲ್ಲವೇ. ರಿಕೊಂಡಾಗ ಮೋದಿ ಅದೇ ಊರಲ್ಲಿ ಇದ್ದರೂ ಸುಪುತ್ರನಂತೆ ಮಗನ ಕೊನೆಯ ಕರ್ತವ್ಯವಾಗಿ ಬಾಯಿಗೆ ತುಳಸಿ ನೀರು ಬಿಡಲು ಸಹ ುವುದು ತ್ಯಾಗಮಯ ದೇಶಸೇವೆ ಆಗಿತ್ತು. ತಂದೆಯ ಮರಣದ ನಂತರ ಇಡೀ ಕುಟುಂಬದ ಸಂಪೂರ್ಣ ಹೊರೆ ಅಣ್ಣ ಸೋಮಾಭಾಯಿ ಮೇಲೆ ಬಿದ್ದರೂ ಮೋದಿಭಾಯಿ ಉತ್ತಮವಾಗಿದ್ದ ತನ್ನ ಕ್ಯಾಂಟೀನ್ ಆದಾಯದಿಂದ ತನ್ನ ಅಣ್ಣನಿಗೆ ಅಥವಾ ತಾಯಿಗೆ ಚಿಕ್ಕಾಸೂ ಸಹಾಯ ಮಾಡದಿದ್ದದ್ದು ಸಹ ದೇಶಸೇವೆಯೇ ಆಗಿತ್ತು.

ನಕಲಿ ಬಿಎ ಮತ್ತು ಖೋಟಾ ಎಮ್‌ಎ ಪದವಿಯ ಸರ್ಟಿಫಿಕೇಟುಗಳನ್ನು ಪಡೆದಿದ್ದು ಸಹ ದೇಶಸೇವೆಯೇ ಆಗಿತ್ತು. ಆರೆಸ್ಸೆಸ್ ಶಾಖೆಯಲ್ಲಿ ಮೋದಿ ನೆಲ ಗುಡಿಸುವ ಚಿತ್ರವುಳ್ಳ ಮಾರ್ಫಿಂಗ್ ಮಾಡಿದ ನಕಲಿ ಫೋಟೋ ಪತ್ರಿಕೆಗಳಲ್ಲಿ ಹಾಕಿಸಿದ್ದು ಸಹ ದೇಶಸೇವೆ. ಅಂತೆಯೇ



ಭಯೋತ್ಪಾದಕರು ಎಂದು ಆರೋಪಿಸಿ ಅಮಾಯಕರ ನಕಲಿ ಎನ್‌ಕೌಂಟರ್ ಮಾಡಿದ್ದು ಸಹ ದೇಶಸೇವೆ ಅಲ್ಲದೇ ಇನ್ನೇನು. ಗುಜರಾತಿನಲ್ಲಿ ಬಡ ರೈತರ ಜಮೀನು ಕಿತ್ತುಕೊಂಡು ದೊಡ್ಡ ಉದ್ಯಮಪತಿಗಳಿಗೆ ಧಾರೆ ಎರೆದಿದ್ದು ಸಹ ದೇಶಸೇವೆಯೇ. ಓಎನ್‌ಜಿಸಿಯಿಂದ 50 ಸಾವಿರ ಕೋಟಿಯ ಗ್ಯಾಸ್ ಕದಿಯಲು ಅಂಬಾನಿಗೆ ಸಹಾಯ ಮಾಡಿದ್ದು ಸಹ ಮೋದಿಯ ಅತೀದೊಡ್ಡ ದೇಶಸೇವೆ ಆಗಿದೆ. 20 ಸಾವಿರ ಕೋಟಿಯ ಗುಜರಾತ್ ಗ್ಯಾಸ್ ಹಗರಣ ಮೋದಿಯ ಮತ್ತೊಂದು ಭಾರಿ ದೇಶಸೇವೆ!

ಎಲ್ಲಕ್ಕಿಂತ ಮಿಗಿಲಾಗಿ ಮೋದಿಯ ಎಲ್ಲಾ ತಪ್ಪುಗಳಿಗೆ ಪರದೆ ಹಾಕಿ ಬೆಂಬಲಕ್ಕೆ ನಿಂತ ಅಡ್ವಾಣಿಯನ್ನೇ ಕೊನೆಗೆ ಒದ್ದು ಮೂಲೆಯಲ್ಲಿ ಕೂಡಿಸಿ ಪಕ್ಷವನ್ನು ಕೈವಶ ಮಾಡಿಕೊಂಡಿದ್ದು ಸಹ ಮೋದಿಯ ಪ್ರಚಂಡ ದೇಶಸೇವೆ ಆಗಿತ್ತು. ಎಲ್ಲಕ್ಕಿಂತ ದೊಡ್ಡ ದೇಶಸೇವೆ ಎಂದರೆ ನೋಟು ರದ್ಧತಿಯ ಬಗ್ಗೆ ತನ್ನ ಎಲ್ಲಾ ಚೇಲಾ ಉದ್ಯಮಿಗಳಿಗೆ ಮತ್ತು ಪಕ್ಷದವರಿಗೆ ಮೊದಲೇ ತಿಳಿಸಿ ಅವರ ಕಪ್ಪು ಹಣವೆಲ್ಲಾ ಚಿನ್ನ-ಸ್ಥಿರಾಸ್ತಿಯಲ್ಲಿ ಬದಲಾಯಿಸಿದ ಮೇಲೆ ದೇಶದ ಬಡಜನರ ಮೇಲೆ ನೋಟು ನಿಷೇಧ ಹೇರಿ 130 ಕೋಟಿ ಜನರನ್ನು ತಮ್ಮ ದೈನಂದಿನ ಕೆಲಸ ಬಿಡಿಸಿ ಅರೆ-ಹೊಟ್ಟೆಯಲ್ಲಿ ಬ್ಯಾಂಕಿನೆದುರು ಲೈನು ಹಿಡಿಸಿ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಅಲ್ಲೋಲಕಲ್ಲೋಲ ಮಾಡಿ ತನ್ನ 56 ಇಂಚು ಎದೆ ತೋರಿಸಲು ಹೋಗಿ 106 ಬಡ ಜನರ ದುರ್ಮರಣಕ್ಕೆ ಕಾರಣವಾಗಿದ್ದು ಸಹ ಮೋದಿಯ ಭೀಕರ ದೇಶಸೇವೆ ಆಗಿದೆ. ಮೋದಿ ಇಷ್ಟೆಲ್ಲಾ ನಿಸ್ವಾರ್ಥ ದೇಶಸೇವೆ ಮಾಡಿಯೂ ನಮ್ಮ ವಿರೋಧ ಪಕ್ಷಗಳು ಪಾಪ ಅವರನ್ನು ಸಾರ್ವಜನಿಕ ಸಭೆಯಲ್ಲಿ ಬಿಕ್ಕಳಿಸುವಂತೆ ಮಾಡುತ್ತಿರುವರಲ್ಲಾ ಅದು ಸರಿಯೇ? ವಿರೋಧ ಪಕ್ಷಗಳಿಗೆ ನಾಚಿಕೆ ಆಗಬೇಡವೇ!

■ ವಿಜಯ ಬಿ ಕಾಂಬಳೆ, ಕಲ್ಲಾಪುರ

"ವ್ಯವಸ್ಥಿತ ಲೂಟಿ, ಕಾನೂನುಬದ್ಧವಾಗಿಸಿದ ದರೋಡೆ

ಮೋದಿ ಸರ್ಕಾರದ ನೋಟು ರದ್ಧತಿ ಕಾರ್ಯಕ್ರಮ ದೇಶಾದ್ಯಂತ ಅಲ್ಲೋಲಕಲ್ಲೋಲ ಸೃಷ್ಟಿಸಿರುವ ಸಂದರ್ಭದಲ್ಲಿ ಭಾರತದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಮೊನ್ನೆ ನವಂಬರ್ 24ರಂದು ರಾಜ್ಯಸಭೆಯಲ್ಲಿ ಆಡಿದ ಮಾತುಗಳು ಭಾರಿ ಪ್ರಾಮುಖ್ಯತೆ ಪಡೆಯುತ್ತವೆ. ಅಂತಾರಾಷ್ಟ್ರೀಯ ಖ್ಯಾತಿಯ ಆರ್ಥಿಕತಜ್ಞರಾಗಿರುವ ಡಾ. ಸಿಂಗ್‌ರ ಭಾಷಣ ಚುಟುಕಾಗಿತ್ತು; ಆದರೆ ತುಂಬಾ ಅರ್ಥಗರ್ಭಿತವಾಗಿತ್ತು, ನೋಟು ರದ್ಧತಿ ಕಾರ್ಯಕ್ರಮದ ಅನುಷ್ಠಾನದಲ್ಲಿ "ಭಾರಿ ವೈಫಲ್ಯ ಆಗಿದೆ. ಅದೊಂದು ವ್ಯವಸ್ಥಿತ ಲೂಟಿ, ಕಾನೂನುಬದ್ಧವಾಗಿಸಿದ ದರೋಡೆ" ಎಂದ ಅವರ ಮಾತಿನ ಒಳಾರ್ಥ ಅಂದು ನಿಗೂಢವಿದ್ದರೂ ಇದೀಗ ಸ್ಪಷ್ಟವಾಗತೊಡಗಿದೆ. ಮೋದಿ ಸರ್ಕಾರದ ನೋಟು ರದ್ಧತಿ ಯಾವ ರೀತಿಯಲ್ಲಿ ಬಡವರ ಹಣವನ್ನು ಶ್ರೀಮಂತರ ಜೇಬಿಗೆ, ಕಾರ್ಪೊರೇಟುಗಳ ತಿಜೋರಿಗೆ ವರ್ಗಾಯಿಸಲಿದೆ ಎಂಬುದನ್ನು ಶಂಕರ್ ಗೋಪಾಲಕೃಷ್ಣನ್ ತಮ್ಮ ಒಂದು ಲೇಖನದಲ್ಲಿ (**Demonetisation is a permanent transfer of wealth from the poor to the rich**) ವಿವರಿಸಿದ್ದಾರೆ. ಅದರ ಭಾವಾನುವಾದ ಇಲ್ಲಿದೆ:

ಮೋದಿ ಸರ್ಕಾರ ರೂ. 500 ಮತ್ತು ರೂ. 1000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸಿದ ಲಾಗಾಯ್ತು ಅದರ ಉಪಯುಕ್ತತೆ ಮತ್ತು ಪರಿಣಾಮಗಳ ಕುರಿತು ಅನೇಕ ಚರ್ಚೆಗಳು ನಡೆದಿವೆ. ಇನ್ನೂ ನಡೆಯುತ್ತಿವೆ.


ಅಥವಾ ಅದನ್ನು ಬಹಿರಂಗಪಡಿಸಬೇಕಾಗುತ್ತದೆ. ಏನಿದ್ದರೂ ವಿವಾಹಿತ ಮಹಿಳೆ ತನ್ನ ಭದ್ರತೆಯನ್ನು ಕಳೆದುಕೊಳ್ಳುವುದಂತೂ ನಿಶ್ಚಿತ. ಪರಿಣಾಮವಾಗಿ ಆಕೆಯನ್ನು ಶೋಷಣೆ ಮಾಡುವುದು ಇನ್ನಷ್ಟು ಸುಲಭವಾಗುತ್ತದೆ.


ಅಸಮಾನ ಪರಿಣಾಮಗಳ ಇನ್ನೊಂದು ಉದಾಹರಣೆ ಇಲ್ಲಿದೆ. ಈಗ ನೋಟು ರದ್ಧತಿಯಿಂದಾಗಿ ಸಹಕಾರಿ ಬ್ಯಾಂಕುಗಳ ಕೆಲಸಕಾರ್ಯಗಳು ಹೆಚ್ಚುಕಡಿಮೆ ಸ್ಥಗಿತವಾಗಿವೆ. ಅವುಗಳಿಗೆ ನಗದು ಬದಲಾವಣೆ ಮಾಡಲು ಅನುಮತಿ ನೀಡಲಾಗಿಲ್ಲ, ಪರಿಣಾಮವಾಗಿ ಬ್ಯಾಂಕುಗಳಿಂದ ರೈತರಿಗೆ ಬಿತ್ತನೆ ಅಥವಾ ಬೆಳೆ ಮಾರಾಟಕ್ಕೆ ಬೇಕಾದ ನಗದು ಸಿಗದಾಗ ಅವರು ಸಾಲಿಗರ ಮುಂದೆ ಕೈಯೊಡ್ಡಬೇಕಾದ ಪ್ರಸಂಗಗಳು ಹೆಚ್ಚುತ್ತವೆ. ಆ ದುಬಾರಿ ಬಡ್ಡಿಯ ಸಾಲಗಳು ಅಪಾಯಕಾರಿ ಏಕೆಂದರೆ ಮರುಪಾವತಿ ಮಾಡಲಾಗದಿದ್ದರೆ ಭೂಮಿ ಕಳೆದುಕೊಳ್ಳಬೇಕಾಗುತ್ತದೆ. ಕೆಲವರಂತೂ ಆತ್ಮಹತ್ಯೆಯಂತಹ ಅತಿರೇಕದ ಕ್ರಮಗಳಿಗೆ ಮುಂದಾಗಬಹುದು.

ಉತ್ಪಾದನಾ ವಲಯದಲ್ಲೂ ಇದೇ ತೆರನಾದ ಪರಿಸ್ಥಿತಿ ಇದೆ. ಅನೇಕ ಕಿರು ಉದ್ದಿಮೆಗಳು ಈಗಾಗಲೆ ನೆಲಕಚ್ಚಿವೆ. ಇನ್ನುಳಿದ ಕಾರ್ಖಾನೆಗಳು ಮುಚ್ಚುವ ಹಂತದಲ್ಲಿವೆ. ಅಸಂಖ್ಯಾತ ಕಾರ್ಮಿಕರನ್ನು ಮನೆಗೆ ಕಳುಹಿಸಲಾಗುತ್ತಿದೆ. ಅಲ್ಲಿಯೂ ಮೊದಲ ಪ್ರಹಾರ ಬೀಳುವುದೇ ವಲಸೆ ಕಾರ್ಮಿಕರ ಮೇಲೆ. (ನವಂಬರ್ 28ರ ವರೆಗಿನ ವರ್ತಮಾನಗಳ ಪ್ರಕಾರ ಗುಜರಾತ್ ರಾಜ್ಯದ ವಡೋದರದಲ್ಲಿ ಸುಮಾರು 18,000 ಸಣ್ಣ ಕೈಗಾರಿಕೆಗಳು ಸಂಕಟಕ್ಕೆ

ಸಾಲ ಪಡೆದವರು. ಸಾಲದ ಪ್ರಮಾಣ ದೊಡ್ಡದಿದ್ದಷ್ಟೂ ಲಾಭ ಜಾಸ್ತಿ. 2015ರ ಮಾರ್ಚ್ ತನಕದ ಅಂಕಿಅಂಶಗಳ ಪ್ರಕಾರ 10 ಅತಿದೊಡ್ಡ ಸಾಲದಾತ ಕಾರ್ಪೊರೇಟುಗಳ ಒಟ್ಟು ಸಾಲ ರೂ 7.30 ಲಕ್ಷ ಕೋಟಿಯಷ್ಟಿದೆ. (ಮೋದಿ ಸರ್ಕಾರ 2014-15 ಮತ್ತು 2015-16ರ ಸಾಲುಗಳಲ್ಲಿ ಕಾರ್ಪೊರೇಟುಗಳಿಗೆ ವರ್ಷಕ್ಕೆ ಸರಾಸರಿ ರೂ 5.90 ಲಕ್ಷ ಕೋಟಿ ಮೌಲ್ಯದ ತೆರಿಗೆ ವಿನಾಯಿತಿಗಳನ್ನು ದಯಪಾಲಿಸಿರುವುದು ಬೇರೆ!). ಈಗ ಬ್ಯಾಂಕುಗಳ ಬಡ್ಡಿದರ ಶೇಕಡಾ 0.1 ರಷ್ಟು ಕಡಿಮೆ ಆದರೂ ಇವರಿಗೆಲ್ಲ ಒಟ್ಟು 7.30 ಲಕ್ಷ ಕೋಟಿ X 0.1 = ರೂ 7300 ಕೋಟಿ ಫಾಯಿದೆಯಾಗಲಿದೆ. ಇದೇನೂ ಅವರ ಅದೃಷ್ಟ ಖುಲಾಯಿಸಿ ಆಕಾಶದಿಂದ ಉದುರಿದ ಇನಾಮೆಂದು ಭಾವಿಸಬೇಕಾಗಿಲ್ಲ, ಇದಾಗುತ್ತಿರುವುದು ನಮ್ಮನಿಮ್ಮಂತಹ ಕೋಟ್ಯಂತರ ಮಂದಿಗೆ ತಮ್ಮದೆ ದುಡ್ಡನ್ನು ಮುಟ್ಟಲು ಅಸಾಧ್ಯವಾಗಿರುವುದರಿಂದ. ಇದರರ್ಥ ನಮ್ಮ ಹಣದ ಪ್ರಯೋಜನ ಪಡೆಯುತ್ತಿರುವವರು ಅದರ ಅಸಲಿ ಮಾಲಿಕರಾದ ನಾವಲ್ಲ, ಬ್ಯಾಂಕುಗಳು ಮತ್ತು ಕಾರ್ಪೊರೇಟು ಕುಳಗಳು.

ವಾಸ್ತವದಲ್ಲಿ ಇದಕ್ಕಿಂತಲೂ ದೊಡ್ಡ ಪ್ರಮಾಣದ ವರ್ಗಾವಣೆಗಳು ನಡೆಯುತ್ತಿವೆ. ಉದಾಹರಣೆಗೆ ಬ್ಯಾಂಕುಗಳಿಗೆ ಜಮೆಯಾದ ನೋಟುಗಳೆಲ್ಲವನ್ನೂ ಕಪ್ಪುಹಣವೆಂದು ಭಾವಿಸಲಾಗುತ್ತಿದೆ. ಆದರೆ ಗಮನಿಸಬೇಕಾದ ಅಂಶವೆಂದರೆ ಬ್ಯಾಂಕುಗಳ ಮುಂದೆ ಸರತಿಯ ಸಾಲಿನಲ್ಲಿ ನಿಲ್ಲಲಾಗದೆ ಹಳೆಯ "ಬಿಳಿ" ನೋಟುಗಳನ್ನು ಬದಲಾಯಿಸಲು





ಅವುಗಳಲ್ಲಿ ಹೆಚ್ಚಿನವು ಭಾರತದ ಆರ್ಥಿಕತೆಯ ಪುನರುಜ್ಜೀವನ ಸಾಧ್ಯವೆ ಅಥವಾ ಅದನ್ನು ಇನ್ನಷ್ಟು ನಗದುರಹಿತವಾಗಿಸಲು ಸಾಧ್ಯವೆ ಎನ್ನುವ ಎರಡು ವಿಷಯಗಳ ಮೇಲೆ ಕೇಂದ್ರೀಕೃತವಾಗಿವೆ. ಇಲ್ಲಿ ಎರಡೂ ಗುರಿಗಳನ್ನು ತಲುಪಲು ಸಾಧ್ಯವಾದಲ್ಲಿ ಎಲ್ಲವೂ ನೆಟ್ಟಗಾಗಲಿದೆ ಎಂಬ ಸೂಚ್ಯಾರ್ಥವೊಂದು ಅಡಗಿದೆ. ಆದರೆ ಇಲ್ಲಿ ಒಂದು ಪ್ರಮುಖ ವಿಷಯವನ್ನು ಕಡೆಗಣಿಸಲಾಗಿದೆ. ಅದೇನೆಂದರೆ ನೋಟು ರದ್ಧತಿಯಿಂದ ಸಮಗ್ರ ಆರ್ಥಿಕತೆಗೆ ಏನೇ ಸಂಭವಿಸಿದರೂ ರದ್ಧತಿಯ ಅತ್ಯಂತ ಗಂಭೀರ ಪರಿಣಾಮ ಒಳಗಣ ಸಂಪನ್ಮೂಲಗಳ ಹಂಚಿಕೆಯ ಮೇಲೆ ಆಗಲಿದೆ. ನೋಟು ರದ್ಧತಿ ಎನ್ನುವುದೊಂದು ದೊಡ್ಡ ನಿರ್ವಾತ ಪ್ರದೇಶ. ಅದು ದುರ್ಬಲರ ಸಂಪನ್ಮೂಲಗಳನ್ನು ಗಬಕ್ಕನೆ ಸೆಳೆದು ಅದನ್ನು ಸಬಲರಿಗೆ ನೀಡುತ್ತದೆ. ಆದರೆ ಹಾಗೆ ಮಾಡುವಾಗ ತಾನು ತದ್ವಿರುದ್ಧವಾದುದನ್ನು ಮಾಡುತ್ತಿರುವಂತೆ ನಟಿಸುತ್ತದೆ. ಇದಕ್ಕಿಂತಲೂ ಮುಖ್ಯವಾದ ವಿಚಾರವೆಂದರೆ ಇದೊಂದು ಶಾಶ್ವತವಾದ ಸಂಪನ್ಮೂಲ ವರ್ಗಾವಣೆ. ಅರ್ಥಾತ್ ದುರ್ಬಲರಿಗೆ ತಮ್ಮ ಸಂಪನ್ಮೂಲ ಮರಳಿ ಸಿಗಲಾರದು.

ಭಾರತದ ಒಟ್ಟು ದುಡಿಯುವ ವರ್ಗದ ಪೈಕಿ ಸುಮಾರು 80ರಿಂದ 90 ಪ್ರತಿಶತದಷ್ಟು ಜನ ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುತ್ತಾರೆಂದು ಅಂದಾಜಿಸಲಾಗಿದೆ. ಇವರೆಲ್ಲರೂ ನಗದು ರೂಪದಲ್ಲಿ ವೇತನ ಸ್ವೀಕರಿಸುತ್ತಾರೆ. ಅದನ್ನು ನಗದು ರೂಪದಲ್ಲಿ ವೆಚ್ಚ ಮಾಡುತ್ತಾರೆ. ಇನ್ನು ಬ್ಯಾಂಕ್ ಖಾತೆ ಹೊಂದಿರದ ಭಾರತೀಯರ ಸಂಖ್ಯೆ ಎಷ್ಟೆಂಬ ಬಗ್ಗೆ ಹಲವು ಅಂದಾಜುಗಳಿವೆ. ಏನಿದ್ದರೂ ಅದು 16.5ರಿಂದ 23.3 ಕೋಟಿಗಳ ಮಧ್ಯೆ ಇರಬಹುದೆಂದು ತೋರುತ್ತದೆ. ನೋಟು ರದ್ಧತಿಯ ಬಳಿಕ ಉದ್ಭವಿಸಿರುವ ನಗದಿನ "ಬರಗಾಲ" ಇವರೆಲ್ಲರ ಮೇಲೆ ತನ್ನ ಪರಿಣಾಮ ಬೀರಲಿದೆ. ಆದರೆ ಅದು ಏಕಪ್ರಕಾರವಾಗಿ ಇರುವುದಿಲ್ಲ, ಬೇರೆ ಬೇರೆ ರೀತಿಗಳಲ್ಲಿ ಇರುತ್ತದೆ.

ಈ ಅಸಮಾನ ಪರಿಣಾಮ ಕುಟುಂಬಗಳ ಒಳಗಿನಿಂದಲೆ ಪ್ರಾರಂಭವಾಗುತ್ತದೆ. ಅದು ಹೇಗೆಂದರೆ ಉದಾಹರಣೆಗೆ ನಮ್ಮ ದೇಶದಲ್ಲಿ ಕುಡುಕ, ದುರಾಚಾರಿ ಅಥವಾ ಹೊಣೆಗೇಡಿ ಗಂಡಂದಿರ ದುಡಿಯುವ ಹೆಂಡಂದಿರು ತುರ್ತು ಸಂದರ್ಭಗಳಿಗಾಗಿ ಒಂದಿಷ್ಟು ನಗದು ಹಣವನ್ನು ಬಚ್ಚಿಟ್ಟುಕೊಳ್ಳುವುದು ಸರ್ವೆಸಾಮಾನ್ಯ. ಈಗ ಮೋದಿ ಸರ್ಕಾರದ ಕೃಪೆಯಿಂದಾಗಿ ಆ ದುಡ್ಡೆಲ್ಲಾ ಒಂದೊ ರದ್ದಿಯಾಗಲಿದೆ

ತುತ್ತಾಗಿದ್ದರೆ ಮೋರ್ಬಿಯಲ್ಲಿ 600 ಕಾರ್ಖಾನೆಗಳ ಪೈಕಿ ಸುಮಾರು 300 ಮುಚ್ಚಿದ್ದು ಇನ್ನುಳಿದವು ಸದ್ಯದಲ್ಲೆ ಮುಚ್ಚುವುದರಲ್ಲಿವೆ; ಅತ್ತ ರಾಜ್ಯದ ವರ್ತಕರೂ ತಮ್ಮ ಅಂಗಡಿಗಳ ಬಾಗಿಲು ಹಾಕುವ ಸ್ಥಿತಿಗೆ ತಲುಪಿದ್ದಾರೆ; ಲಕ್ಷಾಂತರ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಇತರ ರಾಜ್ಯಗಳಲ್ಲೂ ಹೆಚ್ಚುಕಡಿಮೆ ಇದೇ ಪರಿಸ್ಥಿತಿ ಇದೆ). ಹತಾಶರಾಗಿರುವ ಇವರೆಲ್ಲರೂ ಬೇರೆ ದಾರಿ ಕಾಣಲಾರದೆ ಅಸಾಂಪ್ರದಾಯಿಕ ಸಾಲಿಗರನ್ನು ಆಶ್ರಯಿಸುವ ಸಂದರ್ಭ ಎದುರಾಗಿದೆ. ಇಲ್ಲಿಯೂ ಸಾಲ ತೀರಿಸಲಾಗದಿದ್ದವರು ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುವ ಅಪಾಯ ಇದೆ.

ಯಾರಿಗೆಲ್ಲ ಆಹಾರವಸ್ತುಗಳ ಖರೀದಿಗೆ, ವೈದ್ಯಕೀಯ ಚಿಕಿತ್ಸೆಗೆ ಅಥವಾ ತುರ್ತು ಸನ್ನಿವೇಶಗಳಿಗೆ ದುಡ್ಡಿನ ತುರ್ತು ಅಗತ್ಯವಿದೆಯೊ ಅವರೆಲ್ಲರಿಗೆ ಈಗ ಹಳೆ ನೋಟುಗಳ ಬದಲಾವಣೆಗೆ ಬ್ರೋಕರ್‌ಗಳನ್ನು ಆಶ್ರಯಿಸುವುದರ ಹೊರತು ಬೇರೆ ದಾರಿ ಇಲ್ಲವೆಂದಾಗಿದೆ. ಉದಾಹರಣೆಗೆ ಕೊಳಗೇರಿ ನಿವಾಸಿಗಳು ಪ್ರತಿ ರೂ. 500ರ ಚಿಲ್ಲರೆಗೆ ರೂ. 100ರಷ್ಟು ಕಮಿಷನ್ ನೀಡಬೇಕಾಗಿ ಬಂದಿದೆ.

ಕಾರ್ಡ್ ಮಷೀನ್ ಹೊಂದಿರದ ಸಣ್ಣಪುಟ್ಟ ಮಾರಾಟಗಾರರು, ವರ್ತಕರು, ಬೀದಿಬದಿ ವ್ಯಾಪಾರಿಗಳು ವ್ಯವಹಾರ ಕಳೆದುಕೊಳ್ಳುತ್ತಿದ್ದಾರೆ. ಇವರು PayTM ಗೆ ಪರಿವರ್ತಿಸಬೇಕೆಂದಾದರೆ ಸ್ಮಾರ್ಟ್ ಫೋನ್ ಬೇಕು, ತೆರಿಗೆ ಸಂಖ್ಯೆ (TIN) ಬೇಕು. ಹೀಗಾಗಿ ಹೆಚ್ಚಿನವರು ತಮ್ಮ ತಳ್ಳು ಗಾಡಿಗಳನ್ನು, ಅಂಗಡಿಮುಗ್ಗಟ್ಟುಗಳನ್ನು ಮಾರತೊಡಗಿದ್ದಾರೆ. ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆ ಇನ್ನಷ್ಟು ವೇಗ ಪಡೆದುಕೊಳ್ಳಲಿದೆ.

ಇದೊಂದು ರೀತಿಯ ರಾಷ್ಟ್ರವ್ಯಾಪಿ ಸಂಪತ್ತಿನ ವರ್ಗಾವಣೆಯೇ ಆಗಿದೆ. ಭಾರತೀಯ ರಿಸರ್ವ್ ಬ್ಯಾಂಕು ಹೇಳುವಂತೆ ನವಂಬರ್ 8ರ ನಂತರದಲ್ಲಿ ಬ್ಯಾಂಕುಗಳಿಗೆ ಸುಮಾರು ರೂ. 6 ಲಕ್ಷ ಕೋಟಿಯಷ್ಟು ನಗದಿನ ಮಹಾಪೂರ ಹರಿದುಬಂದಿದೆ. ಇದರ ತಕ್ಷಣದ ಪರಿಣಾಮವೇನೆಂದರೆ ಬ್ಯಾಂಕುಗಳು ಬಡ್ಡಿದರವನ್ನು ಇಳಿಸತೊಡಗಿವೆ. ಇದರಿಂದಾಗಿ ಹೂಡಿಕೆ ಹೆಚ್ಚಾಗಲಿದೆ ಎಂದು ಕೆಲವರ ಅಂಬೋಣ. ಆದರೆ ನಗದು ಇಲ್ಲದೆ ಬೇಡಿಕೆ ಕುಸಿದಿರುವ ಸನ್ನಿವೇಶದಲ್ಲಿ ಯಾತಕ್ಕೋಸ್ಕರ ಹೂಡಿಕೆ ಆಗಲಿದೆ ಎಂಬ ವಿಷಯದ ಕುರಿತು ಸ್ಪಷ್ಟತೆ ಇಲ್ಲ. ಅದೇನಿದ್ದರೂ ಬಡ್ಡಿದರ ಇಳಿಕೆಯಿಂದ ತಕ್ಷಣ ಲಾಭ ಪಡೆಯಲಿರುವ ಒಂದು ವರ್ಗವೆಂದರೆ ಬ್ಯಾಂಕುಗಳಿಂದ

ಅಸಮರ್ಥರಾದವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಉದಾಹರಣೆಗೆ ರೋಗಿಗಳು ಅಥವಾ ದಿನದ ವೇತನ ಕಳೆದುಕೊಳ್ಳುವ ಭೀತಿಯಿಂದ ಕ್ಯೂನಲ್ಲಿ ನಿಲ್ಲಲಾಗದ ದಿನಗೂಲಿ ಕಾರ್ಮಿಕರು ಅಥವಾ ಬ್ಯಾಂಕುಗಳಿಂದ ಅತಿ ದೂರದಲ್ಲಿ ಜೀವಿಸುವವರು ಅಥವಾ ಗುರುತಿನ ಚೀಟಿ ಇಲ್ಲದವರು.

ಗುರುತಿನ ಚೀಟಿ ಇಲ್ಲದವರ ವರ್ಗವನ್ನು ತೆಗೆದುಕೊಂಡರೆ ಕನಿಷ್ಠ 5.8 ಕೋಟಿ ವಯಸ್ಕರ ಬಳಿ ಇನ್ನೂ ಆಧಾರ್ ಕಾರ್ಡು ಇಲ್ಲ, ಇಂಥವರ ಬಳಿ ಇನ್ನಿತರ ಯಾವುದೇ ಗುರುತಿನ ಚೀಟಿ ಇರಲಾರದೆಂದೆ ಊಹಿಸಬಹುದು. ಹೀಗಾಗಿ ಇವರ್‍ಯಾರೂ ಬ್ಯಾಂಕು ಖಾತೆಗಳನ್ನು ಹೊಂದಿಲ್ಲ ಎನ್ನಬಹುದು. ಸಾಮಾನ್ಯವಾಗಿ ಭಾರತದಲ್ಲಿ ಹೆಚ್ಚುಕಡಿಮೆ ಪ್ರತಿಯೊಂದು ಮನೆಯಲ್ಲೂ ತುರ್ತು ಮತ್ತಿತರ ಸಂದರ್ಭಗಳಿಗಾಗಿ ನಗದು ಹಣವನ್ನು ಇಟ್ಟುಕೊಳ್ಳಲಾಗುತ್ತದೆ (ಒಂದು ಅಂದಾಜಿನಂತೆ ಬಡವರ ಆದಾಯದ ಸುಮಾರು ಅರೆವಾಸಿಯಷ್ಟು ಹಣ ನಗದಿನ ರೂಪದಲ್ಲಿ ಅವರ ಮನೆಗಳಲ್ಲಿ ಇರುತ್ತದೆ). ಸರಾಸರಿ ಪ್ರತಿಯೊಬ್ಬ ವ್ಯಕ್ತಿಯ ಬಳಿ ಬದಲಾಯಿಸಲು ಆಗದ, ಖಾತೆಗೆ ಜಮೆ ಮಾಡಲು ಆಗದ ರೂ. 2000 ಇದೆ ಎಂದು ಎಣಿಸಿದರೆ 5.8 ಕೋಟಿ ಜನರ ಬಳಿ ಇರುವ ನಗದಿನ ಮೊತ್ತ ರೂ. 11,600 ಕೋಟಿ ಆಗುತ್ತದೆ. ಈ ದುಡ್ಡಿನ ಗತಿ ಏನು?

ಈಗ ಭಾರತೀಯ ರಿಸರ್ವ್ ಬ್ಯಾಂಕು ಈ ವಾಪಸ್ಸಾಗದ ನೋಟುಗಳ ಆಧಾರದಲ್ಲಿ ಸರ್ಕಾರಕ್ಕೆ ಹೆಚ್ಚುವರಿ ಲಾಭಾಂಶವನ್ನು ನೀಡಲಿದೆಯಂತೆ. ಇಂತಹ ಹಲವು ಯೋಜನೆಗಳ ಪೈಕಿ ಅತ್ಯಂತ ವ್ಯಾಪಕವಾಗಿ ವರದಿಯಾಗಿರುವ ಯೋಜನೆ ಇದೇ ಆಗಿದೆ. ಆದರೆ ಇದೊಂದು ಕಾನೂನು ಬಾಹಿರ ಕ್ರಮವಾಗಿದೆ. ಇದೇನಾದರೂ ಕಾರ್ಯಗತಗೊಂಡಿತೆಂದಾದರೆ ಬಡವರ ಹಣವನ್ನಂತೂ ನೇರವಾಗಿ ದರೋಡೆ ಮಾಡಿದಂತಾಗಲಿದೆ. ಒಂದು ವೇಳೆ ಕಾರ್ಯಗತಗೊಳಿಸದಿದ್ದರೂ ಬಡವರ ಉಳಿತಾಯವೆಲ್ಲಾ ಮಣ್ಣುಪಾಲಾಗಿ ಅವರ ಪರಿಸ್ಥಿತಿ ಇನ್ನಷ್ಟು ದುರ್ಭರವಾಗಲಿದೆ. ಇದರಿಂದ ಆಗಲಿರುವ ನಷ್ಟಗಳೇನೆಂದು ಈಗಾಗಲೆ ವಿವರಿಸಲಾಗಿದೆ.

"50 ದಿನಗಳ" ಗಡುವು ಮುಕ್ತಾಯಗೊಂಡಾಗ ಲಾಭ, ನಷ್ಟ ಎರಡೂ ಶಾಶ್ವತವಾಗಲಿವೆ. ಜನತೆ ಈಗಾಗಲೆ ಕಳೆದುಕೊಂಡಿರುವ ಭೂಮಿ, ಉಳಿತಾಯ, ನೌಕರಿ, ಮಧ್ಯವರ್ತಿಗೆ ಕೊಟ್ಟ ಕಮಿಷನ್ ಇತ್ಯಾದಿಗಳು ಮರಳಿ ಸಿಗಲಾರವು. ದುಡ್ಡಿನ ಕೊರತೆಯಿಂದಾಗಿ ಅನ್ನಾಹಾರ

ಔಷಧಿಗಳಿಲ್ಲದೆ ಸತ್ತವರು ಮರಳಿ ಬರಲಾರರು. ಪ
ವಿಷಯವೇನೆಂದರೆ ಸಾಮಾನ್ಯವಾಗಿ ಉತ್ಪಾ
ಹೆಚ್ಚಳವಾದಾಗ ಸಂಪತ್ತಿನ ವರ್ಗಾವಣೆ ಆಗುತ್ತ
ಇಂದಿನ ಈ ಬೃಹತ್ ಪ್ರಮಾಣದ ಸಂಪತ್ತಿನ
ಆಗಿರುವುದು ಹೆಚ್ಚುವರಿ ಉತ್ಪಾದನೆಯಿಂದ ಅಲ್ಲ
ರದ್ಧತಿಯಿಂದ. ಈ ಅನಿರೀಕ್ಷಿತ ಧನಭಾಗ್ಯದ ಫ
ಗಳು ಅದನ್ನು ತಮ್ಮ ಸ್ವಂತ ದುಡಿಮೆಯಿಂದ ಸಂ
ಅವರು ಹೆಚ್ಚು ಪ್ರಭಾವಶಾಲಿಗಳಾಗಿರುವ ಏಕೈಕ
ಅವರಿಗೆ ಅದು ದಕ್ಕಿದೆ. ಇದು ಥೇಟ್ ಪಠ್ಯಪುಸ್ತ
ತಿರೋಗಾಮಿ ಆರ್ಥಿಕ ನೀತಿಯ ಅರ್ಥ ನಿ
ಹಾಗೇ ಇದೆ.

ನೋಟು ರದ್ಧತಿಯಿಂದಾಗಿ ತೆರಿಗೆ ತಪ್ಪಿಸುವಿ
ಎಂದು ಬೆಂಬಲಿಗರು ವಾದಿಸುತ್ತಾರೆ. (ಹೀಗೆ ಸಂ
ಹೆಚ್ಚುವರಿ ಹಣವನ್ನು ಜನಕಲ್ಯಾಣ ಯೋ
ತೊಡಗಿಸುವ ಬಗ್ಗೆ ಸೊಲ್ಲೆತ್ತುವವರು ಇಲ್ಲವೆ ಇ
ಕಮ್ಮಿ). ಆದರೆ ಅಸಲಿಗೆ ಮೋದಿ ಸರ್ಕಾರ
ತಪ್ಪಿಸುವಿಕೆಯ ವಿಚಾರದಲ್ಲಿ ಗಂಭೀರವಾ
ತೋರುತ್ತಿಲ್ಲ. ಯಾಕೆಂದರೆ ಭಾರತದಲ್ಲಿ
ಪ್ರಮಾಣದಲ್ಲಿ ತೆರಿಗೆ ತಪ್ಪಿಸುವವರೆಂದರೆ
ಕಾರ್ಪೊರೇಟುಗಳು. ರೂ. 20,000
ತೆರಿಗೆಯನ್ನೊಳಗೊಂಡ ವೊಡಾಫೋನ್
ನ್ಯಾಯಾಲಯದಲ್ಲಿದೆ. ತೆರಿಗೆ ತಪ್ಪಿಸುವಿಕೆ
2012ರಲ್ಲಿ ಜಾರಿಗೊಳಿಸಲಾದ ನಿಯಮಗಳು (G
Anti-Avoidance Rules) ಕೆದ
ಬಾಕಿಯಾಗಿವೆ. ಈ ವಿಷಯದಲ್ಲಿ ಯುಪಿಎ
ಸರ್ಕಾರಗಳೆರಡೂ ದೋಷಿ ಸ್ಥಾನದಲ್ಲಿ ನಿಲ್ಲುತ್ತ
ಮೋದಿ ಸರ್ಕಾರ ಮತ್ತೂ ಒಂದು ಹೆಜ್ಜೆ ಮುಂದ
ಈ ನಿಯಮಗಳನ್ನು ಏಪ್ರಿಲ್ 2017ರ
ಅನ್ವಯಿಸಲಾಗುವುದು; ಏಪ್ರಿಲ್ 2017ಕ್ಕೆ
ಎಲ್ಲಾ ವಹಿವಾಟುಗಳಿಗೆ ವಿನಾಯಿತಿ ಇದೆ
ಘೋಷಿಸಿಬಿಟ್ಟಿದೆ. (ಪ್ರಸಕ್ತ ಕಾರ್ಯಾಚರ
ಗಮನಿಸಿದರೆ ಶಿಕ್ಷೆ ಏನಿದ್ದರೂ ನಗದನ್ನು
ತುಂಬಿಸಿಟ್ಟಿರುವವರಿಗಷ್ಟೆ ಮೀಸಲೆಂದು ತೋರುತ್ತ
ನಡುವೆ ಸಣ್ಣ ಪ್ರಮಾಣದಲ್ಲಿ ತೆರಿಗೆ ತಪ್ಪಿಸು
ಹೆಚ್ಚೆಂದರೆ ಒಂದು ಸರ್ತಿಗೆ ನಷ್ಟ ಆಗಿರಬಹುದ
ಮಟ್ಟಿಗೆ ಭವಿಷ್ಯದಲ್ಲಿ ಎಲ್ಲವೂ ಯಥಾಸ್ಥಿತಿಗೆ
(ಅಥವಾ ಬಿಟ್‌ಕಾಯಿನ್‌ನಂತಹ (Bitcoin
ಮಾರ್ಗಗಳಿಗೆ ಹೊರಳುವ) ಸಾಧ್ಯತೆಗಳು ಕಾ

ಅನಿರೀಕ್ಷಿತ ಮಟ್ಟದಲ್ಲಿ ತೆರಿಗೆ ಸಂಗ್ರಹವಾದ
ಆರ್‌ಬಿಐನಿಂದ ಲಾಭಾಂಶ ದೊರೆತಲ್ಲಿ ಸರ್ಕಾರದ
ಕೆಲವೊಂದು ಕಲ್ಯಾಣ ಕಾರ್ಯಕ್ರಮಗಳ
ಹೊರಬೀಳುವುದರಲ್ಲಿ ಅನುಮಾನವಿಲ್ಲ. ಸರ್ಕಾರ
ನೋಟು ರದ್ಧತಿಯಿಂದ ಜನರಿಗಾಗಿರುವ ಅನ್ಯಾ
ಸರಿಪಡಿಸುವ ಇಚ್ಛೆ ಇದ್ದಲ್ಲಿ ಅದರ ಮೊದಲ
ದೀರ್ಘಾವಧಿಯ ಸಾರ್ವಜನಿಕ ವೆಚ್ಚದಲ್ಲಿ ಭಾರಿ
ಹೆಚ್ಚಳ ಮಾಡಬೇಕಾಗುತ್ತದೆ. ಆದರೆ ಮೋದಿ ಸರ್ಕಾ
ಇಂತಹ ಯೋಜನೆಯನ್ನು ಅನುಷ್ಠಾನಗೆ
ಸಾಮರ್ಥ್ಯವೂ ಇಲ್ಲ ರಾಜಕೀಯ ಇಚ್ಛಾಶಕ್ತಿಯ
ಅದೀಗ ನೋಟು ರದ್ಧತಿಯನ್ನು ಬಡವರಿಗೆ
ಮಾಡುವುದಕ್ಕೋಸ್ಕರ ತೆರಿಗೆ ತಪ್ಪಿಸುವವರ
ನಡೆಸುತ್ತಿರುವಂಥ ಮಹಾಯುದ್ಧವೆಂಬಂತೆ
ಇದೆ. ಆದರೆ ಅಸಲಿಗೆ ಭಾರತದ ಆರ್ಥಿ
ಮೊದಲಿಗಿಂತಲೂ ಹೆಚ್ಚು ಅಸಮಾನತೆ ಸೃಷ್ಟಿ
ಪರಿಣಾಮವಾಗಿ ಈಗಾಗಲೆ ಬೃಹತ್ ಸಂಖ್ಯೆ
ಶೋಷಿತ ಜನಸಮುದಾಯಗಳು ಇನ್ನಷ್ಟು ಶೋ
ಒಳಗಾಗಲಿವೆ. ನಿಜಕ್ಕೂ ಇದೊಂದು ಮಾಸ್ಟರ

■ ಸುರೇಶ್ ಭಟ್ ಬಾ

(ಕೃಪೆ: Sc

ಯೋಗೇಶ್ ಮಾಸ್ಟರ್

ಮರಾಣದ ಹೂರಣ


ಶರಣ ಸತಿ

...ವೆಂದರೆ ಗಂಡೇ?

...ರಣ ಸತಿ ಲಿಂಗ ಪತಿ ಎಂಬ ತಾತ್ವಿಕಸಾಲು ... ಹೆಣ್ಣಿನ ತಾರತಮ್ಯವನ್ನು ಎತ್ತಿ ಹಿಡಿಯುವಂತಹ ...ಯ ವಿಷಯವಾದೀತು. ದೂಸ್ರೀರಾಧಾ ...ೇ ಹೋಲುವ ಇದೂ ಕೂಡ ಕೃಷ್ಣನೊಬ್ಬನೇ ... ಎಂಬಂತಹ ಧೋರಣೆಯನ್ನು ವ್ಯಕ್ತಪಡಿಸುತ್ತಾ ...ೊಂದೇ ಗಂಡು ಎನ್ನುವ ಅಥವಾ ಶಿವನೊಬ್ಬನೇ ... ಎನ್ನುವಂತಹ ಪ್ರಮಾದದ ಧ್ವನಿಯಾದೀತು.

...ಹೇಳಬೇಕೆಂದರೆ ಕೃಷ್ಣನೊಬ್ಬನೇ ಪುರುಷ ...ದಾಗಲಿ ಅಥವಾ ಲಿಂಗ ಪತಿ ಎನ್ನುವುದಾಗಲಿ ... ಹುಟ್ಟಿಸುವಂತಹ ವಿಷಯವೇನಲ್ಲ. ಆಗಿನ ...ಜಿಕ ವ್ಯವಸ್ಥೆಯಲ್ಲಿ ಕಾಣುತ್ತಿದ್ದ ಲಿಂಗ ...ನ್ಯವಾಗಲಿ, ಪುರುಷನ ಅಧಿಪತ್ಯದ ಅಥವಾ ...ಮಾನಿಕೆಯ ಪ್ರವೃತ್ತಿಯನ್ನು ಗುರುತಿಸಬಹುದಷ್ಟೇ. ... ತಂದೆ, ಗಂಡ, ಗಂಡು ಮಗು ಇವೆಲ್ಲಾ ...ಳಿಗೆ ಮನ್ನಣೆ ಸಿಗುವಂತಹ ಸ್ವಾಭಾವಿಕ ಒಪ್ಪಿತ ...ೂ ಆಗಿತ್ತು. ಇರಲಿ, ಅದೇನೇ ಆದರೂ ...ನ ಆಳ್ವಿಕೆಯನ್ನು ಮನ್ನಿಸುವಂತಹ, ತಂದೆ ... ಗಂಡನಿಗೆ ತಗ್ಗಿಬಗ್ಗಿ ನಡೆಯುವಂತಹ ಸ್ವಾಭಾವಿಕ ...ತಿಯೇ ಕೃಷ್ಣನೊಬ್ಬನೇ ಪುರುಷನೆಂದು, ...ನ್ನು ಪತಿಯೆಂದು ಕರೆಯಲು ಪ್ರೇರೇಪಿಸಿದ್ದು.

...ಲೆ ಬಂದರೆ ಹೆಣ್ಣೆಂಬರು, ಮೀಸೆ ಮೂಡಿದರೆ ...ಬರು, ನಡುವೆ ಸುಳಿವ ಆತ್ಮಕ್ಕೆ ಗಂಡು ... ಭೌತಿಕ ಸಂಕೇತಗಳ ಸೋಂಕಿಲ್ಲ ಎಂದು ... ದಾಸಿಮಯ್ಯ ಹೇಳುವಂತಹ ವೈಚಾರಿಕತೆಗೆ ...ವುದಕ್ಕೆ ಎಲ್ಲಾ ಶರಣರಿಗೂ ...ದೊಮ್ಮೆಲೇ ಸಾಧ್ಯವಾಗಿರಲಿಲ್ಲ. ಎಲ್ಲರೂ ತಮ್ಮ ... ಹಿನ್ನೆಲೆಗಳ ಪ್ರಭಾವಗಳಿಂದ ಬಿಡಿಸಿಕೊಂಡು ... ವೈಚಾರಿಕ ಮತ್ತು ಆಧ್ಯಾತ್ಮಿಕ ಮಟ್ಟಕ್ಕೆ ಬಂದು ...ವುದಕ್ಕೆ ಸಹಜವಾಗಿಯೇ ತಮ್ಮ ತಮ್ಮ ...ಗಳನ್ನು ತೆಗೆದುಕೊಳ್ಳುತ್ತಿದ್ದರು.



...ಸವಣ್ಣನವರೂ ಕೂಡ ತಮ್ಮ ಭಕ್ತಿಯ ...ಖದ ಗಾಢತೆಯನ್ನು ಅಭಿವ್ಯಕ್ತಗೊಳಿಸಲು ... ಹುಟ್ಟಿದ ಮಗುವಿನಂತೆ ಕಂಡಕಂಡವರನ್ನೆಲ್ಲಾ ... ಅಯ್ಯಾ' ಎಂದು ಹೋಗೆನಯ್ಯಾ ಎಂದು ...ವರು. ಹಾಗಾಗಿಯೇ ಪದಕ್ಕಿರುವ ...ರ್ಥವನ್ನು ಯಥಾವತ್ತಾಗಿ ಗಣಿಸುವ ಬದಲು ...ನ್ನೆಲ್ಲಾ ರೂಪಕದಲ್ಲಿ ನೋಡುತ್ತಾ ...ರ್ಥವನ್ನು ಗ್ರಹಿಸಬೇಕಾಗಿರುವುದು ...ವಾಗಿರುತ್ತದೆ.

...ಲಿಂಗ ಎನ್ನುವುದಕ್ಕೂ ಭಾಸ್ಕರ್ ...ರವರು ಒಂದು ಆಕ್ಷೇಪವನ್ನೆತ್ತಿ ನನ್ನ ಗಮನ ... ಪಾಣಿವಟ್ಟದ ಮೇಲೆ ನಿಂತಿರುವ ...ರದ ಲಿಂಗವೆನ್ನುವುದು ಪುಲ್ಲಿಂಗವೇನಲ್ಲ, ...ೀಠ ಅಥವಾ ಪಾಣಿವಟ್ಟ ಎನ್ನುವುದು ...ಯ ಸಂಕೇತ ಅಥವಾ ಪ್ರತಿಮಾ ರೂಪ ...ದರಲ್ಲಿ ಸಂದೇಹವೇನಿಲ್ಲ, ಆದರೆ, ಆದರ ... ನಿಂತಿರುವ ಶಿಶ್ನವು ಶಿಶ್ನವೇ ಎಂಬುದು ನಮ್ಮ ...ನ ಪ್ರಶ್ನೆ, ಏಕೆಂದರೆ, ಶಿವಶಕ್ತ್ಯೈಕ್ಯ ...ವಾಗಿಯೂ ಕೂಡ ದೇವಿಯನ್ನು ...ವಾಗ ನಾವು ಎರಡು ಲಿಂಗಾಧಿಪತ್ಯದ ...ರ ಸಂಧಾನ ಸಂಕೇತವಾಗಿ ಲಿಂಗ ಮತ್ತು ... ಹೊತ್ತ ಪಾಣಿಪೀಠವನ್ನು ನೋಡುತ್ತಿದ್ದೇವೆ. ... ಹಾಗಿದ್ದ ಪಕ್ಷದಲ್ಲಿ ಮೇಲ್ಮುಖವಾಗಿರುವ ... ಮತ್ತು ಕೆಳಮುಖವಾಗಿರುವ ತ್ರಿಕೋಣಗಳು ...ಮೋಡೊಂದು ಇದ್ದು ನಕ್ಷತ್ರಾಕಾರದಲ್ಲಿರುವ

ಚಿತ್ರವನ್ನು ಒಪ್ಪಲು ಸಾಧ್ಯವಾಗುತ್ತದೆ. ಆದರೆ, ನಾವು ಕಲ್ಲಿನಲ್ಲಿ ಅಥವಾ ಲೋಹದಲ್ಲಿ ಕಾಣುವಂತಹ ಲಿಂಗ ಮತ್ತು ಪಾಣಿಪೀಠವು ಶಿವಶಕ್ತಿ ಅಥವಾ ಪುರುಷ, ಪ್ರಕೃತಿಯ ರೂಪವಲ್ಲದೇ ಬರಿದೇ ಹೆಣ್ಣಿನ ಅಥವಾ ಪ್ರಕೃತಿಯ ಸಂಕೇತ ಮಾತ್ರವೇ ಆಗಿರುತ್ತದೆ ಎಂದೆನಿಸುತ್ತದೆ. ಏಕೆಂದರೆ, ಎಲೆಯಾಕಾರದಲ್ಲಿ ಅಂದರೆ ಯೋನಿಯ ಆಕಾರದಲ್ಲಿರುವ ಪಾಣೀಪೀಠದಲ್ಲಿ ಬಹಳ ಪ್ರಾಚೀನ ಕಾಲಗಳಲ್ಲಿ ದೊರಕಿರುವ ವಿಗ್ರಹಗಳ ಪ್ರಕಾರ ಲಿಂಗಗಳು ಈಗಿರುವಂತೆ ಎತ್ತರವಾಗಿದ್ದು ನಿಂತಿರುತ್ತಿರಲಿಲ್ಲ. ಬದಲಾಗಿ ಸಣ್ಣ ಗುಪ್ಪೆಯಂತೆ ಪಾಣಿಪೀಠದ ಆವರಣದ ಎತ್ತರಕ್ಕಿಂತ ಸ್ವಲ್ಪ ಮೇಲಿರುತ್ತಿದ್ದವು. ಅಂದರೆ ಅದು ಶಿಶ್ನದ ಸಂಕೇತವಲ್ಲದೇ ಯೋನಿಯ ಒಳಭಾಗವೇ ಆಗಿರುವಂತಹ ಚಂದ್ರನಾಡಿಯಾಗಿತ್ತು. ಇದನ್ನು ಕಾಶೀ ವಿಶ್ವನಾಥನ ದೇವಸ್ಥಾನದಿಂದ ಹಿಡಿದು ಅನೇಕ ಪುರಾತನ ದೇವಾಲಯಗಳಲ್ಲಿರುವ ಲಿಂಗಗಳನ್ನು ನೋಡಿದರೆ ಗೋಚರವಾಗುತ್ತದೆ. ಯೋನಿಯ ಒಳಭಾಗದಲ್ಲಿ ಕಿರುದಾಗಿ ಉಬ್ಬಿರುವ ಚಂದ್ರನಾಡಿಯು ತಂತ್ರಸಾಧನೆಯಲ್ಲಿ ಪೂಜಾರ್ಹವಾಗಿದ್ದು ಅದನ್ನೇ ಆರಾಧಿಸಲು ಅಸ್ಸಾಮಿನ ಕಾಮಾಕ್ಯ ದೇವಾಲಯದಲ್ಲಿರುವಂತೆ ಭಾರತದ ಇತರ ಕಡೆಗಳಲ್ಲಿಯೂ ಕೂಡ ಪ್ರತಿಮೆಗಳನ್ನು ರೂಪಿಸಿಕೊಂಡಿದ್ದರು.

ಲಿಂಗವೆಂದರೆ ಪುರುಷನ ಶಿಶ್ನವೇನಲ್ಲ ಎಂದಾಯ್ತು. ಮೂಲತಃ ಯೋನಿ ಮತ್ತು ಅದರಲ್ಲಿ ಉಬ್ಬಿದ ಭಾಗ ಚಂದ್ರನಾಡಿಯು ಪೂಜಾರ್ಹವಾಗಿದ್ದು ಅದರ ಪ್ರತಿಮೆಗಳನ್ನು ಸ್ಥಾವರರೂಪದಲ್ಲಿ ಮತ್ತು ಸ್ಥೂಲರೂಪದಲ್ಲಿ ತೋರುವ ಉದ್ದೇಶದಿಂದ ಚಂದ್ರನಾಡಿಯ ಉಬ್ಬುವಿಕೆಯು ಎತ್ತರೆತ್ತರಕ್ಕೆ ಬರುತ್ತಾ ಶಿಶ್ನಾಕಾರವನ್ನೇ ಪಡೆದುಬಿಟ್ಟಿತು.

ಶಿವಶಕ್ತಿಯರ ಅಥವಾ ಪ್ರಕೃತಿ ಪುರುಷರ ಮಿಲನದ ಸಂಕೇತವೇ ಆದಾದಲ್ಲಿ ಶಿಶ್ನವು ಮೇಲ್ಮುಖವಾಗಿರದೇ ಕೆಳಮುಖ ವಾಗಿರಬೇಕಿತ್ತು. ಗೋಳದ ಭಾಗವು ಕೆಳಮುಖ ವಾಗಿದ್ದು ಪಾಣೀಪೀಠದಲ್ಲಿ ಸೇರಿ ಕಾಣದಂತಾಗಿರುತ್ತಿತ್ತು.

ಲಕುಲೀಶನೇ ಮೊದಲಾಗಿ ಅನೇಕ ಶಿಶ್ನ ಸಂಕೇತಗಳನ್ನು ಹೊಂದಿರುವ ಶೈವ ಪರಂಪರೆಯಾಗಲಿ, ಕಾಮಾಕ್ಯದಂತಹ ಯೋನಿಗಳನ್ನು ಸಂಕೇತವಾಗಿ ಹೊಂದಿರುವಂತಹ ಶಕ್ತಿ ಪರಂಪರೆಯಾಗಲಿ ಶರಣ ಪರಂಪರೆಯಲ್ಲ. ಇವೆಲ್ಲವನ್ನೂ ದಾಟಿ, ಕರಸ್ಥಲಕ್ಕೆ ಬಂದು ಚುಳುಕಾಗಿರುವ ಲಿಂಗವು ಹೆಣ್ಣು ಮತ್ತು ಗಂಡೆಂಬ ಲಿಂಗಭೇದವಿಲ್ಲದ ನಿರ್ಲಿಂಗ. ಮುಸಲ್ಮಾನರ ಅಲ್ಲಾಹನ ಪರಿಕಲ್ಪನೆ ಇದಕ್ಕೆ ಬಹಳ ಸಮೀಪಕ್ಕೆ ಬರುತ್ತದೆ.

ಲಿಂಗ ಪತಿ

ಶರಣ ಸತಿ ಲಿಂಗಪತಿ ವಚನಕಾರರ ಭಕ್ತಿಯ ಸ್ವರೂಪವನ್ನು ನೀಡುವ ಉಕ್ತಿಯಾಗಿದೆ. ಅಂದರೆ ಎಲ್ಲಾ ವಚನಕಾರರು ಸತಿ ಪತಿ ಭಾವದ ವಚನಗಳನ್ನು ರಚಿಸಿಲ್ಲ, ಸಿದ್ಧರಾಮ, ಉರಿಲಿಂಗದೇವ, ಗಜೇಶ ಮಸಣಯ್ಯ, ಘನಲಿಂಗದೇವ ಇವರ ವಚನಗಳಲ್ಲಿ ಈ ಭಾವ ವಿಶೇಷವಾಗಿ ಒಡಮೂಡಿದೆ ಎಂದು ವಿದ್ವಾಂಸರು ಗುರುತಿಸುತ್ತಾರೆ. ಈ ವಚನಕಾರರಲ್ಲದೇ ಬೇರೆ ವಚನಕಾರರೂ ಆಗೊಮ್ಮೆ ಈಗೊಮ್ಮೆ ಸತಿಪತಿ ಭಾವದ ವಚನಗಳನ್ನು ರಚಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಬಸವಣ್ಣರಲ್ಲಿ ಬಹುದೊಡ್ಡ ಬಂಡಾಯಗಾರನಿದ್ದರೂ, ಕ್ರಾಂತಿಯ ಅಗ್ನಿಯಿದ್ದರೂ ಅದು ಬಹಳ ಸಾತ್ವಿಕವಾಗಿತ್ತು. ಅಲ್ಲಮನಂತೆ ನಿಷ್ಠೂರವಾಗೇನಿರಲಿಲ್ಲ. ಅಸಂಬದ್ಧ ಮತ್ತು ಅನಗತ್ಯವಾದವುಗಳನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಎಸೆಯುವಂತಹ ಕಠೋರವಾಗಿರುವಂತಹ ನಿಲುವನ್ನು ಹೊಂದಿರದೇ ಕ್ರಮೇಣ ಪರಿವರ್ತನೆಯ ಭ್ವರವಸೆ ಮತ್ತು ಕಾರ್ಯವಿಧಾನ ಬಸವಣ್ಣನದಾಗಿತ್ತು. ಹಾಗೆಯೇ ನೋಡುವಾಗ ಲೋಕಾರೂಢಿಯಲ್ಲಿ ಹೇಳುವುದಾದರೆ ಅಲ್ಲಮ ಗಂಡು ದನಿಯಲ್ಲಿ ಗರ್ಜಿಸುವುದಾದರೆ, ಬಸವನ ಧ್ವನಿಯಲ್ಲಿ ಹೆಣ್ಣಿಗತನವಿತ್ತು. ಇನ್ನೂ ಬಿಡಿಸಿ ಹೇಳುವುದಾದರೆ ಬಸವನು ಮಾತೃ ಹೃದಯವನ್ನು ಹೊಂದಿದ್ದ ಮೃದುಮನವು ಇದ್ದುದರಿಂದ "ಲಿಂಗ ಗೆಲುವಡೆ, ಶರಣಸತಿ ಲಿಂಗಪತಿಯೆಂಬುದುದೊಂದಲಗು ಸಾಲದೆ?" ಎನ್ನುವ ಮಾತು ಕೇಳಿಬರುವುದು.

ಇನ್ನು ಅಕ್ಕ ಮಹಾದೇವಿ ತನ್ನ ಹೆಣ್ತನದ ಅಭಿವ್ಯಕ್ತಿಯನ್ನು ಉಳಿಸಿಕೊಂಡೇ ಶರಣ ಪರಂಪರೆಯನ್ನು ಹಿಡಿದವಳು.

ಅಂಗವ ಲಿಂಗಮುಖದಲ್ಲಿ ಅರ್ಪಿಸಿ ಅಂಗ
ಅನಂಗವಾಯ್ತು, ಮನವ ಅರಿವಿಂಗರ್ಪಿಸಿ ಮನ
ಲಯವಾಯಿತ್ತು, ಭಾವ ತೃಪ್ತಿಗರ್ಪಿಸಿ ಭಾವ
ಬಯಲಾಯ್ತು. ಅಂಗ ಮನ ಭಾವವಳಿದ ಕಾರಣ
ಕಾಯ ಅಕಾಯವಾಯ್ತು. ಎನ್ನ ಕಾಯದ
ಸುಖಭೋಗವ ಲಿಂಗವೆ ಭೋಗಿಸುವನಾಗಿ
ಶರಣಸತಿ ಲಿಂಗಪತಿಯಾದೆನು

- ಎಂದು ಅಕ್ಕಮಹಾದೇವಿ ಹೇಳುವಳು. ಶರಣಸತಿ ಲಿಂಗಪತಿಯಾದ ಬಳಿಕ ಶರಣಂಗೆ ಸತಿಸಂಗವು ಅಘೋರ ನರಕವೆಂದೂ ಅವಳು ಹೇಳುವಳು.

ಅಕ್ಕ ಹೊರ ಅಥವಾ ಭೌತಿಕ ಗುರುತಿನಂತೆ ತನ್ನ ಹೆಣ್ಣಾಗಿ ಲಿಂಗವನ್ನು ಗಂಡಾಗಿ ಕಾಣುವುದಾದರೂ ಒಂದು ರೀತಿಯಲ್ಲಿ ಸಮ್ಮತವೇ ಆದರೂ, ಶರಣನು ತಾನು ಗಂಡಾಗಿರುವಲ್ಲಿ ಲಿಂಗವನ್ನು ಗಂಡನೆಂದು ಕಾಣುವುದು ಒಂದು ರೀತಿಯ ವಿಲಕ್ಷಣವಾಗಿಯೂ ಅಲ್ಲಮನಿಗೆ ತೋರಿರಲು ಸಾಧ್ಯ. ಹಾಗಾಗಿ ಅಲ್ಲಮ ಮತ್ತು ಅಂಬಿಗರ ಚೌಡಯ್ಯನಿಂದ ಇದು ತಿರಸ್ಕೃತವಾಗುತ್ತದೆ. ಶರಣಂಗೆ ಸತಿಸಂಗವು ಅಘೋರ ನರಕವೆಂದು ಹೇಳುವ ಅಕ್ಕನ ಮಾತನ್ನು ಒಪ್ಪಲಾಗದು. ಅದನ್ನು ಆಕೆಯ ದಾಂಪತ್ಯದ ಹಿನ್ನೆಲೆಯ, ಅನುಭವದ ಪ್ರಭಾವದಿಂದ ರೂಪುಗೊಂಡಿರುವುದಾಗಿ ಗ್ರಹಿಸಬೇಕಾಗುವುದೇ ಹೊರತು, ಎಲ್ಲಾ ಶರಣರಿಗೆ ಅನ್ವಯವೆಂದು ಭಾವಿಸಲಾಗದು. ಹಾಗಾಗಿಯೇ ಅಕ್ಕನ ಭಕ್ತಿಯನ್ನು ಗಂಡು ಹೆಣ್ಣು ಎಂಬ ಲಿಂಗಭೇದವನ್ನು ಮೀರಿದ, ಇನ್ನೂ ಪಕ್ವ ರೂಪದಲ್ಲಿ ನೋಡಲು ಅಲ್ಲಮ ದನಿ ಎತ್ತಿದ್ದು ಕೂಡಾ.

ಶರಣಸತಿ ಲಿಂಗಪತಿಯ ತಾತ್ವಿಕ ನೆಲೆಯ ಶುಷ್ಕ ಅನುಸರಣೆಯನ್ನು ಅಂಬಿಗರ ಚೌಡಯ್ಯ ಮತ್ತು ಅಲ್ಲಮ ಪ್ರಭುವಂತಹ ನಿಷ್ಠೂರವಾದಿಗಳು ನಿರಾಕರಿಸುತ್ತಾರೆ.


ಶರಣಸತಿ ಲಿಂಗಪತಿ ಎಂಬರು
ಶರಣ ಹೆಣ್ಣಾದ ಪರಿ ಇನ್ನೆಂತು?
ಲಿಂಗ ಗಂಡಾದ ಪರಿ ಇನ್ನೆಂತು?
ನೀರು ನೀರು ಕೂಡಿ ಬೆರೆದಲ್ಲಿ ಭೇದಿಸಿ
ಬೇರೆ ಮಾಡಬಹುದೇ?

ಶರಣಸತಿ ಲಿಂಗಪತಿ ಎಂಬ ಮಾತು ಮೊದಲಿಗೆ ಮೋಸ, ಲಾಭಕ್ಕಧೀನವುಂಟೇ? ಎಂದು ಹೇಳುತ್ತಾ ಅದನ್ನು ವಿಡಂಬಿಸಿದ್ದಾನೆ. ಗಂಡು ತನ್ನನ್ನು ಹೆಣ್ಣಾಗಿ ಭಾವಿಸಿ ದೈವವನ್ನು ಪತಿಯನ್ನಾಗಿ ನೋಡುವ ಕ್ರಮವೇ ಅಂಬಿಗರ ಚೌಡಯ್ಯನಿಗೆ ವಿಲಕ್ಷಣವಾಗಿ ಕಂಡಿದಂತಿದೆ. ಅಲ್ಲಮ ಪ್ರಭುವು ಸತಿಪತಿ ಭಾವವನ್ನು, ದೈವವನ್ನು ನಲ್ಲನನ್ನಾಗಿ ಸ್ವೀಕರಿಸುವುದನ್ನು, ಶರಣ ಸತಿ ಲಿಂಗ ಪತಿ ಎಂದು ನುಡಿದು ಅದರಂತೆ ನಡೆಯದ ಭಕ್ತರ ವರ್ತನೆಯನ್ನು ಕಂಡು,

ಅಳವರಿಯದ ಭಾಷೆ, ಬಹುಕುಳವಾದ ನುಡಿ
ಇಂತೆರಡರ ನುಡಿ ಹುಸಿಯಯ್ಯಾ
ಬಹುಭಾಷಿತರು ಸುಭಾಷಿತವರ್ತಿತರು ಶರಣಸತಿ
ಲಿಂಗಪತಿ ಎಂಬರು, ಹುಸಿಯಯ್ಯಾ ಇಂತಪ್ಪವರ
ಕಂಡು ನಾಚುವೆನಯ್ಯಾ ಗುಹೇಶ್ವರಾ?

ಅಲ್ಲಮನ ಈ ವಚನ ಸತಿಪತಿಯ ತಾತ್ವಿಕ ನಿಲುವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಅಂದರೆ, ಸತಿಪತಿ ಭಾವದ ನಿಲುಮೆ ಕೆಲವು ವಚನಕಾರರಲ್ಲಿ ಕಂಡುಬಂದರೂ ಅದು ವಿರಳವೂ ಮತ್ತು ಶುಷ್ಕವೂ ಆಗಿದ್ದು ಎಲ್ಲಾ ಶರಣರ






ಒಮ್ಮತದ ನಿಲುವೇನಾಗಿರಲಿಲ್ಲ.

ಲಿಂಗಾಂಗ ಕೂಟ

ಅಂಗೈ ಮೇಲೆ ಇಟ್ಟುಕೊಂಡಿರುವ ಇಷ್ಟಲಿಂಗ ಹಾಗೂ ಅದರ ಕಡೆಗೆ ನೆಡುವ ಕಣ್ಣಿನ ನೋಟವೇ ಲಿಂಗಾಂಗ ಕೂಟ. ಹೃದಯ ಪೀಠದ ಚಿಲ್ಲಿಂಗವು ಮತ್ತು ಮನಸ್ಸಿನ ನೆನಹು ಇವೆರಡು ಕೂಡಿದಲ್ಲಿ ಅದು ಲಿಂಗಾಂಗ ಕೂಟ.

ಆತ್ಮ ಸಂಗವಾದವರ್ಗೆ ಬಹಿರ್ಭಾವವಿಲ್ಲ,
ಇಂದ್ರಿಯಗಳು ಲಿಂಗವಾದವರ್ಗೆ
ವಿಷಯಸೂತಕವಿಲ್ಲ, ಕರಣಂಗಳು
ಲಿಂಗವಾದವರ್ಗೆ ಹಿಂದುಮುಂದೆಂಬ
ಸಂದೇಹವಿಲ್ಲ, ಲಿಂಗಾಲಯ ಮನವಾದವರ್ಗೆ
ಇಹಪರವೆಂಬ ಸಂಶಯವಿಲ್ಲ, ಲೋಕದಂತೆ



ಅಂಬಿಗರ ಚೌಡಯ್ಯ


ನಡೆವರು, ಲೋಕದಂತೆ ನುಡಿವರು, ಮನವು
ಮಹಾಲಿಂಗದಲ್ಲಿ ಪರಿಣಾಮಿಗಳು, ಅಂತಪ್ಪ
ಲಿಂಗಾನುಭಾವಿಗಳ ಲೋಕದ ಪ್ರಪಂಚಿಗಳೆಂದಡೆ,
ಮನೋಮಧ್ಯದಲ್ಲಿಪ್ಪ ಜ್ಯೋತಿರ್ಲಿಂಗವು
ನಗದಿಪ್ಪನೇ?"


ಎಂದು ಅಲ್ಲಮ ಪ್ರಭು ಹೇಳುವನು.

ತನುಕರಗದವರಲ್ಲಿ ಪುಷ್ಪವನ್ನೊಲ್ಲೆಯಯ್ಯಾ ನೀನು ಎನ್ನುವ ಅಕ್ಕ ತನ್ನ ಭೌತಿಕತೆಯ ಗುರುತುಗಳನ್ನು ಕರಗಿಸುವಂತಹ ಅಳಿಸಿಕೊಳ್ಳುತ್ತಾ ಅರಳುವಂತಹ ದಿಕ್ಕಿಗೆ ಮುಖ ಮಾಡುತ್ತಾಳೆ. ಆದರೆ ಆಕೆಯಲ್ಲಿ ಬಹಳ ಘನವಾಗಿ ಗುರುತು ಮೂಡಿಸಿರುವ ಹೆಣ್ತನದ ಅಭಿವ್ಯಕ್ತಿಯಲ್ಲಿಯೇ ವಿಷಯಗಳನ್ನು ಹೇಳಿಕೊಳ್ಳುತ್ತಾಳೆ.

ಇಂತಹ ಭಿನ್ನ ವಿಚಾರ, ಒಲವು ಮತ್ತು ನಿಲುವುಗಳಿಂದ ಕೂಡಿರುವ ಶರಣರು ಅನುಭವ ಮಂಟಪದಲ್ಲಿ ಒಂದಾಗಿದ್ದರು. ಪರಸ್ಪರ ಅಭಿಪ್ರಾಯ ಭೇದಗಳಿದ್ದರೂ, ತಾತ್ವಿಕ ತಿಕ್ಕಾಟಗಳಿದ್ದರೂ ತಾವೆಲ್ಲರೂ ಶರಣರೆಂಬ ಭಾವಕ್ಕೆ ಎಂದಿಗೂ ಚ್ಯುತಿ ಬಂದಿರಲಿಲ್ಲ. ಎಲ್ಲಿಯೂ ನಿಲ್ಲದೇ ಸ್ಥಾಪಿತ ಲಾಂಛನಗಳ ಒಲವಿಲ್ಲದೇ ವಿರಾಗಿಗಳಾಗಿ ತಿರುಗಾಡುತ್ತಿದ್ದ ಅಲ್ಲಮನೂ ಸೇರಿದಂತೆ ಅಸಂಖ್ಯಾತ ಶರಣರನ್ನು ಅನುಭವ ಮಂಟಪಕ್ಕೆ ಎಳೆದು ತಂದ ಕೀರ್ತಿ ಬಸವನಿಗೇ ಸಲ್ಲಬೇಕು. ಅದು ಆಧ್ಯಾತ್ಮ ಅನುಭಾವಿಗಳ ಕೂಟ ಮಾತ್ರವಲ್ಲದೇ ಶರಣ ಕಮ್ಮಟವಾಗಿತ್ತು. ಸಾಮಾನ್ಯರೂ ಕೂಡ ಶರಣರಾಗುವಂತಹ ಕಾರ್ಯಾಗಾರವಾಗಿತ್ತು. ಅದರ ಸ್ಥಾಪಕನಾಗಿರುವ ಬಸವನ ಅಭಿಪ್ರಾಯವನ್ನೂ, ತಾತ್ವಿಕ ನೆಲೆಗಳನ್ನೂ ಪ್ರಶ್ನಿಸುವ ಮತ್ತು ತಿರಸ್ಕರಿಸುವ ಮನಸ್ಥಿತಿ ಅಲ್ಲಿತ್ತೆಂದರೆ ಅದೆಷ್ಟರ ಮಟ್ಟಿಗೆ ಪ್ರಜಾಪ್ರಭುತ್ವದ ಧೋರಣೆಯನ್ನು ಹೊಂದಿತ್ತು ಎನ್ನುವುದಕ್ಕಿಂತ ಮಿಗಿಲಾಗಿ ಪೂರ್ವಾಗ್ರಹಪೀಡಿತ ಮುಕ್ತ ಮನೋಬಯಲಾಗಿತ್ತು ಎನ್ನುವುದನ್ನು ನೆನೆಯುವುದೇ ಒಂದು ಆನಂದ. ■

ಹಿಟ್ಲರ್ ಮತ್ತು ತುಘಲಕ್ ಮೋದಿಯಲ್ಲಿಯೇ ಆವಿರ್ಭವಿಸಿದ





ಮೋದಿಯವರು ಸ್ವಲ್ಪವೂ ದೂರಾಲೋಚನೆಯಿಲ್ಲದೇ ಈ ನೋಟು ಅಮಾನ್ಯ ಯೋಜನೆ ಅನುಷ್ಠಾನಗೊಳಿಸಿದರು ಎನ್ನುವುದು ಶುದ್ಧ ಸುಳ್ಳು. ಅವರು ತುಂಬಾ ದೂರಾಲೋಚನೆ ಮಾಡಿಯೇ ಈ ಅದ್ಭುತ ದೂರಗಾಮಿ ಯೋಜನೆ ತಂದಿರುವುದು ಎಂದು ನಾನು ಪ್ರಮಾಣ ಮಾಡಿ ಹೇಳಬಲ್ಲೆ. ಯಾಕೆ ಗೊತ್ತೇ? ಈ ನೋಟು ಅಮಾನ್ಯದಿಂದ ಸಣ್ಣ ವ್ಯಾಪಾರಿಗಳೆಲ್ಲಾ ನಾಶ ಹೊಂದುತ್ತಾರೆ. ಆಗ ಎಲ್ಲಾ ನಗರವಾಸಿಗಳು ಮಾಲ್‌ಗಳತ್ತ ಹೋಗಲೇಬೇಕಾಗುತ್ತದೆ. ಸಣ್ಣ ವ್ಯಾಪಾರಿಗಳಿಂದ ಸ್ಪರ್ಧೆ ಇಲ್ಲವೆಂದ ಮೇಲೆ ಮಾಲ್‌ಗಳಲ್ಲಿ ಅವರು ವಿಧಿಸುವ ಬೆಲೆಗೇ ಗ್ರಾಹಕರು ಸಾಮಾನು ಕೊಳ್ಳುವುದು ಅನಿವಾರ್ಯವಾಗುತ್ತದೆ. ಆಗ ದೊಡ್ಡ ದೊಡ್ಡ ಮಾಲ್ ಹೊಂದಿರುವ ಉದ್ಯಮಪತಿಗಳಿಗೆ ಲಾಭವೇ ಲಾಭ. ಇದಕ್ಕಿಂತ ಮಿಗಿಲಾಗಿ ಈ ನೋಟು ರದ್ಧತಿಯ ಜತೆಗೆ ಸಹಕಾರ ಬ್ಯಾಂಕುಗಳ ವ್ಯವಹಾರಗಳ ಮೇಲೂ ಪ್ರತಿಬಂಧ ಹಾಕಿರುವುದರಿಂದ ರೈತರಲ್ಲಿ ಬೀಜಕ್ಕೆ, ಗೊಬ್ಬರಕ್ಕೆ, ಟ್ರಾಕ್ಟರ್ ಬಾಡಿಗೆಗೆ ಹಾಗೂ ಕೃಷಿ ಕಾರ್ಮಿಕರಿಗೆ ಕೂಲಿ ಕೊಡಲು ಹಣವಿಲ್ಲದೇ ರೈತರೆಲ್ಲಾ ದಿವಾಳಿ ಏಳುತ್ತಾರೆ; ಜತೆಗೆ ಸಹಕಾರಿ ಬ್ಯಾಂಕುಗಳೆಲ್ಲಾ ಮುಚ್ಚಿಹೋಗುತ್ತವೆ. ಆಗ ಕೇವಲ ದೊಡ್ಡ ಖಾಸಗಿ ಬ್ಯಾಂಕುಗಳು ಮಾತ್ರ ಅಭಿವೃದ್ಧಿ ಹೊಂದುತ್ತವೆ. ಅವು ಕೃಷಿಸಾಲ ಕೊಡುವುದೇ ಇಲ್ಲ. ಆಗ ರೈತರಲ್ಲಿ ಹೆಚ್ಚಿನವರು ಆತ್ಮಹತ್ಯೆ ಮಾಡಿಕೊಂಡರೆ, ಧೈರ್ಯ ಮಾಡಿ ಬದುಕುಳಿದವರೆಲ್ಲಾ ತಮ್ಮ ಜಮೀನನ್ನು ಬಂದ ಅಲ್ಪ ಬೆಲೆಗೇ ನಗರದ ಉದ್ಯಮಿಗಳಿಗೆ ಮಾರದೆ ವಿಧಿಯೇ ಇಲ್ಲ. ಆಗ ಅಂಬಾನಿ ಅದಾಣಿ ಜಿಂದಾಲ್ ಮುಂತಾದವರು ಆ ಬಡ ರೈತರ ಜಮೀನನ್ನು ಜುಜುಬಿ ಬೆಲೆಗೆ ಕೊಂಡುಕೊಳ್ಳಲು ಸಾಧ್ಯ. ಯಾವುದೇ ರೈತ ಸಂಘಟನೆ ಇದಕ್ಕೆ ಅಡ್ಡ ಬರಲು ಸಾಧ್ಯವಿಲ್ಲ. ರೈತರೇ ಇಲ್ಲದಿರುವಾಗ ರೈತ ಸಂಘಟನೆಗಳು ಎಲ್ಲಿರುತ್ತವೆ ಬಿಡಿ.

ಹೀಗೆ ಭೂಮಿ ಕಳೆದುಕೊಂಡ ಬದುಕುಳಿದ ರೈತರು ಹಾಗೂ ಕೃಷಿ ಕಾರ್ಮಿಕರು ಕೊನೆಗೆ ನೌಕರಿಗೆ ಹೋಗುವುದು ಎಲ್ಲಿಗೆ ಗೊತ್ತೇ? ಅದೇ ತಮ್ಮ ಜಮೀನು ಖರೀದಿಸಿರುವ ಉದ್ಯಮಿಯ ಕಾಲಬುಡಕ್ಕೆ ತಾನೇ. ಹೀಗೆ ದೇಶದ ಸಂಪೂರ್ಣ ಕೃಷಿಕ್ಷೇತ್ರ ದೊಡ್ಡ ಉದ್ಯಮಿಗಳ ಕಪಿಮುಷ್ಟಿಯಲ್ಲಿ ಸಿಕ್ಕಿ ಬೀಳುತ್ತದೆ; ಜತೆಗೆ ದೇಶದ ಅರೆ-ಸಾಕ್ಷರ ಮತ್ತು ನಿರಕ್ಷರಿ ಕಾರ್ಮಿಕರೆಲ್ಲಾ ಉದ್ಯಮಿಗಳ ಕೃಪಾಶ್ರಯದಲ್ಲಿ ಬೀಳುತ್ತಾರೆ. ಉದ್ಯಮಿಗಳಿಗೆ ಬೇಕಾದಷ್ಟು ಕಾರ್ಮಿಕರು ಜುಜುಬಿ ಸಂಬಳಕ್ಕೆ ದುಡಿಯಲು ಸಿಗುತ್ತಾರೆ. ಆಗ ಉದ್ಯಮಿಗಳಿಗೆ ಅಂಕುಶ ಹಾಕಲು ಯಾರೂ ಇರುವುದಿಲ್ಲ. ದೇಶದ ಇಡೀ ಆರ್ಥಿಕ ವ್ಯವಸ್ಥೆಗೆ ಅಧಿಪತಿಗಳು ಗುಜರಾತಿ/ಮಾರ್ವಾಡಿ ಉದ್ಯಮಿಗಳೇ ಆಗುತ್ತಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮೋದಿ ಗೆಲ್ಲಲು ಮತ್ತು ಪ್ರಧಾನ ಮಂತ್ರಿ ಆಗಲು ಇಪ್ಪತ್ತು ಸಾವಿರ ಕೋಟಿ ಕಪ್ಪು ಹಣ ಸುರಿದ ಇದೇ ಉದ್ಯಮಿಗಳು ಮುಂದಿನ ದಿನಗಳಲ್ಲಿ ಮೋದಿ ಸರ್ವಾಧಿಕಾರಿ ಆಗಲು ಬಿಲಿಯನ್‌ಗಟ್ಟಲೆ ಸುರಿಯದೇ ಇರುತ್ತಾರೆಯೇ. ಹೀಗೆ ಸಮಯಸಾಧಕ ಉದ್ಯಮಿಗಳ ಬೆಂಬಲದಿಂದ ಭಾರತದ ಸರ್ವಾಧಿಕಾರಿ ಆಗುವ ಮೋದಿಯ ಕನಸು ನನಸಾಗುವುದು ಖಂಡಿತಾ. ಇಂತಹ ಅದ್ಭುತ ದೂರಾಲೋಚನೆ ಹೊಂದಿರುವ ನೋಟು ಅಮಾನ್ಯ ಯೋಜನೆಯನ್ನು ವಿರೋಧ ಪಕ್ಷಗಳು ದೂರಾಲೋಚನೆಯಿಲ್ಲದ ತುಘಲಕ್ ಯೋಜನೆ ಎಂದು ಟೀಕಿಸಿರುವುದು ಶುದ್ಧ ತಪ್ಪು. ಮೋದಿಯ ಯೋಜನೆಯಲ್ಲಿ "ದೂರಾಲೋಚನೆ ಮತ್ತು ದುರಾಲೋಚನೆ" ಎರಡೂ ಇವೆ. ದೇಶದ ಸೇವೆಗಾಗಿ ಮನೆ ಮಠ ಕುಟುಂಬ ಎಲ್ಲಾ ತ್ಯಾಗ ಮಾಡಿರುವ ಮೋದಿಗೆ ಭಾರತದ ಸರ್ವಾಧಿಕಾರಿ ಆಗುವ ನೈತಿಕ ಅಧಿಕಾರ ಇದ್ದೇ ಇದೆ ಅಲ್ಲವೇ. ದೇಶಕ್ಕಾಗಿ ಹೆಂಡತಿ ಕುಟುಂಬ ಪ್ರೇಯಸಿ ಏನನ್ನೂ ತ್ಯಾಗ ಮಾಡದ ಸ್ವಾರ್ಥಿ ವಿರೋಧ ಪಕ್ಷಗಳಿಗೆ ಮೋದಿಯ ದೂರಾಲೋಚನೆ ಅಥವಾ ದುರಾಲೋಚನೆಯನ್ನು ಪ್ರಶ್ನಿಸುವ ನೈತಿಕ ಅಧಿಕಾರ ಇಲ್ಲವೇ ಇಲ್ಲ.

ಹಿಟ್ಲರ್ ಮತ್ತು ತುಘಲಕ್ ಇಬ್ಬರೂ ಒಬ್ಬ ಮೋದಿಯಲ್ಲಿಯೇ ಆವಿರ್ಭವಿಸಿದ ಮೇಲೆ ಭಾರತ ಇಡೀ ವಿಶ್ವಕ್ಕೇ ಗುರುವಾಗಿ ಇಡೀ ಜಗತ್ತಿಗೆ ಮೋದಿ ಅಧಿಪತಿಯಾಗಿ ಯುಗಪುರುಷ ಎನಿಸುತ್ತಾರೆ. ಆಗ ಇಡೀ ವಿಶ್ವದಲ್ಲಿ ಕೇವಲ ವೈದಿಕ ಧರ್ಮ ಮಾತ್ರ ಬೆಳೆದು, ಇಡೀ ವಿಶ್ವವೇ ಹಿಂದೂಮಯವಾಗಿ ಸಂಘ ಪರಿವಾರದ ವೈದಿಕರೆಲ್ಲಾ ಒಂದೊಂದು ದೇಶಕ್ಕೆ ಪ್ರಧಾನಿಯಾಗಿ ಮೋದಿಯಿಂದ ನೇಮಕ ಗೊಳ್ಳುವುದು ಖಚಿತ. ಆಗ ಸಂಘಿಗಳ ವಸುದೈವ ಕುಟುಂಬಕಮ್ ಎನ್ನುವ ನೀತಿ ನಿಜವಾಗುತ್ತದೆ.

ಈಗ ನಮ್ಮಲ್ಲಿಯ ದೇಶದ್ರೋಹಿಗಳಿಗೆ ಅಡಿಗಡಿಗೆ ಪಾಕಿಸ್ತಾನಕ್ಕೆ ಹೋಗಿ ಎಂದು ಊಳಿಡುವ ಸಂಘಿಗಳು ಆಗ ನಮ್ಮಂತಹ ದೇಶದ್ರೋಹಿಗಳಿಗೆ ಮಂಗಳ ಲೋಕಕ್ಕೆ ಹೋಗಿ ಎಂದು ಘೀಳಿಡುತ್ತಾರೋ ಏನೋ. ನಾವು ಈಗಲೇ ಮಂಗಳಯಾನಕ್ಕೆ ಟಿಕೆಟ್ ಬುಕ್ ಮಾಡಲು ಹೋದರೆ ನಮ್ಮ ರಿಸರ್ವ್ ಬ್ಯಾಂಕಿನವರು ಎಲ್ಲಾ ಟಿಕೆಟುಗಳನ್ನು ಅವರೇ ಬುಕ್ ಮಾಡಿರುವ ಗುರುತಿಗಾಗಿ ಹೊಸನೋಟುಗಳಲ್ಲಿ ಮಂಗಲಯಾನದ ಚಿತ್ರ ಹಾಕಿ ಈ ಹೊಸ ನೋಟನ್ನೇ ವಿಮಾನದ ಟಿಕೆಟಿನ ಹಾಗೆ ಕಾಣುವಂತೆ ಡಿಸೈನ್ ಮಾಡಿಬಿಟ್ಟಿದ್ದಾರೆ. ಇನ್ನು ನಾವು ದೇಶದ್ರೋಹಿಗಳು ತ್ರಿಶಂಕುಲೋಕಕ್ಕೆ ಹೋಗುವುದು ಸಾಧ್ಯವೆಂದು ಯೋಚಿಸಿದರೆ ಅಲ್ಲಿಯೂ ಕ್ಷತ್ರಿಯ ವಿಶ್ವಾಮಿತ್ರ ವೈದಿಕರಿಗೆ ದೊಡ್ಡ ದೊಡ್ಡ ಸೈಟುಗಳನ್ನು ಬುಕ್ ಮಾಡಿಯಾಗಿದೆ. ನಮ್ಮ ಪಶ್ಚಿಮ ಕರಾವಳಿಗೆ ಹೋಗೋಣವೆಂದರೆ ಅಲ್ಲಿ ಪರಶುರಾಮ ಕೊಡಲಿ ಹಿಡಿದುಕೊಂಡು ನಮ್ಮನ್ನು ತರಿಯಲು ಕಾದು ನಿಂತಿದ್ದಾನೆ. ಸಮುದ್ರದ ಅಡಿಗೆ ಹೋಗೋಣವೆಂದರೆ ಅಲ್ಲಿ ಭೂದೇವಿಯನ್ನೇ ಅಪಹರಿಸಿ ಮದುವೆಯಾದ ವರಾಹ ದೇವರು ಮತ್ತು ವಾಮನ ಇಡೀ ಪಾತಾಳದ ಜಾಗ ಆಕ್ರಮಿಸಿ ಬಿಟ್ಟಿದ್ದಾರಂತೆ. ಇನ್ನು ಗತ್ಯಂತರವಿಲ್ಲದೆ ನಾವು ದೇಶದ್ರೋಹಿಗಳೆಲ್ಲಾ ದಕ್ಷಿಣ ಅಮೆರಿಕದ ಅಮೆಜೋನ್ ಜಂಗಲ್ಲಿನಲ್ಲಿರುವ ನಮ್ಮ ಪ್ರಿಯ ಬಲೀಂದ್ರ ಚಕ್ರವರ್ತಿಯ ಶರಣುಗೆ ಹೋಗುವುದೊಂದೇ ಉಳಿದಿರುವ ದಾರಿ.

- ಜೆ.ರವಿಕಿರಣ, ಮೈಸೂರು

'ಸುಳ್ಳಿನ ಸರದಾರ, ಫೇಕೂ ಮಾಸ್ಟರ್'


ನವೆಂಬರ್ ಒಂಬತ್ತಕ್ಕೆ ಜಪಾನಿಗೆ ಹೋದ ಮೋದಿ ಅಲ್ಲಿ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ "ಇಂದು ಬೆಳಗ್ಗೆ ದಿಲ್ಲಿಯ ವೃದ್ಧಾಶ್ರಮದಲ್ಲಿರುವ ಒಬ್ಬ ಮಹಿಳೆಯನ್ನು ನಾನು ಭೇಟಿಯಾದಾಗ, ಆ ಮಹಿಳೆ ತನ್ನ ಬ್ಯಾಂಕ್ ಖಾತೆಗೆ ತನ್ನ ಮಗ ಇವತ್ತೇ ಎರಡೂವರೆ ಲಕ್ಷ ... ಅದಕ್ಕಾಗಿ ನಿಮ್ಮ ನೋಟು ರದ್ಧತಿ ಯೋಜನೆಗೆ ... ಎಂದು ಹೇಳಿದಳು." ಎಂದು ಮೋದಿ ... ನವಂಬರ್ 8ರ ರಾತ್ರಿ 8 ಗಂಟೆಗೆ ಮೋ... ರದ್ಧತಿ ಘೋಷಿಸಿ ಅದರ ಮರುದಿನ ಮು... ಎಂಟು ಗಂಟೆಗೆ ಅವರು ಜಪಾನಿಗೆ ಹಾರಿದ...

ಮೋದಿಯವರ ವೃದ್ಧಾಶ್ರಮದ ಕಥೆ ... ಎನ್ನುವುದಕ್ಕೆ ಸಾಕ್ಷಿ 9ನೇ ತಾರೀಖಿಗೆ ಬ... ಬಂದ್ ಇದ್ದದ್ದು. ನೋಟು ರದ್ದು ಮಾಡಿ... ಗಂಟೆಗಳಲ್ಲಿ ರಾತ್ರಿಯೇ ಆ ವೃದ್ಧ ಮಹಿಳೆ... ಖಾತೆಗೆ ಯಾರು ನಗದು ಹಣ ಹಾಕಲು ಸಾ... ಬಂದ್ ಇದ್ದಾಗ ಆ ಮಹಿಳೆಗೆ ತನ್ನ ಖಾತೆ... ನಗದು ದುಡ್ಡು ಹಾಕಿದ್ದು ಹೇಗೆ ಗೊತ್ತಾಯಿತು... ಜಪಾನಿಗೆ ಹೋಗುವ ದಿನ ಬೆಳ್ಳಂಬೆಳಗ್ಗೆ ಆ ... ಹೋಗಿದ್ದು ಎಷ್ಟು ಸತ್ಯ?

ಒಟ್ಟಾರೆ 'ಸುಳ್ಳಿನ ಸರದಾರ, ಫೇಕೂ ಮಾ... ಬಿರುದು ಮೋದಿಗೆ ಫಿಟ್ ಆಗುತ್ತದೆ. ಇಲ್ಲಿ ಮ... ನಮ್ಮ ನೆರೆಯಲ್ಲಿರುವ ಒಬ್ಬ 70 ವರ್ಷದ ಗು... ಮೋದಿಯ ತವರು ವಡ್ನಾಗರ್ ಎಂಬ ... ಆಗಿದ್ದು ಅವರು ಯಾವಾಗಲೂ ಹೇಳುತ್ತಿ... ನರೇಂದ್ರ ಚಿಕ್ಕಂದಿನಿಂದಲೂ ಕಂಪಲ್ಸಿವ್ ಲಾಯ... ಚಿಕ್ಕಂದಿನಲ್ಲಿ ವಿನಾಕಾರಣ ಮನೆಯಲ್ಲಿ ಸು... ಬಡಾಯಿ ಕೊಚ್ಚುತ್ತಿದ್ದುದ್ದಕ್ಕೆ ತಂದೆತಾಯಿಯ... ಪೆಟ್ಟು ತಿನ್ನುತ್ತಿದ್ದ" ಎಂದು. ಕಂಪಲ್ಸಿವ್ ...



ಚೆನ್ನದಂತ ಸಿಂಗ್, ಹಿತ್ತಾಳೆ ಮೋ...



ಮೋದಿ ನೋಟು ರದ್ಧತಿ ಮಾಡಿದ ಎರಡನೇ ದಿನ ಅಮಿತಾಭ್ ಬಚ್ಚನ್ ಈ ಅನಾಣ್ಯೀಕರಣ ಹೊಗಳಿದ್ದನ್ನು ದೇಶದ ಎಲ್ಲಾ ಪತ್ರಿಕೆಗಳು ಮುಖಪುಟದಲ್ಲಿ ಹಾಕಿದ್ದವು. ಆದರೆ ಎರಡು ವಾರಗಳ ನಂತರ ಅದೇ ಅಮಿತಾಭ್ ಬಚ್ಚನ್ನರ ಪತ್ನಿ ಜಯಾ ಬಚ್ಚನ್ "ನೋಟು ರದ್ಧತಿಯಿಂದ 50 ದಿನಗಳ ನಂತರ ಭಾರತ ಸ್ವರ್ಗವಾಗುತ್ತದೆ ಆದರೆ ಭಾರತೀಯರು ಸ್ವರ್ಗಸ್ಥರಾಗುತ್ತಾರೆ" ಎಂದು ವ್ಯಂಗ್ಯವಾಗಿ ಟೀಕಿಸಿದ್ದನ್ನು ಹೆಚ್ಚಿನ ಪತ್ರಿಕೆಗಳು ವರದಿ ಮಾಡಿಲ್ಲ. ಅಮಿತಾಭ್ ಬಚ್ಚನ್ನರಿಗೆ ಮೋದಿಯನ್ನು ಹೊಗಳದೇ ಗತ್ಯಂತರವಿಲ್ಲ. ಕಾರಣ ಅಮಿತಾಭ್ ಮತ್ತು ಅವರ ಸೊಸೆ ಐಶ್ವರ್ಯಾ ರೈ ಈ ಇಬ್ಬರ ಹೆಸರೂ ಪನಾಮಾ ಪೇಪರ್ಸ್‌ನಲ್ಲಿ ಇರುವುದರಿಂದ ಅವರಿಬ್ಬರ ಮೇಲೆ ತಮ್ಮ ಕಪ್ಪು ಹಣವನ್ನು ಪನಾಮಾ ದ್ವೀಪಗಳ ತೆರಿಗೆ ಸ್ವರ್ಗಗಳಲ್ಲಿ ಬಚ್ಚಿಟ್ಟಿರುವುದನ್ನು ಮೋದಿ ಸರಕಾರ ಹೊರತೆಗೆದು ಸೇಡು ತೀರಿಸಿಕೊಳ್ಳುವ ಸಾಧ್ಯತೆ ಇತ್ತು. ಜತೆಗೆ ಅವರೇ ಗುಜರಾತ್ ಟೂರಿಸಂನ ಕೋಟ್ಯಾಂತರ ಗುತ್ತಿಗೆಯ ಬ್ರ್ಯಾಂಡ್ ಅಂಬಾಸಡರ್. ಹಾಗಾಗಿ ಮೋದಿಯನ್ನು ಹೊಗಳುವ ಅನಿವಾರ್ಯತೆ ಬಚ್ಚನ್ನರಿಗೆ ಇತ್ತು.

ಅಮಿತಾಭರು ಅರ್ಥಶಾಸ್ತ್ರಜ್ಞರಲ್ಲ, ಹಾಗಾಗಿ ಅವರ ಹೇಳಿಕೆಗೆ ಪತ್ರಿಕೆಗಳು ಅಷ್ಟು ಮಹತ್ವ ಕೊಡಬೇಕಾಗಿರಲಿಲ್ಲ. ಆದರೂ ಅವರ ಹೇಳಿಕೆಗೆ ಭಾರಿ ಮಹತ್ವ ಕೊಟ್ಟ ಪತ್ರಿಕೆಗಳು ನೋಬೆಲ್ ಪ್ರಶಸ್ತಿ ವಿಜೇತ ಹಾಗೂ ನಿಜವಾದ ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೇನ್ ನೋಟುರದ್ಧತಿಯ ಬಗ್ಗೆ ಕೊಟ್ಟ ಹೇಳಿಕೆಗೆ ಪತ್ರಿಕೆಗಳು ಮಹತ್ವ ಕೊಟ್ಟಂತೆ ಕಾಣುತ್ತಿಲ್ಲ. ಅಮಾರ್ತ್ಯ ಸೇನರು ಜಗತ್ತೇ ಗೌರವಿಸುವ ಅರ್ಥಶಾಸ್ತ್ರಜ್ಞರು. ಅವರು ಮೋದಿಯವರಂತೆ ಸಾಮಾನ್ಯ ಮೆಟ್ರಿಕ್ ಪಾಸ್ ಅಲ್ಲ. ಹಾಗಿರುವಾಗ ಅಮಾರ್ತ್ಯ ಸೇನ್ ಹೇಳಿರುವ ಐದೇ ಶಬ್ದದ ಮಾತು ಎಷ್ಟೊಂದು ಅರ್ಥಗರ್ಭಿತ ಎಂದು ಗಮನಿಸಬೇಕು.

ಮೋದಿಯ ನೋಟು ರದ್ಧತಿ ಬಗ್ಗೆ ಅಮಾರ್ತ್ಯ ಸೇನ್ ಹೇಳಿದ್ದು: "... ಸಕ್ಸಸ್‌ಫುಲ್ ಬಟ್ ಪೇಶಂಟ್ ಡೆಡ್. ಅಂದರೆ ಶಸ್ತ್ರಕ್ರಿಯೆ ಯಶಸ್ವಿಯಾಯಿ... ರೋಗಿ ಮರಣ ಹೊಂದಿದನು ಎಂದು. ಹಾಗಾಗಿ ಮೋದಿಯ ನೋಟಿನ ಸ... ನಿಜವಾಗಿ ಕಪ್ಪುಹಣ ಹೊಂದಿರುವ ಶ್ರೀಮಂತರಿಗೆ ಏನೂ ಆಗಲಿಲ್ಲ, ಆದರ... ಮಾತ್ರ ಸತ್ತುಹೋದರು."

ಸೇನ್‌ರಂತಹ ವಿಶ್ವಸ್ತರದ ಅರ್ಥಶಾಸ್ತ್ರಜ್ಞರನ್ನು ಮೋದಿ ಗುರುತಿಸಿ ಸಲಹೆ... ಅವರಿಂದ ಇಂತಹ ದೊಡ್ಡ ಪ್ರಮಾದ ಆಗುತ್ತಿರಲಿಲ್ಲ ಮತ್ತು 78 ಜನ... ಸಾಯುತ್ತಿರಲಿಲ್ಲ. ಆದರೆ ತಾನೇ ಕೌಟಿಲ್ಯನ ಅಪರಾವತಾರ, ಮಹಾ ಬುದ್ಧಿ... ಏನು ಮಾಡಿದರೂ ಜನರು ಕುರುಡಾಗಿ ಸ್ವೀಕರಿಸುತ್ತಾರೆ ಎಂಬ ಭ್ರಮೆಯ... ಇವೆಲ್ಲಾ ಹೊಳೆಯುವುದಿಲ್ಲ. ಈ 78 ಅಮಾಯಕ ಬಡವರ ಮರ... ಪ್ರಕೃತಿಯೇ ತಪ್ಪಿತಸ್ಥರಿಗೆ ಬುದ್ಧಿ ಕಲಿಸುವುದು.

2014 ಜನವರಿಯಲ್ಲಿ ಡಾ. ಮನಮೋಹನ್ ಸಿಂಗ್ ಸರಕಾರ ... ಮುಂಬಿ ಚಲಾವಣೆಗೆ ತಂದ 500 ಮತ್ತು 1000 ನೋಟುಗಳನ್ನು ರದ್ದು ... ಇದೇ ಬಿಜೆಪಿ ಬೀದಿಗಿಳಿದು ದೊಡ್ಡ ನಾಟಕ ಆಡಿತ್ತು. ಮನಮೋಹನ್ ಸಿಂ... ಬಡಜನರ ಬೆನ್ನಿಗಿರಿದಿದೆ ಎಂದು ಆಗ ಬಿಜೆಪಿ ವಕ್ತಾರೆ ಮೀನಾಕ್ಷಿ ಲೇಖೀ ಬೊ... (ಅದರ ರಿಕಾರ್ಡ್ ಈಗಲೂ ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿ... ಆಗ ಈ ನೋಟು ರದ್ಧತಿಯಿಂದ ಜನರಿಗೆ ಯಾವುದೇ ತೊಂದರೆ ಆಗಿರ... ಅತ್ಯಂತ ಸುವ್ಯವಸ್ಥಿತವಾಗಿ ಪೂರ್ವ ಸಿದ್ಧತೆಯೊಂದಿಗೆ ನಡೆದಿತ್ತು. ಯಾಕೆ... ಪ್ರಧಾನಿ ಆಗಿದ್ದವರು ವಿಶ್ವವೇ ಗೌರವಿಸುತ್ತಿದ್ದ ಆರ್ಥಿಕ ತಜ್ಞ ಡಾ.ಮ... ಸಿಂಗ್. ಆದರೆ ಈಗ ಮೋದಿ ಅರೆಬೆಂದ ಸ್ಕೀಮ್‌ನೊಂದಿಗೆ ಯಾವುದೇ ಮುಂದ... ಮತ್ತು ಪೂರ್ವ ಸಿದ್ಧತೆ ಇಲ್ಲದೇ ನೋಟು ರದ್ಧತಿ ಯೋಜನೆ ಜಾರಿಗೊಳಿಸಿ... ದೇಶದ ಪ್ರತಿಯೊಂದು ಕ್ಷೇತ್ರದ ವ್ಯಕ್ತಿಗೂ ತೊಂದರೆ ಆಗಿದೆ. ಇದುವೇ ವ್ಯ... ಅಂತರರಾಷ್ಟ್ರೀಯ ಖ್ಯಾತಿಯ ನುರಿತ ಆರ್ಥಿಕ ತಜ್ಞನ ಯೋಜನೆಗೂ ... ಅರೆಸಾಕ್ಷರ ಪ್ರಚಾರಪ್ರಿಯನ ಅರೆಬೆಂದ ಯೋಜನೆಗಳಿಗೂ.

ಚಿನ್ನ ಯಾವಾಗಲು ಚಿನ್ನವೇ, ಹಿತ್ತಾಳೆ ಯಾವಾಗಲೂ ಹಿತ್ತಾಳೆಯೇ. ಚಿ... ಮನ್ಮೋಹನ್ ಸಿಂಗ್ ಮತ್ತು ಹಿತ್ತಾಳೆ ಎಂಬುದು ಮೋದಿ. ಒಬ್ಬ ಟ್ರಕ್ ... ವಿಮಾನದ ಪೈಲೆಟ್ ಸೀಟಿನಲ್ಲಿ ಕೂಡಿಸಿದರೆ ಅವನು ಪ್ರಮಾದ ಮಾಡದ... ಸಾಧ್ಯವೇ?


- ರಾಮಕೃಷ್ಣ ಎ.ಕೆ, ...

...ಶ್ ಲಾಯರ್, ಪಟ್ಟಾ ಝೂಟಾ, ವೃತ್ತಿಪರ ಸುಳ್ಳುಗಾರ ... ಆ ಊರಿನಲ್ಲೆಲ್ಲಾ ಮೋದಿಗೆ ಚಕ್ಕಂದಿನಲ್ಲಿಯೇ ...ದ್ದಿ ಇತ್ತಂತೆ. ಈ ನರೇಂದ್ರ ಮೋದಿ ಗುಜರಾತ್ ...ಮಂತ್ರಿ ಆದಾಗಲೂ ಆ ಗೀಳು ಮುಂದುವರಿಸಿ ... ದೇಶದ ಪ್ರಧಾನಿಯಾದ ಮೇಲೂ ವಿನಾಕಾರಣ ... ಸುಳ್ಳು ಹೇಳುವ ಮತ್ತು ಬಡಾಯಿ ಕೊಚ್ಚುವ ...ಚಕ್ಕಂದಿನ ಗೀಳು ಬಿಡದಿರುವುದು ಹುಟ್ಟುಗುಣ ...ಹತ್ತಿದರೂ (ಪ್ರಧಾನಿಯಾದರೂ) ಹೋಗದು ಎಂಬ ...ಮನ್ನು ಸತ್ಯವಾಗಿಸುತ್ತದೆ.

- ಪ್ರತೀಶ್ ಗಾಣಿಗ, ಮುಂಬೈ

...ತವರನ್ನು ಉಪವಾಸ ಕೆಡುವುವುದು ಸಣ್ಣ ಹೆರಿಗೆ ನೋವೇ?

...ನೋಟು ರದ್ಧತಿಯಿಂದ ಇಡೀ ದೇಶ ...ಭವಿಸುತ್ತಿರುವ ಭಯಂಕರ ಕಷ್ಟನಷ್ಟಗಳನ್ನು ಮಹಿಳೆಯ ... ನೋವಿಗೆ ಬಿಜೆಪಿಯವರು ಹೋಲಿಸುತ್ತಿದ್ದಾರೆ. ... ನೋವಿನ ನಂತರ ಹುಟ್ಟಿದ ಮಗುವಿನ ಅಳುವಿನಿಂದ ...ಯವರಿಗೆ ಸಂತಸ ಆಗುವುದು ಸಹಜ. ಆದರೆ ನೋಟು ...ಯಿಂದ ನೋವಿನ ಬಳಿಕ ಸಂತಸ ಎನ್ನುವುದು ...ರ್ಪಿತವು. ಉದಾಹರಣೆಗೆ: ನಮ್ಮ ಹಳ್ಳಿಗಳಲ್ಲಿ ಬಹಳಷ್ಟು



...ರ ಮನೆಯಲ್ಲಿ ಸರಿಯಾದ ಬಾಣಂತಿ ವ್ಯವಸ್ಥೆ ಇಲ್ಲದೇ ... ನೋವಿನ ನಂತರ ಒಂದೋ ಮಗು ಸಾಯುತ್ತದೆ ...ವಾ ತಾಯಿ ಸಾಯುತ್ತಾಳೆ ಅಥವಾ ಇಬ್ಬರೂ ...ಯುತ್ತಾರೆ. ಈಗ ಮೋದಿ ಕೊಟ್ಟಿರುವ ಹೆರಿಗೆ ನೋವು ...ಇಂತಹದ್ದೇ ಸಾವು ತರುವ ನೋವು.

...ಬಾಣಂತನ ಹೇಗೆ ಮಾಡಿಸುವುದು ಎಂದು ಗೊತ್ತೇ ... ನರ್ಸ್ ಕೈಯಲ್ಲಿ ಗರ್ಭಿಣಿಯನ್ನು ಕೊಟ್ಟು ತಾಯಿ ... ಮಗು ಇಬ್ಬರನ್ನೂ ಕೊಂದಿರುವ ಪರಿ ಆಗಿದೆ ...ದಿಯೆಂಬ ಅರ್ಥಶಾಸ್ತ್ರದ ಪ್ರಾಥಮಿಕ ಜ್ಞಾನವೂ ಇಲ್ಲದ ...ಯಿಂದ. ಕೇವಲ ಆರು ಕೋಟಿ ಜನಸಂಖ್ಯೆ ಇರುವ ...ರಾತಿನಂತಹ ಒಂದು ಸಣ್ಣ ರಾಜ್ಯದ ಆಡಳಿತ ...ವುದು ಹಾಗೂ ಗುಜರಾತಿಗಿಂತ ಇಪ್ಪತ್ತು ಪಟ್ಟು ... ದೊಡ್ಡದಿರುವ ಹಾಗೂ ಗುಜರಾತಿಗಿಂತ ನಾಲ್ಕು ... ಹೆಚ್ಚು ಸಂಕೀರ್ಣ ಸಾಮಾಜಿಕ ವ್ಯವಸ್ಥೆ ಮತ್ತು ...ಲ ಆರ್ಥಿಕ ವ್ಯವಸ್ಥೆ ಹೊಂದಿರುವ 5 ಲಕ್ಷ ...ಳಿರುವ ಈ ದೇಶದಲ್ಲಿ ಮೋದಿಯಂತಹ ನಕಲಿ ...ಯ ವ್ಯಕ್ತಿ ಯಾವುದೇ ನುರಿತ ಅರ್ಥಶಾಸ್ತ್ರಜ್ಞರ ಸಲಹೆ ... ನೋಟು ರದ್ಧತಿಯಂತಹ ಬೃಹತ್ ಯೋಜನೆಯನ್ನು ...ಪೆದ್ದಾಗಿ ಅನುಷ್ಠಾನಗೊಳಿಸಿದ್ದರಿಂದ ಮುಂದಿನ ...ಗಳಲ್ಲಿ ಇಡೀ ದೇಶದ ಅರ್ಥ ವ್ಯವಸ್ಥೆಯ ಮೇಲೆ ... ನಕಾರಾತ್ಮಕ ಪರಿಣಾಮ ಬೀರುವುದು ಖಂಡಿತ.

...ಈಗಾಗಲೇ ಕೇವಲ 20 ದಿನಗಳಲ್ಲಿ ಸುಮಾರು ... ಲಕ್ಷ ದಿನಗೂಲಿ ಕಾರ್ಮಿಕರು ಕೆಲಸ ...ಕೊಂಡಿರುವರು ಹಾಗೂ ಮುಂದಿನ 50 ದಿನಗಳಲ್ಲಿ ...ಘಟಿತ ಕಾರ್ಮಿಕ ವಲಯದಲ್ಲಿ ಕನಿಷ್ಠ 30 ಲಕ್ಷ ...ಕರು ಕೆಲಸ ಕಳೆದುಕೊಳ್ಳಲಿರುವರು ಎಂದು ಆರ್ಥಿಕ ... ಅಂದಾಜಿಸಿದ್ದಾರೆ. ಮೋದಿ ಸರಕಾರದ ದೃಷ್ಟಿಯಲ್ಲಿ ...ಷ್ಟು ಲಕ್ಷ ಬಡವರಿಂದ ಅವರ ಜೀವನ ನಿರ್ವಹಣೆಯ ...ದವನ್ನೇ ಕಿತ್ತುಕೊಂಡು ಅವರ ಕುಟುಂಬಗಳನ್ನೆಲ್ಲಾ ...ವಾಸ ಕೆಡುವುವುದು ಸಣ್ಣ ಹೆರಿಗೆನೋವೇ?

...ಮೋದಿ ಸಹ ಹಳ್ಳಿಯಲ್ಲಿ ಹುಟ್ಟಿ ಬೆಳೆದಿಲ್ಲ, ವಡ್ನಾಗರ್ ... ಪಟ್ಟಣವೊಂದರಲ್ಲಿ ಕ್ಯಾಂಟೀನ್ ನಡೆಸಿದ ಮಾತ್ರಕ್ಕೆ ...ದೂರದ ಹಳ್ಳಿಗಳ ವಾಸ್ತವ ಪರಿಸ್ಥಿತಿ ಅರ್ಥವಾಗು...ಲ್ಲ. ಹಾಗಾಗಿ ಅವರಿಗೆ ಭಾರತದ ಹಳ್ಳಿಗಳ ನಾಡಿಮಿಡಿತ ... ಇಲ್ಲ. ಜತೆಗೆ ಮೋದಿ ಸುತ್ತ ಇರುವ ಮಂದಿಯಾಗ ... ನಗರದಲ್ಲಿ ಹುಟ್ಟಿ ಬೆಳೆದ ಮೇಲ್ವರ್ಗದ ಜನರು. ... ಜೀವನದಲ್ಲಿ ತುಳಸಿ ಗಿಡ ಬಿಟ್ಟು ಬೇರೇನೂ ... ತಮ್ಮ ಊಟದ ತಟ್ಟೆಯಲ್ಲಿ ಇರುವ ತರಕಾರಿ ... ಅಕ್ಕಿ ಹೇಗೆ ಬೆಳೆಯುತ್ತದೆ ಎಂದೂ ಇವರಿಗೆ ...ಲ್ಲ. ಇವರಿಗೆ 5 ಲಕ್ಷ ಹಳ್ಳಿಗಳ ಆರ್ಥಿಕ ವ್ಯವಸ್ಥೆ ... ಸಾಮಾಜಿಕ ವ್ಯವಸ್ಥೆಯ ಸರಿಯಾದ ಜ್ಞಾನವೂ ...ಇಲ್ಲ. ಕೇವಲ ದಪ್ಪದಪ್ಪ ಅರ್ಥಶಾಸ್ತ್ರದ ಗೊಡ್ಡು ಪುಸ್ತಕಗಳನ್ನು ಓದಿದ ಮಾತ್ರಕ್ಕೆ ಭಾರತದ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ನೈಜ ಜ್ಞಾನ ಬರುವುದೇ ಇಲ್ಲ. ಹಳ್ಳಿಯ ಸಂಕೀರ್ಣ ಆರ್ಥಿಕ ವ್ಯವಸ್ಥೆ ಮತ್ತು ಅಲ್ಲಿ ನಗದು ಹಣದ ಪಾತ್ರ, ಇವರೆಲ್ಲಾ ಎಂದೂ ಅಧ್ಯಯನ ಮಾಡಿದವರಲ್ಲ. ಹಳ್ಳಿಯ ಅನಕ್ಷರಸ್ಥ ಜನರೊಡನೆ ಬೆರೆತು ಎಂದೂ ನೇರವಾಗಿ ವ್ಯವಹಾರ ಮಾಡಿ ಇವರಿಗೆ ಗೊತ್ತಿಲ್ಲ. ಇಂತಹವರು ಬಡಜನರ ಮೂಗಿಗೆ ತುಪ್ಪ ಸವರಿ ನೋಟು ರದ್ಧತಿಯಿಂದ ಮುಂದೆ ಭಾರಿ ಒಳ್ಳೆಯ ದಿನ ಬರಲಿವೆ ಎಂದು ಕಣಿ ಹೇಳುತ್ತಿದ್ದಾರೆ. ಮೋದಿ ಪ್ರಧಾನಿಯಾದರೆ ಭಾರತಕ್ಕೆ ಶನಿ ಬಡಿದಂತೆ ಎಂದು ದ್ವಾರಕೆಯ ಶಂಕರಾಚಾರ್ಯರು ಮೂರು ವರ್ಷದ ಹಿಂದೆಯೇ ಹೇಳಿದ್ದು ನಿಜವಾಗುತ್ತಿದೆ.

- ಆರ್. ಜಗದೀಶ್ ಗಾಂಭೀರ್, ಮಂಗಳೂರು

ಮೋದಿಯ ಭಕ್ತರಿಗೇ ನಿರಾಶೆ ಆಗಿದೆ

ಮೋದಿ ಆಪ್ ಮೂಲಕ ಮಾಡಿದ ಸಮೀಕ್ಷೆಯಲ್ಲಿ 92% ಜನರು ಮೋದಿಯವರ ನೋಟು ರದ್ಧತಿಯನ್ನು ಸಮರ್ಥಿಸಿ ವೋಟು ಮಾಡಿದ್ದಾರೆ ಎಂದು ಪೇಡ್ ಮಾಧ್ಯಮಗಳು ಘೋಷಿಸಿವೆ. ಬಿಎಸ್‌ಪಿ ನಾಯಕಿ ಮಾಯಾವತಿಯವರು ಈ ಸಮೀಕ್ಷೆ ನಕಲಿ ಎಂದು ಆರೋಪಿಸಿದ್ದಾರೆ. ಮಾಯಾವತಿ ಆರೋಪಿಸಿರುವಂತೆ ಈ ಸಮೀಕ್ಷೆ ನಕಲಿಯಾಗಿರುವುದು ನಿಜವಾದರೂ ಅದರಲ್ಲಿ ಒಂದು ಸಣ್ಣ ಭಾಗ ಅಸಲಿಯಾಗಿದೆ. ಹೇಗೆಂದರೆ- ಆರೆಸ್ಸೆಸ್ ಮತ್ತು ಬಿಜೆಪಿ ಕೂಡಿ ಒಟ್ಟು ಸದಸ್ಯರ ಸಂಖ್ಯೆ ಒಂದು ಕೋಟಿಗೂ ಹೆಚ್ಚಿದೆ. ಆದರಲ್ಲಿ ಸುಮಾರು ಹತ್ತು ಲಕ್ಷ ಸದಸ್ಯರು ಮಾತ್ರ ಸ್ಮಾರ್ಟ್ ಫೋನ್ ಹೊಂದಿದ್ದಾರೆ. ಆದರೆ ಇವರಲ್ಲಿ ಕೇವಲ ಅರ್ಧದಷ್ಟು ಸದಸ್ಯರು ಮಾತ್ರ ಸಮೀಕ್ಷೆಯಲ್ಲಿ ವೋಟ್ ಮಾಡಿದ್ದಾರೆ; ಅಂದರೆ ಕೇವಲ 5 ಲಕ್ಷ (50%) ಜನ ಆರೆಸ್ಸೆಸ್ ಮತ್ತು ಬಿಜೆಪಿ ಸದಸ್ಯರು ಸಮೀಕ್ಷೆಯಲ್ಲಿ ನೇರ ಭಾಗವಹಿಸಿದ್ದಾರೆ. ಉಳಿದ ಐದು ಲಕ್ಷ ಸ್ಮಾರ್ಟ್ ಫೋನ್ ಹೊಂದಿರುವ ಸದಸ್ಯರು ಈ ಮೋದಿಯ ಸಮೀಕ್ಷೆಯಿಂದ ಏನೂ ಪ್ರಯೋಜನ ಇಲ್ಲ ಎಂದು ಅರಿತು ಉದಾಸೀನ ಮಾಡಿದ್ದಾರೆ. ಅದರ ಅರ್ಥ ಇವರಿಗೆ ಮೋದಿಯ ನೋಟು ರದ್ಧತಿಯಿಂದ ಸಂತಸವಾಗಿಲ್ಲ ಎಂಬುದು ಸ್ಪಷ್ಟ.

ಈ ಐದು ಲಕ್ಷ ವೋಟ್ ಮಾಡಿದ ಸದಸ್ಯರಲ್ಲಿ 92% ಅಂದರೆ 4 ಲಕ್ಷ 60 ಸಾವಿರ ಸದಸ್ಯರು ಮಾತ್ರ ಮೋದಿಯ ಪರವಾಗಿ ವೋಟ್ ಮಾಡಿದ್ದಾರೆ. ಉಳಿದ 40 ಸಾವಿರ ಸದಸ್ಯರು ನೇರವಾಗಿ ಮೋದಿ ಮಾಡಿದ್ದು ಸರಿಯಿಲ್ಲ ಎಂದು ವೋಟ್ ಮಾಡಿದ್ದಾರೆ. ಇದರ ಅರ್ಥ ವೋಟ್ ಮಾಡಿರುವ ಮೋದಿಯ ಪಕ್ಕಾ ಭಕ್ತರಲ್ಲಿಯೇ 8% ಜನರು ಮೋದಿಯಿಂದ ನಿರಾಶರಾಗಿರುವುದು ಆಶ್ಚರ್ಯವಲ್ಲವೇ!




ಮೋದಿ ಭಕ್ತರೇ ಈ ಪರಿ ಮೋದಿಯ ವಿರುದ್ಧ ವೋಟ್ ಮಾಡಿದ್ದಾರೆ ಎಂದರೆ ಇನ್ನು ಮೋದಿಯ ಭಕ್ತರಲ್ಲದವರಲ್ಲಿ ಎಷ್ಟು ಪರ್ಸೆಂಟ್ (?) ಜನರು ಮೋದಿಯ ವಿರುದ್ಧ ಇದ್ದಾರೆ ಎಂದು ಊಹಿಸುವುದು ಸುಲಭ.

ಈಗ 8% ಮೋದಿ ಭಕ್ತರು ಮೋದಿಯ ವಿರುದ್ಧ ಇಷ್ಟೊಂದು ಧೈರ್ಯವಾಗಿ ವೋಟ್ ಮಾಡಿ "ಮೀರ್ ಸಾದಿಕ್" ಅನಿಸಿಕೊಂಡಿದ್ದಾರೆ ಎಂದರೆ ಇನ್ನು ದಿನಗಳೆದಂತೆ ನೋಟು ರದ್ಧತಿಯ ಕೆಟ್ಟ ಪರಿಣಾಮ ಕ್ರಮೇಣ ಅರಿವಿಗೆ ಬಂದಾಗ ಈ ಮೋದಿಯ ಕುರುಡುಭಕ್ತರ ಸಂಖ್ಯೆ ಎಷ್ಟು ವೇಗವಾಗಿ ಕಡಿಮೆಯಾಗಬಹುದು ಎಂದು ನಾವು ಅಂದಾಜಿಸಬಹುದು. ಮೋದಿ ವಿರುದ್ಧ ವೋಟ್ ಮಾಡಿರುವ 8% ಭಕ್ತರಿಗೆ ಹಾಗೂ ವೋಟಿನಲ್ಲಿ ಭಾಗವಹಿಸದಿರುವ 50% (ಐದು ಲಕ್ಷ) ಭಕ್ತರಿಗೆ, ಅಂದರೆ ಒಟ್ಟು ಮೋದಿ ವಿರುದ್ಧವಿರುವ 58% ಭಕ್ತರಿಗೆ, ಅವರು ತಮ್ಮ ಕುರುಡು ಭಕ್ತಿಯಿಂದ ಹೊರಬಂದಿರುವುದಕ್ಕೆ ಅಭಿನಂದನೆಗಳು. ಅವರಿಗೆ ಕವಿದಿದ್ದ ಅಚ್ಛೆ ದಿನ್ ಮಂಕು ಬಿಟ್ಟಿರುವುದು ಒಂದು ಉತ್ತಮ ಬೆಳವಣಿಗೆ. ಆದರೆ ಇವರೂ ದೇಶದ್ರೋಹಿ ಎಂಬ ಬಿರುದಿಗೆ ಮಾತ್ರ ಈಗಲೇ ಸಿದ್ಧವಾಗಿರಬೇಕು ಅಷ್ಟೇ.

ಬಿಜೆಪಿ ಪಕ್ಷವು ಸೀ-ವೋಟರ್ ಎಂಬ ಸಮೀಕ್ಷಾ ಸಂಸ್ಥೆಗೆ ಭಾರಿ ಹಣ ಕೊಟ್ಟು ಅವರಿಂದ ತನ್ನ ಪರವಾಗಿ ಸಮೀಕ್ಷಾ ಫಲಿತಾಂಶ ತಯಾರಿಸಿಕೊಂಡು ಸ್ವ-ಪ್ರಶಂಸೆ ಮತ್ತು ಆತ್ಮರತಿಯಲ್ಲಿ ಮುಳುಗಿದೆ. ಈ ಸಮೀಕ್ಷೆಯ ಪ್ರಕಾರ ದೇಶದ 80% ಜನರು ನೋಟು ರದ್ಧತಿಯಿಂದ ಸಂತುಷ್ಟರಾಗಿರುವರಂತೆ. ಹಾಗಾದರೆ ದೇಶವಿಡೀ ಬ್ಯಾಂಕಿನೆದುರು ಸರತಿಯಲ್ಲಿ ನಿಂತು ಇಪ್ಪತ್ತು ದಿನಗಳಿಂದ ಮೋದಿಗೆ ಬಾಯಿಗೆ ಬಂದಂತೆ ಬಯ್ಯುತ್ತಿರುವ ಬಡವರು ಮತ್ತು ಮಧ್ಯಮ ವರ್ಗದವರು ವಿದೇಶಿಯರೇ?

- ಪಿ.ಮುಂಡಾಳ್ಳ,ಬಜಪೆ, ಈ ಮೇಲ್ ಮೂಲಕ



ಮೋದಿ ಮತ್ತು ನೋಟು

ನರೇಂದ್ರ ಮೋದಿ ರಾತ್ರೋರಾತ್ರಿ 500 ಮತ್ತು 1000 ರೂಪಾಯಿಗಳ ನೋಟುಗಳನ್ನು ರದ್ದು ಮಾಡಿದ್ದು ಕೆಲವು ದಿನಗಳ ಕಾಲ ದೇಶದ ಅರ್ಥ ವ್ಯವಸ್ಥೆಯು ತಲೆಕೆಳಗಾಗಲು ಕಾರಣವಾಯಿತು. ದೇಶದಲ್ಲಿ ಆಹಾರಧಾನ್ಯ ದಾಸ್ತಾನು ಇದ್ದುದರಿಂದ ಜನರ ಜೀವನ ಹೇಗೋ ನಡೆಯಿತು. ಆದರೆ ಕೆಲವು ಜನ ತಮ್ಮ ಹಣವನ್ನು ಬ್ಯಾಂಕಿನಿಂದ ಪಡೆಯಲು ಹೋಗಿ ಪ್ರಾಣತೆತ್ತರು. ಮುಂದಿನ ಒಳ್ಳೆಯ ದಿನಗಳಿಗಾಗಿ ಕೆಲವರಾದರೂ ಜೀವತ್ಯಾಗ ಅನಿವಾರ್ಯ ವೆಂಬಂತೆ ಕೆಲವು ನಿಶ್ಚಿತ ಮೂಲಗಳಿಂದ ಬಿತ್ತರಿಸಲಾಗುತ್ತಿದೆ.

ಈಗ ಚಲಾವಣೆಗೆ ತಂದಿರುವ ಹೊಸ 500 ರೂಪಾಯಿ ನೋಟಿನಲ್ಲಿ ಸುಮಾರು 9 ತಪ್ಪುಗಳು ಮತ್ತು 2000 ರೂಪಾಯಿ ನೋಟಿನಲ್ಲಿಯೂ ಕೆಲವು ತಪ್ಪುಗಳು ಕಾಣಿಸಿಕೊಂಡಿವೆ. ಭಾರತೀಯ ರಿಸರ್ವ್ ಬ್ಯಾಂಕ್ ಈ ತಪ್ಪುಗಳನ್ನು ಒಪ್ಪಿಕೊಂಡಿದ್ದು ಇದು ತನಗೆ ನೋಟು ರದ್ದಾಗುವ ಯಾವುದೇ ಮುನ್ಸೂಚನೆ ಇಲ್ಲದಿದ್ದರಿಂದ ಈಗ ತೀವ್ರಗತಿಯಲ್ಲಿ ಪ್ರಿಂಟ್ ಮಾಡಿದ್ದರಿಂದ ತಪ್ಪುಗಳಾಗಿವೆ ಎಂದು ಹೇಳುತ್ತಿದೆ. ತಪ್ಪಾಗಿರುವ ನೋಟುಗಳನ್ನೇ ಬಳಸಿ ಇಲ್ಲವೆ ತನಗೇ ವಾಪಸ್‌ಮಾಡಿ ಎಂದು ಜನರಿಗೆ ತನ್ನ ಇತಿಹಾಸದಲ್ಲೇ ಕಂಡರಿಯದ ಉವಾಚವನ್ನು ರಿಸರ್ವ್ ಬ್ಯಾಂಕ್ ಪ್ರಕಟಣೆಯಲ್ಲಿ ಹೊರಡಿಸಿದೆ. ನೋಟಿನಲ್ಲಿ ಇಂತಹ ಸ್ಥಿತಿ ಇದ್ದರೆ ನಕಲಿ ನೋಟುಗಳ ಚಲಾವಣೆಗೆ ಸುಲಭ ದಾರಿ ಮಾಡಿಕೊಡುತ್ತದೆಂದು ಹೆಸರಾಂತ ವಕೀಲ ಮತ್ತು ರಾಜಕೀಯ ಹೋರಾಟಗಾರ ಪ್ರಶಾಂತ್ ಭೂಷಣ್ ಹೇಳುತ್ತಿದ್ದಾರೆ. ಮಾಜಿ ಪ್ರಧಾನಿ ಮತ್ತು ದೇಶದ ಪ್ರಮುಖ ಅರ್ಥಶಾಸ್ತ್ರಜ್ಞರೂ ಆಗಿರುವ ಮನಮೋಹನ ಸಿಂಗ್ ಸಂಸತ್ತಿನಲ್ಲಿ ಈ ರೀತಿ ಡೀಮಾನಿಟೈಸೇಶನ್ ವ್ಯವಸ್ಥಿತ ಲೂಟಿಗೆ ಅವಕಾಶ ಮತ್ತು ಜಾರಿಯಲ್ಲಿರುವ ದೇಶದ ಕಾನೂನಿನ ಉಲ್ಲಂಘನೆಯೂ ಆಗುತ್ತದೆಂದೂ ಇದರ ಪರಿಣಾಮ ದೇಶ ತನ್ನ ಉತ್ಪಾದನೆಯಲ್ಲಿ ಕುಂಠಿತಗೊಂಡು ದಿವಾಳಿ ಅಂಚಿಗೆ ತಳ್ಳಲ್ಪಡುತ್ತದೆಂದೂ ಎಚ್ಚರಿಸಿದ್ದಾರೆ.

ಅನಕ್ಷರಸ್ಥರು ಮತ್ತು ಗ್ರಾಮೀಣ ಜನರೇ ಹೆಚ್ಚಾಗಿರುವ ನಮ್ಮ ದೇಶದಲ್ಲಿ ವ್ಯವಹಾರವನ್ನು ನಗದಲ್ಲದ ರೂಪದಲ್ಲಿ ಕಂಪ್ಯೂಟರ್‌ಗಳನ್ನೊಳಗೊಂಡ ಬ್ಯಾಂಕಿನೊಂದಿಗೆ ವ್ಯವಹರಿಸಿ ಎಂದರೆ ಜನರಿಗೆ "ನೀರಿಳಿಯದ ಗಂಟಲೊಳ್ ಕಡುಬಂ ತುರುಕಿ"ದ್ದಾಂತಗುತ್ತದೆ. ಸದ್ಯದ ಪರಿಹಾರವೆಂದರೆ ಈ ಹಿಂದಿನ ನೋಟುಗಳು ಸೂಕ್ತವಾಗಿರುವುದರಿಂದ ಮತ್ತು ಇವು ಇನ್ನೂ ದಾಸ್ತಾನು ಆಗುತ್ತಿರುವುದರಿಂದ ಇವುಗಳನ್ನೇ ಮತ್ತೆ ಮುಂದುವರಿಸುವುದು ಮತ್ತು ಈಗ ನ್ಯೂನತೆಯುಳ್ಳ ಮುದ್ರಣವಾಗಿರುವ ನೋಟುಗಳನ್ನೇ ರದ್ದು ಮಾಡುವುದೇ ಸೂಕ್ತವೆನಿಸುತ್ತದೆ. ಇಲ್ಲವೆಂದರೆ ಈ ತುಘಲಕ್ ಮೋದಿ ಮತ್ತು ಇವರ ಗುಂಪು ತಾವು ಅಧಿಕಾರದಿಂದ ಕೆಳಕ್ಕೆ ಇಳಿಯುವುದರೊಳಗೆ ನಮ್ಮ ದೇಶವನ್ನು ಆಹಾರಬಟ್ಟೆಗಾಗಿ ಪರದಾಡುತ್ತಿರುವ ಸೋಮಾಲಿಯ ದೇಶವನ್ನಾಗಿ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.

- ಹೆಚ್.ಕೆ.ಈರಪ್ಪ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 14-12-2016 RNI NO. KARKAN200

'ಟಗರು' ಸ್ಟೈಲ್

ದುನಿಯಾ ಸೂರಿ ನಿರ್ದೇಶನದ 'ಟಗರು' ಚಿತ್ರದಲ್ಲಿ ಶಿವರಾಜ್‌ಕುಮಾರ್ ಹೊಸ ಬಗೆಯ ಪಾತ್ರ ಮಾಡುತ್ತಿದ್ದಾರೆ. ಈ ಚಿತ್ರಕ್ಕಾಗಿ ಶಿವರಾಜ್‌ಕುಮಾರ್ ಸಾಕಷ್ಟು ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದಾರೆ. ಶಕ್ತಿ ಸಂಕೇತ ಅನ್ನುವಂತೆ ಚಿತ್ರಕ್ಕೆ ಟಗರು ಎಂದು ಹೆಸರಿಟ್ಟಿರುವ ನಿರ್ದೇಶಕರು, ಸಿನಿಮಾ ನಾಯಕನು ಟಗರಿನಷ್ಟೇ ಗಟ್ಟಿಯಾಗಿ ಇರಬೇಕಾದ್ದರಿಂದ ಸಾಕಷ್ಟು ಕಸರತ್ತನ್ನೂ ಮಾಡಿಸಿದ್ದಾರಂತೆ.

ಈ ಚಿತ್ರಕ್ಕಾಗಿ ಶಿವರಾಜ್‌ಕುಮಾರ್ ದೇಹ ಹುರಿಗೊಳಿಸಿಕೊಂಡಿದ್ದಾರೆ. ಬಾಡಿಬಿಲ್ಡ್ ಕೂಡ ಮಾಡಿದ್ದಾರೆ. ಅಲ್ಲದೇ ಮೊನ್ನೆಯಷ್ಟೇ ತಮ್ಮ ಹೇರ್‌ಸ್ಟೈಲ್ ಕೂಡ ಬದಲಾಯಿಸಿದ್ದಾರೆ. ಈ ಸ್ಟೈಲ್ ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಸುದೀಪ್ ಅವರ 'ಹೆಬ್ಬುಲಿ' ಚಿತ್ರದ ಹೇರ್‌ಸ್ಟೈಲ್‌ನೊಂದಿಗೆ ಇದು ಈಗ ಕಾಂಪಿಟ್ ಮಾಡುತ್ತಿದೆ. ಸದ್ಯ ಎರಡನೇ ಹಂತದ ಶೂಟಿಂಗ್ ನಡೆಯುತ್ತಿದ್ದು, ಪ್ರಮುಖವಾದ ದೃಶ್ಯಗಳನ್ನು ಶೂಟ್ ಮಾಡುತ್ತಿದ್ದಾರಂತೆ ನಿರ್ದೇಶಕರು.

ಶಿವರಾಜ್‌ಕುಮಾರ್ ಮತ್ತು ಸೂರಿ ಕಾಂಬಿನೇಷನ್‌ನ ಚಿತ್ರಗಳು ಈಗಾಗಲೇ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಲ್ಲದೇ ಹೊಸ ರೀತಿಯ ಕ್ಯಾರೆಕ್ಟರ್ ಅನ್ನು ತಮ್ಮ ಚಿತ್ರದಲ್ಲಿ ಸೃಷ್ಟಿ ಮಾಡಿರುತ್ತಾರೆ ಸೂರಿ. ಹಾಗಾಗಿ 'ಟಗರು' ಕೂಡ ಸಾಕಷ್ಟು ಕುತೂಹಲ ಮೂಡಿಸಿದೆ.

ಯಶಸ್ವಿ ತಾರಾ ಜೋಡಿ ಮದುವೆ



ಯಶಸ್ವಿ ತಾರಾ ಜೋಡಿ ಯಶ್ ಮತ್ತು ರಾಧಿಕಾ ಪಂಡಿತ್ ಮದುವೆ ಕಾರ್ಯಕ್ರಮ ಮೂರು ದಿನ ನಡೆಯಲಿದೆ. ಡಿ.9ಕ್ಕೆ ಮದುವೆ. 10ನೇ ತಾರೀಖು ಸಿಲಿಬ್ರಿಟಿಗಳಿಗಾಗಿ ಆರತಕ್ಷತೆ ಮತ್ತು 11ರಂದು ಅಭಿಮಾನಿಗಳಿಗಾಗಿಯೇ ಸ್ಪೆಷಲ್ ರಿಸೆಪ್ಷನ್ ಹಮ್ಮಿಕೊಂಡಿದೆ ಈ ಜೋಡಿ. ಬೆಂಗಳೂರಿನ ಅರಮನೆ ಮೈದಾನದಲ್ಲಿ ಆರತಕ್ಷತೆ ಕಾರ್ಯ ನಡೆಯಲಿದ್ದು, ಸ್ಟಾರ್ ಹೋಟೆಲ್‌ನಲ್ಲಿ ಈ ದಂಪತಿಗಳು ಹಸೆಮಣೆ ತುಳಿಯಲಿದ್ದಾರೆ.

ಈಗಾಗಲೇ ಕಲಾನಿರ್ದೇಶಕ ಅರುಣ್ ಸಾಗರ್ ಮತ್ತು ಅವರ ತಂಡ ಮದುವೆಗಾಗಿ ಸೆಟ್ ಹಾಕುತ್ತಿದೆ. ಈ ನವ ಜೋಡಿಗಳು ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಂಚುವುದರಲ್ಲಿ ಬಿಜಿ ಆಗಿದ್ದಾರೆ.

ಆಮಂತ್ರಣ ಪತ್ರಿಕೆಯಲ್ಲಿ ವಿಶೇಷತೆ ತೋರಿದ್ದಾರೆ ಯಶ್. ಕರೆಯೋಲೆಯ ಜತೆಗೆ ಸಂಪಿಗೆ ಗಿಡವೊಂದನ್ನು ನೀಡುವ ಮೂಲಕ ಪರಿಸರ ಕಾಳಜಿ ಮೆರೆದಿದ್ದಾರೆ. ಸುದೀಪ್, ಗಣೇಶ್, ಶಿವರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಸ್ಯಾಂಡಲ್‌ವುಡ್‌ನ ಬಹುತೇಕ ಕಲಾವಿದರಿಗೆ ಈಗಾಗಲೇ ಪತ್ರಿಕೆ ತಲುಪಿದೆ.

ಟಾಲಿವುಡ್‌ನಲ್ಲಿ ನಭಾ



'ವಜ್ರಕಾಯ' ಸಿನಿಮಾದಲ್ಲಿಯ ಪಟಾಕಾ ಪಾತ್ರದ ಮೂಲಕ ಗಮನ ಸೆಳೆದ ನಟಿ ನಭಾ ನಟೇಶ್ ಸದ್ದಿಲ್ಲದೇ ಟಾಲಿವುಡ್‌ಗೆ ಹಾರಿದ್ದಾರೆ. ರವಿಬಾಬು ನಿರ್ದೇಶನದ 'ಅದಿಗೋ' ಸಿನಿಮಾದಲ್ಲಿ ಇವರು ನಟಿಸಿದ್ದಾರೆ. ಚಿತ್ರದ ಬಹುತೇಕ ಶೂಟಿಂಗ್ ಮುಗಿದಿದ್ದು ಈಗ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ಇದರ ಜತೆಜತೆಗೆ ಕನ್ನಡದ 'ಲೀ' ಚಿತ್ರದಲ್ಲೂ ನಭಾ ವಿಭಿನ್ನ ಪಾತ್ರ ಮಾಡಿದ್ದಾರೆ. ಇದು ಆಕ್ಷನ್ ಓರಿಯೆಂಟೆಡ್ ಚಿತ್ರ ಅನ್ನುವುದು ವಿಶೇಷ.

ಮೊದಲ ಚಿತ್ರದಲ್ಲಿ ಲೇಡಿ ಡಾನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ನಭಾ ಟಾಲಿವುಡ್ ಚಿತ್ರದಲ್ಲಿ ಪ್ರೇಮಿಯಾಗಿ ಮಿಂಚಲಿದ್ದಾರೆ. ಕನ್ನಡದ 'ಲೀ' ಸಿನಿಮಾದಲ್ಲಿ ಹಳ್ಳಿ ಹುಡುಗಿಯ ಪಾತ್ರದಲ್ಲಿ ಅಚ್ಚರಿ ಮೂಡಿಸಿದ್ದಾರೆ. "ಮೊದಲ ಸಿನಿಮಾದಲ್ಲೇ ನನ್ನನ್ನು ಪ್ರೇಕ್ಷಕರು ಒಪ್ಪಿಕೊಂಡರು. ಅದು ರಗಡ್ ಪಾತ್ರವಾಗಿದ್ದರಿಂದ ಎಲ್ಲರಿಗೂ ಇಷ್ಟವಾಗಿತ್ತು. ಆನಂತರ ನನಗೆ ಸಿಕ್ಕಿರುವ ಎರಡೂ ಪಾತ್ರಗಳು ವಿಶೇಷವಾಗಿವೆ. ಅವುಗಳಿಗಾಗಿ ನಾನು ಸಾಕಷ್ಟು ತಯಾರಿ ಕೂಡ ಮಾಡಿಕೊಂಡಿದ್ದೇನೆ" ಅಂತಾರೆ ನಭಾ.

ಈ ಮಧ್ಯೆ ಅವರು ಮತ್ತೊಂದು ಹೊಸ ಚಿತ್ರವನ್ನು ಒಪ್ಪಿಕೊಂಡಿದ್ದಾರಂತೆ. ಅದು ಕೂಡ ಸ್ಟಾರ್ ನಟರ ಸಿನಿಮಾವಂತೆ. ಸದ್ಯಕ್ಕೆ ಆ ಸಿನಿಮಾದ ಬಗ್ಗೆ ಏನೂ ಹೇಳಲ್ಲ ಅನ್ನುವುದು ನಭಾ ಮಾತು.

ಪುನೀತ್ ಜತೆ ರವಿ ಕಿಶನ್



'ಹೆಬ್ಬುಲಿ' ಚಿತ್ರದಲ್ಲಿ ಅಬ್ಬರಿಸಿರುವ ಬಾಲಿವುಡ್ ಮತ್ತು ಭೋಜಪುರಿ ನಟ ರವಿ ಕಿಶನ್, ಈಗ ಕನ್ನಡದಲ್ಲಿ ಮತ್ತೊಂದು ಚಿತ್ರವನ್ನು ಒಪ್ಪಿಕೊಂಡಿದ್ದಾರೆ. ಈ ಬಾರಿ ಅವರು ಪುನೀತ್ ರಾಜ್‌ಕುಮಾರ್ ನಟನೆಯ ಹೊಸ ಸಿನಿಮಾದಲ್ಲಿ ವಿಭಿನ್ನ ಪಾತ್ರ ನಿರ್ವಹಿಸಲಿದ್ದಾರೆ. ಈ ಚಿತ್ರವನ್ನು ಎ.ಹರ್ಷ ನಿರ್ದೇಶಿಸಲಿದ್ದು ಇದೊಂದು ರಿಮೇಕ್ ಚಿತ್ರವಾಗಿದೆ.

'ಹೆಬ್ಬುಲಿ' ಚಿತ್ರದಲ್ಲಿ ಬಹುಮುಖ್ಯ ಪಾತ್ರ ಮಾಡಿರುವ ರವಿ ಕಿಶನ್, ಸಿಕ್ಕ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರಂತೆ. ಹಾಗಾಗಿ ಈ ಸಿನಿಮಾದಲ್ಲಿ ಅವರಿಗೆ ಅವಕಾಶ ನೀಡಿದ್ದಾರಂತೆ ನಿರ್ದೇಶಕರು. "ಇಲ್ಲಿ ನನ್ನದು ಖಳನಾಯಕನ ಪಾತ್ರ. ಪುನೀತ್ ಅವರ ಎದುರು ನಿಂತು ನಟಿಸುವುದು ನನಗೊಂದು ಹೆಮ್ಮೆ. ಅವರ ಬಗ್ಗೆ ಕೇಳಿದ್ದೇನೆ. ಅವರ ಸಿನಿಮಾ ನೋಡಿದ್ದೇನೆ. ಕನ್ನಡಿಗರ ಪ್ರೀತಿಯನ್ನು ನಾನು ಯಾವತ್ತೂ ಮರೆಯಲ್ಲ" ಅಂತಾರೆ ರವಿ ಕಿಶನ್.

ಅಂದಹಾಗೆ ಈ ಚಿತ್ರವನ್ನು ಎಂ.ಎನ್.ಕುಮಾರ್ ಮತ್ತು ಜಯಶ್ರೀದೇವಿ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಚಿತ್ರಕ್ಕೆ ಇರಲಿದ್ದು, ಮುಂದಿನ ವರ್ಷದಲ್ಲಿ ಚಿತ್ರ ಸೆಟ್ಟೇರಲಿದೆಯಂತೆ.

ಗೋಲ್ಡನ್‌ಸ್ಟಾರ್ ಜತೆ ಆ



ಮೊನ್ನೆಯಷ್ಟೇ ಶಿವರಾಜ್‌ಕುಮಾರ್ ನಟನೆ
ಚಿತ್ರಕ್ಕೆ ಸಹಿ ಮಾಡಿದ್ದ ಆಶಿಕಾ, ಈಗ ಗೋ
ಗಣೇಶ್ ಚಿತ್ರಕ್ಕೂ ನಾಯಕಿಯಾಗಿ ಆಯ್
ಒಟ್ಟೊಟ್ಟಿಗೆ ಇಬ್ಬರು ಸ್ಟಾರ್ ನಟರ ಜತೆ ಕೆ
ಅವಕಾಶ ಇವರ ಪಾಲಾಗಿದೆ.

'ಕ್ರೇಜಿಬಾಯ್' ಚಿತ್ರ
ಸಿನಿಮಾ ರಂಗಕ್ಕೆ ಪ್ರವೇಶ
ಆಶಿಕಾ. ವರ್ಷದ ಹಿಂದೆಯ
ಆದ ಈ ಚಿತ್ರ ಬಾಕ್ಸ್
ಸದ್ದು ಮಾಡದೇ ಇದ್ದರೂ
ಅವಕಾಶಗಳು ಹುಡುಕಿಕೊಂಡು
'ಟಗರು' ಚಿತ್ರದಲ್ಲಿ ಇವರು ಶಿವರಾಜ್
ತಂಗಿಯಾಗಿ ನಟಿಸುತ್ತಿದ್ದರೆ, ಇನ್ನೂ ಹೆಸರಿಡ
ಚಿತ್ರದಲ್ಲಿ ನಾಯಕನ ಲವರ್ ಪಾತ್ರ ನಿರ್ವಹಿಸ
ಚಿತ್ರವು ಯೋಗರಾಜ್ ಭಟ್ ನಿರ್ದೇಶನದಲ್ಲಿ ಮ
ಸ್ವತಃ ಭಟ್ ಮತ್ತು ಗಣೇಶ್ ಚಿತ್ರಕ್ಕೆ ಹಣ ಹ

ಈ ಚಿತ್ರಕ್ಕೆ ಮೂವರು ನಾಯಕಿಯರು.
ಮತ್ತಿಬ್ಬರು ನಾಯಕಿಯರಿದ್ದು ಅವರ ಆಯ್ಕೆ ನ
ಈ ಇಬ್ಬರಲ್ಲಿ ಒಬ್ಬರು ಹೊಸಬರು ಇರಲಿದ್ದಾ
ನಿರ್ದೇಶಕರು. ಸಾಮಾನ್ಯವಾಗಿ ಯೋಗರಾ
ಸಿನಿಮಾಗಳಲ್ಲಿ ಮೂವರು ನಾಯಕಿಯರು ಇದ್ದ
ಅದು ಇಲ್ಲಿಯೂ ಮುಂದುವರೆದಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com